# ೧ನೇ ಭಾಗ.

## ಇತಿಹಾಸವು.

ಆರಂಭ ಕಾಲದ ಇತಿಹಾಸ.—ರಾಮನ ಕಾಲದಲ್ಲಿ ವಿಂಧ್ಯಾದ್ರಿಯಿಂದ ದಕ್ಷಿಣ ಸಮುದ್ರದ ವರೆಗೆ ಅಡವಿಯು ಹಬ್ಬಿತ್ತೆಂತಲೂ, ಆ ಅಡವಿಗೆ ದಂಡಕಾರಣ್ಯವೆನ್ನುತ್ತಿದ್ದರೆಂತಲೂ ರಾಮಾಯಣದಿಂದ ತಿಳಿಯುತ್ತದೆ. ಆದರೂ ದಂಡಕಾರಣ್ಯದಲ್ಲಿ ಉತ್ತರದಿಂದ ಬಂದ ಆರ್ಯ ಕುಲದ ಋಷಿಗಳೆಂಬ ತಪಸ್ವಿಗಳೂ ದಕ್ಷಿಣದಿಂದ, ಅಂದರೆ ಸಿಂಹಲ ದ್ವೀಪದಿಂದ, ಬಂದ ರಾಕ್ಷಸರೆಂಬ ನರಮಾಂಸಾಹಾರಿಗಳೂ, ವಾನರರೆಂಬ ಮೂಲ ನಿವಾಸಿಗಳೂ ಕೆಲ ಕೆಲವು ಸ್ಥಳಗಳಲ್ಲಿ ಇರುತ್ತಿದ್ದರು. ಋಷಿಗಳು ನೀರಿನ ಸಮೃದ್ಧಿಯುಳ್ಳಂಥ ರಮಣೀಯವಾದ ಏಕಾಂತ ವನಗಳಲ್ಲಿ ಗುಡುಸಲುಗಳನ್ನು ಕಟ್ಟಿ ಕೊಂಡು, ಫಲಮೂಲಗಳನ್ನು ತಿಂದು ತಪಶ್ಚರ್ಯದಲ್ಲಿ ಕಾಲಕ್ಷೇಪ ಮಾಡುವರು. ರಾಕ್ಷಸರು ಕ್ರೂರರು, ನರಮಾಂಸಕ್ಕೆ ಬಹಳ ಮೆಚ್ಚಿದವರು; ಇವರು ಋಷಿಗಳನ್ನೂ ವಾನರರನ್ನೂ ಬಹಳ ಪೀಡಿಸುತ್ತಿದ್ದರು; ಜನಸ್ಥಾನದಲ್ಲಿ, ಅಂದರೆ ನಾಶಿಕದ ಬಳಿಯಲ್ಲಿ ಇವರು ಮನೆ ಮಾರುಗಳನ್ನೂ ಗ್ರಾಮಗಳನ್ನೂ ಕಟ್ಟಿ ಕೊಂಡು ವಾಸಿಸುತ್ತಿದ್ದರು.

ವಾನರರು ಕರ್ನಾಟಕ ಶೀಮೆಯ ಮೂಲ ನಿವಾಸಿಗಳಾದ ದ್ರವಿಡರು. ಇವರಿಗೆ ಮನೆ ಮಾರುಗಳಿದ್ದಿಲ್ಲ; ಗವಿಗಳಲ್ಲಿಯೂ ಮರಗಳ ತೊರ್ರೆಗಳಲ್ಲಿಯೂ ಇವರು ವಾಸಿಸುವರು. ವನದಲ್ಲಿ ದೊರಿಯುವ ಫಲ ಮೂಲಾದಿಗಳೇ ಇವರ ಆಹಾರವು. ಇವರಿಗೆ ಬೆಂಕಿ ಬೇಕಾದರೆ ಕಟ್ಟಿಗೆಯ ಮೇಲೆ ಕಟ್ಟಿಗೆಯನ್ನು ತಿಕ್ಕಿ ಬೆಂಕಿಯನ್ನು ಮಾಡುವರು. ಆದರೂ ಇವರಲ್ಲಿ ಲಗ್ನದ ನಡಾವಳಿ ಇತ್ತು. ಸರಾಯಿಯನ್ನು (ಬಹುತರ ಈಚಲ ರಸವನ್ನು) ಇವರು ಬಹಳ ಕುಡಿಯುವರು. ಇವರ ಮೈಮೇಲೆ ಬಟ್ಟೆಗಳಿರುತ್ತಿದ್ದಿಲ್ಲ. ಇವರು ಮಾಂಸ ತಿನ್ನುತ್ತಿದ್ದಿಲ್ಲ.

ಈಗಿನ ಕರ್ನಾಟಕ ಶೀಮೆಯಲ್ಲಿ ಮತಂಗವನವೆಂಬ ವಿಶಾಲವಾದ ಅಡವಿ ಹಬ್ಬಿತ್ತು. ಅದರಲ್ಲಿ ಮತಂಗ, ಗಾಲವ, ಪರಶುರಾಮನ ತಂದೆಯಾದ ಜಮದಗ್ನಿ, ಮುಂತಾದ ಋಷಿಗಳು ವಾಸಿಸುತ್ತಿದ್ದರು. ಈ ವನದ ಪೂರ್ವ ಭಾಗದಲ್ಲಿ ಪಂಪಾಯೆಂಬ ಹೊಳೆಯಿಂದ ಆದ ಅದೇ ಹೆಸರಿನ ಬಹು ವಿಸ್ತಾರವಾದ ಸರೋವರದ ದಂಡೆಯಲ್ಲಿ ಋಷ್ಯಮೂಲಕವೆಂಬ ಪರ್ವತದ ಅಡವಿಯಲ್ಲಿ ಕಿಷ್ಕಿಂಧೆಯೆಂಬ ವಾನರರ ರಾಜಧಾನಿ ಇತ್ತು. ಆದರೆ ಈ ರಾಜಧಾನಿಯಲ್ಲಿ ವೊಂದು ಕೋಟೆಯ ಗೋಡೆ, ಅದರ ಸುತ್ತು ಮುತ್ತು ಕಂದಕ ಇಷ್ಟರ ಹೊರ್ತು ಬೇರೆ ಯೇನು ಇದ್ದಿಲ್ಲವೆಂದು ತೋರುತ್ತದೆ. ಕಿಷ್ಕಿಂಧೆಯೇ ಈಗಿನ ಹಂಪೀ ಕ್ಷೇತ್ರವಾಗಿರುತ್ತದೆ. ತುಂಗಭದ್ರೆಗೇ ಆ ಕಾಲದಲ್ಲಿ ಪಂಪಾಯೆಂಬ ಹೆಸರಿತ್ತು. ಈ ಹೆಸರಿನಿಂದಲೇ "ಹಂಪಿ" ಯೆಂಬ ಹೆಸರು ಬಂದದೆ. ಹಂಪಿಯ ಹತ್ತರ

ತುಂಗಭದ್ರೆಯ ಪಾತ್ರೆಯನ್ನು ನೋಡಿದರೆ ಅಲ್ಲಿ ಬುನಾದಿಯಲ್ಲಿ ದೊಡ್ಡದೊಂದು ಸರೋವರವಿದ್ದದ್ದರ ಕುರುಹು ಈಗ್ಯೂ ಕಾಣಿಸುತ್ತದೆ.

ಮತಂಗಾಶ್ರಮದಲ್ಲಿ, ಅಂದರೆ ಹಂಪಿಯ ಹತ್ತರ, ಶಬರಿ ಯೆಂಬ ಹೆಂಗಸು ರಾಮನಿಗಾಗಿ ಬೋರೇ ಕಾಯಿಗಳನ್ನು ಆರಿಸಿಟ್ಟ ಕಥೆಯು ರಾಮಾಯಣದಲ್ಲಿ ಇರುತ್ತದೆ. ಅದರಿಂದ ಶಬರರೆಂದರೆ ಭಿಲ್ಲರು ಆ ಕಾಲಕ್ಕೆ ಹಂಪಿಯ ಹತ್ತರ ವಾಸಿಸುತ್ತಿದ್ದರೆಂದು ಅನುಮಾನವಾಗುತ್ತದೆ. ಗೋಕರ್ಣದ ಮಹಾಬಳೇಶ್ವರವೆಂಬ ಲಿಂಗವು ರಾವಣನಿಂದ ಸ್ಥಾಪಿಸಲ್ಪಟ್ಟಿತೆಂದು ದಂತ ಕಥೆಯುಂಟು. ಈ ದೇವಸ್ಥಾನದ ಉಲ್ಲೇಖವು ರಾಮಾಯಣದಲ್ಲಿ ಇರುತ್ತದೆ. ರಾಮನು ಕ್ರಿ. ಶ. ಪೂರ್ವದಲ್ಲಿ ೧೬ನೇ ಶತಕದಲ್ಲಿ ಇದ್ದನೆಂದು ಅನುಮಾನವದೆ.

ಕೌರವ ಪಾಂಡವರ ಕಾಲದಲ್ಲಿ ಕರ್ನಾಟಕದೊಳಗೆ ಹಲ ಕೆಲವು ರಾಜ್ಯಗಳು ನೆಲೆಗೊಂಡಿದ್ದವು. ಕರವೀರಪುರದಲ್ಲಿ ಶೃಗಾಲವಾಸುದೇವನೆಂಬ ಅರಸು ಆಳುತ್ತಿದ್ದನು. ಕೃಷ್ಣನು ಅವನನ್ನು ಕೊಂದು ಅವನ ರಾಜ್ಯಕ್ಕೆ ಶೇರಿದ ಗೋಮಂತಕ ಪ್ರಾಂತವನ್ನು ತಕ್ಕೊಂಡನು. ಕರವೀರವು ಗೋಮಂತಕವೆಂಬ ಪರ್ವತದ ಬುಡದಲ್ಲಿ ಇತ್ತೆಂದು ಭಾರತದಲ್ಲಿ ಹೇಳಿರುತ್ತದೆ. ಮತ್ಸ್ಯಪುರದಲ್ಲಿ ವಿರಾಟನೆಂಬ ಅರಸು ಆಳುತ್ತಿದ್ದನು. ಹಾನಗಲ್ಲಿಗೆ ವಿರಾಟನ ಕೋಟೆ ಯೆಂಬ ಹೆಸರು ಶಾಲಿವಾಹನ ಶಕದ ೧೦ನೇ ಶತಕದಲ್ಲಿ ನಡಿಯುತ್ತಿತ್ತೆಂದು ಆ ಕಾಲದ ಶಿಲಾಲಿಪಿಗಳಿಂದ ತಿಳಿಯುತ್ತದೆ. ಹಾನಗಲ್ಲಿನಲ್ಲಿ ಹಳೆ ಕೋಟೆಯನ್ನೂ ನಾಟ್ಯ ಶಾಲೆಯ ಸ್ಥಳವನ್ನೂ ಈಗ್ಯೂ ತೋರಿಸುತ್ತಾರೆ. ವಿರಾಟನ ರಾಜ್ಯದ ದಕ್ಷಿಣದಲ್ಲಿ ಅದಕ್ಕೆ ಹೊಂದಿ ಸುಶರ್ಮನೆಂಬ ಅರಸನ ತ್ರಿಗರ್ತ ದೇಶದ ರಾಜ್ಯವಿತ್ತೆಂದು ವಿರಾಟ ಪರ್ವದಲ್ಲಿ ಹೇಳಿರುತ್ತದೆ. ತ್ರಿವರ್ಗವೆಂದರೆ, ಮೂರು ದಿಕ್ಕುಗಳಲ್ಲಿ ತಗ್ಗುಗಳುಳ್ಳ ಶೀಮೆ, ಯೆಂಬ ಅರ್ಥವು ಮೈಸೂರು ಶೀಮೆಗೆ ಹೊಂದುತ್ತದೆ. ಭಾಗವತದಲ್ಲಿ ಬಲರಾಮನ ತೀರ್ಥ ಯಾತ್ರೆಯ ವರ್ಣನೆಯಲ್ಲಿ ಅವನು ರಾಮೇಶ್ವರದಿಂದ ತ್ರಿಗರ್ತದೇಶದಲ್ಲಿ ಹಾದು ಗೋಕರ್ಣಕ್ಕೆ ಹೋದನೆಂದು ಹೇಳಿರುತ್ತದೆ. ಆದ್ದರಿಂದ ಮೈಸೂರು ಶೀಮೆಯೇ ತ್ರಿವರ್ಗ ದೇಶವೆಂದು ನಿಶ್ಚಯವಾಗುತ್ತದೆ. ತ್ರಿವರ್ಗದ ಅರಸನಾದ ಸುಶರ್ಮನ ಬಳಿಯಲ್ಲಿ ನಿವಾತಕವಚರೆಂದರೆ ಗಾಳಿ ಶೇರದಂಥ ಪೋಷಾಗುಳ್ಳ ದಂಡಾಳುಗಳು ಇದ್ದರೆಂದು ಭಾರತದಲ್ಲಿ ಹೇಳಿರುತ್ತದೆ. ಇಜಿಪ್ತ ದೇಶದ ಗ್ರಂಥಕರ್ತರು ಬಹು ಬುನಾದಿಯ ಕಾಲದಲ್ಲಿ ಆ ದೇಶದವರು ದಕ್ಷಿಣ ಹಿಂದುಸ್ತಾನಕ್ಕೆ ಬರುತ್ತಿದ್ದರೆಂದು ಬರಿದಿದ್ದಾರೆ. ಆದ್ದರಿಂದ ಸುಶರ್ಮನ ನಿವಾತಕವಚರು ಇಜಿಪ್ತ ದೇಶದ ದಂಡಾಳುಗಳೆಂದು ಅನುಮಾನವಾಗುತ್ತದೆ. ಒಟ್ಟಿಗೆ ಕೌರವ ಪಾಂಡವರ ಕಾಲದಲ್ಲಿ, ಅಂದರೆ ಕ್ರಿ. ಶ. ಪೂರ್ವದಲ್ಲಿ ೧೪ನೇ ಶತಕದ ಸುಮಾರಿನಲ್ಲಿ, ಗೋಮಂತಕ, ಮತ್ಸ್ಯ, ತ್ರಿವರ್ಗ, ಈ ಮೂರು ರಾಷ್ಟ್ರಗಳು ಕರ್ನಾಟಕದಲ್ಲಿ ಇದ್ದವೆಂದು ಸ್ಪಷ್ಟವಾಗುತ್ತದೆ.

ಪಾಂಡವರು ಅಜ್ಞಾತವಾಸವನ್ನು ಮುಗಿಸಿದ ಬಳಿಕ ಉಪಪ್ಲಾವ್ಯವೆಂಬ ನಗರದಲ್ಲಿ ಹೋಗಿ ನಿಂತರೆಂದು ಮಹಾಭಾರತವು ಹೇಳುತ್ತದೆ. ಆನೇಗುಂದಿಗೆ ಬುನಾದಿಯಲ್ಲಿ ದಕ್ಷಿಣ ಹಸ್ತಿನಾವತಿ ಯೆಂಬ ಹೆಸರಿತ್ತೆಂದು ಆ ಕಾಲದ ಶಿಲಾಲಿಪಿಗಳಿಂದ ತಿಳಿಯುತ್ತದೆ.

ಆನೇಗುಂದಿಯಲ್ಲಿ ಪಾಂಡವರ ವಂಶದ ಅರಸರು ಬಹು ದಿವಸ ಆಳಿದರು. ಅವರಲ್ಲಿ ಕೆಲವರು ಬರಿಸಿದ ಶಿಲಾಲಿಪಿಗಳಲ್ಲಿ ಯುಧಿಷ್ಠಿರ ಶಕ ಕಾಲವು ಬರಿಯಲ್ಪಟ್ಟಿದೆ. ಇದಲ್ಲದೆ ದಕ್ಷಿಣ ದೇಶದಲ್ಲಿ ಕಾಂಚಿ, ಮಧುರೆ, ಮುಂತಾದ ಕಡೆಯಲ್ಲಿ ಆಳಿದ ರಾಜ ವಂಶಗಳ ಉಗಮವು ಪಾಂಡವರಿಂದಲೇ ಆಯಿತೆಂದು ಅವರವರ ಇತಿಹಾಸದಿಂದ ತಿಳಿಯುತ್ತದೆ. ಆದ್ದರಿಂದ ಆನೇಗುಂದಿಯೇ ಉಪಪ್ಲಾವ್ಯವೆಂದು ಅನುಮಾನ ಮಾಡಲಿಕ್ಕೆ ಆಸ್ಪದವಾಗುತ್ತದೆ.

ಪರಶುರಾಮನು ಕೊಂಕಣದಲ್ಲಿ ಸಾರಸ್ವತರೆಂಬ ಬ್ರಾಹ್ಮಣರನ್ನು ಉತ್ತರದಿಂದ ತಂದು ಇಟ್ಟ ವರ್ತಮಾನವು ಪಾಂಡವರ ಕಾಲದಲ್ಲಿ, ಇಲ್ಲವೆ ಅದಕ್ಕೂ ಪೂರ್ವದಲ್ಲಿ ವರ್ತಿಸಿರ ಬಹುದೆಂದು ತೋರುತ್ತದೆ. ಪರಶುರಾಮನು ಮೀನ ಬಲೆಗಾರರಿಗೆ ಬ್ರಾಹ್ಮಣತ್ವವನ್ನು ಕೊಟ್ಟನೆಂತಲೂ ಕಥೆಯುಂಟು. ಮಲಿಯಾಳದಲ್ಲಿ ಇರುವ ನಂಬುರೀ ಬ್ರಾಹ್ಮಣರೇ ಈ ಬ್ರಾಹ್ಮಣರೆಂದು ಹೇಳುತ್ತಾರೆ.

ಪಾಂಡವರ ಕಾಲದಿಂದ ಶಾಲಿವಾಹನ ಶಕದ ಆರಂಭದ ವರೆಗೆ ಕರ್ನಾಟಕದ ಇತಿಹಾಸವು ತಿಳಿದಿಲ್ಲ. ಈ ಅವಧಿಯಲ್ಲಿ ಕರ್ನಾಟಕಕ್ಕೆ ಕುಂತಳ, ನಾಟ, ಲಾಟ, ಮುಂತಾದ ಹೆಸರುಗಳುಂಟಾಗಿದ್ದವು. ಕುಂತಳ ದೇಶದಲ್ಲಿ ಚಂದ್ರಹಾಸನೆಂಬ ಅರಸು ಆಳಿದ ಕಥೆಯು ಪುರಾಣದಲ್ಲಿ ಪ್ರಸಿದ್ಧವದೆ. ಪಶ್ಚಿಮ ಸಮುದ್ರತೀರದಲ್ಲಿ ಕೆಲ ಕೆಲವರ ಬಳಿಯಲ್ಲಿ ರಾಜ ಪದ್ಧತಿಗಳೆಂಬ ಗ್ರಂಥಗಳಿರುತ್ತವೆ. ಅವುಗಳಿಂದ ಆನೇಗುಂದಿಯಲ್ಲಿ ಬರ್ಬರರೆಂಬ ಅರಸರು (ಇಜಿಪ್ತದಿಂದ ಬಂದವರು) ಶಾಲಿವಾಹನನ ಪೂರ್ವದಲ್ಲಿ ಸುಮಾರು ೪೦೦ ವರ್ಷ ಆಳಿದರೆಂತಲೂ, ಅವರನ್ನು ಕದಂಬರೆಂಬ ಅರಸರು ಮುರಿದರೆಂತಲೂ ತಿಳಿಯುತ್ತದೆ (ಬುಕ್ಯಾನನ್) ಇಜಿಪ್ತ, ಗ್ರೀಸ ದೇಶಗಳ ವ್ಯಾಪಾರಸ್ಥರು ಕರ್ನಾಟಕಕ್ಕೆ ಆಗಾಗ್ಗೆ ಬರುತ್ತಿದ್ದರೆಂದು ಹಿಂದೆ ತಿಳಿಸಿದ್ದೇವೆ.

ಇಜಿಪ್ತದ ತಾಲೆಮಿಯೆಂಬ ಗ್ರಂಥಕರ್ತನು ಕ್ರಿ. ಶಕದ ೧೫೦ನೇ ವರ್ಷ ಇದ್ದನು. ಆ ಕಾಲದಲ್ಲಿ ಹಿಂದುಸ್ತಾನದ ಪಶ್ಚಿಮ ಸಮುದ್ರತೀರಕ್ಕೆ ಆ ದೇಶದಿಂದ ಬರುತ್ತಿದ್ದ ವ್ಯಾಪಾರಸ್ಥನನ್ನು ಕೇಳಿ "ಆರ್ಯಕ" ವೆಂಬ ದೇಶದೊಳಗಿನ ೫ ಗ್ರಾಮಗಳ ಹೆಸರುಗಳನ್ನು ಬರಿದು ಇಟ್ಟಿದ್ದಾನೆ. ಅವು— "ಬದಿಯಾಮೆಯಿ," "ಇಂಡಿ," "ಕಲ್ಲಿಗೇರಿ," "ಮೊದೊಗುಲ್ಲ," "ಪೆತಿರಗಲ." ಇವು ಕ್ರಮವಾಗಿ ಈಗಿನ ಬಾದಾಮಿ, ಇಂಡಿ, ಕಲಕೇರಿ, ಮುದಗಲ್ಲು, ಪಟ್ಟದಕಲ್ಲು, ಈ ೫ ಗ್ರಾಮಗಳ ಹೆಸರುಗಳಿರುತ್ತವೆಂದು ತರ್ಕವದೆ. ಬದಿಯಾಮೆಯಿ ಯೆಂಬ ಗ್ರಾಮವು "ತಥಿಲ್ಲ" ವೆಂಬ ರಾಜಧಾನಿಯ ಕೆಳಗೆ ಇತ್ತೆಂದು ತಾಲೆಮಿಯು ಬರಿದಿದ್ದಾನೆ; ಮತ್ತೂ ಮೊದೊಗಲ್ಲವು "ಅಮಿರಿಕ ಆರ್ಯಕ" ಯೆಂಬ ದೇಶದ ಮೇರೆಯಲ್ಲಿ ಇತ್ತೆಂದು ಬರಿದಿದ್ದಾನೆ. "ತಥಿಲ್," "ಅಮಿರಿಕ," ಈ ಯೆರಡು ಹೆಸರುಗಳ ಸಂಬಂಧವು ಇನ್ನೂ ವೊಳಿತಾಗಿ ತಿಳಿದಿಲ್ಲ.

ಆದರೆ ಕರ್ನಾಟಕದ ಅವಿಚ್ಛಿನ್ನವಾದ ನಿಜ ಇತಿಹಾಸದ ಆರಂಭವು ಕ್ರಿ. ಶಕದ ೫ನೇ ಶತಕದಿಂದ ಆರಂಭವಾಗುತ್ತದೆ. ೫ನೇ ಶತಕದಿಂದ ೧೪ನೇ ಶತಕದಲ್ಲಿ ಮುಸ

ಲ್ಮಾನರು ದಕ್ಷಿಣ ದೇಶವನ್ನು ಆಕ್ರಮಿಸಿದ ವರೆಗೆ ೮೦೦ ವರ್ಷಗಳ ಇತಿಹಾಸವನ್ನು ಮೆ. ಫ್ಲೀಟ ಸಾಹೇಬರು ಶಿಲಾಲಿಪಿ, ತಾಮ್ರ ಪಟಗಳ ಆಧಾರದಿಂದ ವೊಳಗಡೆಯಲ್ಲಿ "ಮುಂಬಯಿ ಇಲಾಖೆಯೊಳಗಿನ ಕನ್ನಡ ಜಿಲ್ಲೆಗಳ ರಾಜ ವಂಶಗಳು" ಯೆಂಬ ಇಂಗ್ಲಿಷ ಪುಸ್ತಕದಲ್ಲಿ ಪ್ರಸಿದ್ಧ ಮಾಡಿದ್ದಾರೆ.

ಕ್ರಿಸ್ತೀ ಶಕದ ಆರಂಭದಿಂದೀಚೆಯಲ್ಲಿ ಕರ್ನಾಟಕದಲ್ಲಿ ನಳ, ಮೌರ್ಯ, ಕದಂಬ, ಮಾತಂಗ, ಕಟ್ಟಚ್ಚುರಿ, ಮುಂತಾದ ಹೆಸರಿನ ಅರಸರು ಬೇರೆ ಬೇರೆ ಕಡೆಯಲ್ಲಿ ಆಳಿದರು. ಆದರೆ ಅವರ ಇತಿಹಾಸಗಳು ಸಾದ್ಯಂತವಾಗಿ ತಿಳಿದಿಲ್ಲ. ಬನವಾಸಿಯ ಮಧುಕೇಶ್ವರನ ಗುಡಿಯಲ್ಲಿ ಪಾಲೀ ಭಾಷೆಯಲ್ಲಿ ಬರಿದದ್ದೊಂದು ಲಿಪಿಯಿಂದ ಆ ಪಟ್ಟಣದಲ್ಲಿ ವೊಂದಾನೊಂದು ಕಾಲದಲ್ಲಿ ಆಂದ್ರಭೃತ್ಯ ವಂಶದ ಹಾರಿತಿಪುತ್ರನೆಂಬ ಬಿರುದುಳ್ಳ ಶತಕರ್ಣಿಯೆಂಬ ಅರಸನು ಆಳುತ್ತಿದ್ದನೆಂದು ತಿಳಿದದೆ. ಈ ಲಿಪಿಯು ಕ್ರಿ. ಶಕದ ೨ನೇ ಶತಕದಲ್ಲಿ ಹುಟ್ಟಿತೆಂದು ಫ್ಲೀಟ ಸಾಹೇಬರ ತರ್ಕವದೆ. ಆದರೆ ಕರ್ನಾಟಕವನ್ನು ಆಳಿದ ರಾಜ ವಂಶಗಳಲ್ಲಿ ಸಾದ್ಯಂತವಾಗಿ ತಿಳಿದಂಥ ಯೆಲ್ಲಕ್ಕೂ ಪೂರ್ವದ ರಾಜವಂಶವು ಚಲುಕ್ಯರದು ಇರುತ್ತದೆ. ಇವರು ಕ್ರಿ. ಶಕದ ೫ನೇ ಶತಕದಲ್ಲಿ ಕರ್ನಾಟಕವನ್ನು ಆಕ್ರಮಿಸಿದರೆಂದು ಶಿಲಾಲಿಪಿಗಳಿಂದ ತಿಳಿದದೆ. ಚಲುಕ್ಯ ಕುಲದ ೨ನೇ ಪುಲಿಕೇಶಿ ಯೆಂಬ ಅರಸು ಬಾದಾವಿಯಲ್ಲಿ ಆಳುತ್ತಿದ್ದಾಗ ಶಕೆ ೫೫೬ನೇ ವರ್ಷದಲ್ಲಿ (ಕ್ರಿ. ಶ. ೬೩೪) ಐಹೊಳೆಯಲ್ಲಿ ಮೇಗುತಿ ಯೆಂಬ ಗುಡಿಯಲ್ಲಿ ಬರಿದದ್ದೊಂದು ಲಿಪಿಯಿಂದ ಪೂರ್ವದಿಂದ ಆಳುತ್ತ ಬಂದಂಥ ಯೆಷ್ಟೋ ರಾಜವಂಶಗಳನ್ನು ಚಲುಕ್ಯರು ಕ್ರಮ ಕ್ರಮವಾಗಿ ಮುರಿದರೆಂದು ಬರಿದದೆ. ಆ ರಾಜವಂಶಗಳ ವಿವರ ಹ್ಯಾಗಂದರೆ—

ನಳ, ಮೌರ್ಯ, ಯೆಂಬ ಅರಸರು.— ನಳ ಮನೆತನದ ಅರಸನನ್ನು ಪುಲಿಕೇಶಿಯ ತಂದೆಯು ಜಯಿಸಿ ಅವನ ರಾಜ್ಯವನ್ನು ತಕ್ಕೊಂಡನೆಂದು ವೊಂದು ಲಿಪಿಯಲ್ಲಿ ಬರಿದದೆ; ಇಷ್ಟಕ್ಕಿಂತ ಹೆಚ್ಚಿಗೇನು ತಿಳಿದಿಲ್ಲ. ಮೌರ್ಯರೆಂಬ ಅರಸರು ಕೊಂಕಣದಲ್ಲಿ "ಪುರಿ" ಯೆಂಬ ರಾಜಧಾನಿಯಲ್ಲಿ ಆಳುತ್ತಿದ್ದರು. "ಪುರಿಯು" "ಪಶ್ಚಿಮ ಸಮುದ್ರದ ಧನ, ದೇವತೆ" ಯೆಂದು ಹೇಳಲ್ಪಟ್ಟದೆ. ಇದೇ ಪುರಿಯಲ್ಲಿ ೧೧ನೇ ಶತಕದಲ್ಲಿ ಶಿಲಾಹಾರರೆಂಬ ಅರಸರು ಆಳುತ್ತಿದ್ದರೆಂದು ತಿಳಿದದೆ. ಆದ್ದರಿಂದ "ಪುರಿ" ಯೆಂದರೆ ಕೊಲ್ಲಾಪುರವಿರ ಬಹುದೆಂದು ತೋರುತ್ತದೆ. ಈ ಮೌರ್ಯರು ಈಗಿನ ಮೋರೆ ಯೆಂಬ ಮಹಾರಾಷ್ಟ್ರರ ಮೂಲ ಪುರುಷರೆಂದು ಅನುಮಾನವದೆ. ಶಿವಾಜಿಯ ಕಾಲಕ್ಕೆ ಚಂದ್ರರಾವ ಮೋರೆ ಯೆಂಬವನೊಬ್ಬ ಸಣ್ಣ ಸಂಸ್ಥಾನಿಕನು ತೋರಣಾ ಯೆಂಬ ಕೋಟೆಯಲ್ಲಿ ಆಳುತ್ತಿದ್ದನು.

ಕದಂಬರು.— ಇವರು ಚಲುಕ್ಯರ ಪೂರ್ವದಲ್ಲಿ ಬನವಾಸಿಯಲ್ಲಿಯೂ, ಪಲಾಶಿಕಾ ಅಂದರೆ ಹಲಸಿಗೆಯೆಲ್ಲಿಯೂ ಆಳುತ್ತಿದ್ದರು. ಉತ್ಸಂಗಿ ದುರ್ಗದಲ್ಲಿಯೂ ತ್ರಿಪರ್ವತ (ಮುರುಗೋಡು?)ದಲ್ಲಿಯೂ ಕದಂಬರ ಅರಮನೆಗಳಿದ್ದವೆಂದು ತಿಳಿದದೆ. ಕದಂಬರು ಬುನಾದಿಯಲ್ಲಿ ಬೌದ್ಧ ಮತದವರಿದ್ದರು. ಇವರಿಗೆ ಹಾರಿತಿ ಪುತ್ರರೆಂಬ ಬಿರುದಿತ್ತು; ಇವರ ಗೋತ್ರ ಮಾನವ್ಯ. ಕದಂಬರು ಗಂಗ, ಪಲ್ಲವ, ಅರಸರನ್ನು ಗೆದ್ದರೆಂದು ವೊಂದು

ಲಿಪಿಯು ಹೇಳುತ್ತದೆ. ಬನವಾಸಿಯೇ ಕದಂಬರ ಮೂಲ ನಿವಾಸಸ್ಥಾನವೆಂಬದಕ್ಕೆ ಸಂದೇಹವಿಲ್ಲ. ಮೇಲೆ ಹೇಳಿದ ಕ್ರಿ. ಶಕದ ೨ನೇ ಶತಕದಲ್ಲಿ ಬನವಾಸಿಯಲ್ಲಿ ಆಳುತ್ತಿದ್ದ ಶತಕರ್ಣಿ ಯೆಂಬ ಅರಸು ಈ ಕದಂಬ ವಂಶದವನೇ ಆದ್ದರಿಂದ ಕದಂಬರ ಮೂಲ ಪುರುಷನು ಬರ್ಬರರನ್ನು ಕರ್ನಾಟಕದಿಂದ ಹೊರಗೆ ಹಾಕಿದರೆಂದು ರಾಜಪದ್ಧತಿಯಲ್ಲಿ ಹೇಳಿದ್ದು ನಿಜವಿರ ಬಹುದೆಂದು ತೋರುತ್ತದೆ. ಕದಂಬರು ಕುರುಬರೆಂದು ಕೆಲವರ ತರ್ಕವದೆ. (೩ನೇ ಭಾಗದಲ್ಲಿ ಕುರುಬರ ವರ್ಣನೆ ನೋಡು).

**ಮಾತಂಗರೂ ಕಟಚ್ಚುರಿಗಳೂ.**—ಮಾತಂಗರನ್ನು ಮಂಗಲೇಶನೆಂಬ ಚಲುಕ್ಯ ಅರಸು ಮುರಿದನೆಂದು ವೊಂದು ಲಿಪಿಯಲ್ಲಿ ಬರಿದದೆ. ಮಾತಂಗರೆಂದರೆ ಹೊಲಿಯರು. ಇವರು ಪ್ರಬಲರಾಗಿ ಚಲುಕ್ಯರ ಪೂರ್ವದಲ್ಲಿ ಅಲ್ಪ ಸ್ವಲ್ಪ ಶೀಮೆಯನ್ನು ಆಕ್ರಮಿಸಿದ್ದರೆಂದು ತೋರುತ್ತದೆ. ೧೬ನೇ ಶತಕದ ಸುಮಾರಿನಲ್ಲಿ ಕಾನಡಾ ಜಿಲ್ಲೆಯಲ್ಲಿ ಹೊಲಿಯರು ಮತ್ತೊಮ್ಮೆ ಪ್ರಬಲರಾದ ವೃತ್ತಾಂತವು ಮುಂದೆ ಬರುವದು. ಚಲುಕ್ಯರ ಪೂರ್ವದಲ್ಲಿ ಕರ್ನಾಟಕದ ಕೆಲವು ಪ್ರದೇಶವನ್ನು ಆಕ್ರಮಿಸಿದ್ದ ಕಟಚ್ಚುರಿಗಳೂ ಮುಂದೆ ಹೇಳಲ್ಪಡುವ ಕಲಚುರಿಗಳೂ ವೊಂದೇ ರಾಜವಂಶವು. ಈ ವಂಶದ ಬುದ್ಧ ರಾಜನೆಂಬವನನ್ನು ಚಲುಕ್ಯ ಮಂಗಲೇಶನು ಗೆದ್ದನೆಂದು ತಿಳಿದದೆ.

**ಗಂಗ ಅರಸರು.**—ಇವರು ಕೊಡಗು ದೇಶದಲ್ಲಿ ಮಡಿಕೇರಿಯಲ್ಲಿ ಆಳುತ್ತಿದ್ದರು. ಇವರನ್ನು ೨ನೇ ಪುಲಿಕೇಶಿಯೂ ಅವನ ಪೂರ್ವದಲ್ಲಿ ಕದಂಬ ಅರಸರೂ ಜಯಿಸಿದ ಬಗ್ಗೆ ಲೇಖಗಳಿರುತ್ತವೆ.

**ಆಲುಪ ಅಥವಾ ಆಲುವ ಅರಸರು.**—ಇವರು ದಕ್ಷಿಣದಲ್ಲಿ ಆಳುತ್ತಿದ್ದರೆಂದು ತಿಳಿದದೆ. ಇವರನ್ನು ಚಲುಕ್ಯರು ಜಯಿಸಿದರು.

**ಪಲ್ಲವ ಅರಸರು.**—ಇವರು ಮೇಲೆ ಹೇಳಿದ ಯಾವತ್ತು ರಾಜ ವಂಶಗಳಿಗಿಂತ ಹೆಚ್ಚು ಬಲಾಢ್ಯರು. ಚಲುಕ್ಯರ ಪೂರ್ವದಲ್ಲಿ ವೆಂಗಿ ದೇಶದಲ್ಲಿ, ಅಂದರೆ ಕೃಷ್ಣಾ ಗೋದಾವರಿಗಳ ನಡುವಿನ ಪ್ರದೇಶದಲ್ಲಿ ಇವರ ರಾಜಧಾನಿ ಇತ್ತು. ಅಲ್ಲಿಂದ ಚಲುಕ್ಯರು ಇವರನ್ನು ಹೊರಗೆ ಹಾಕಲಾಗಿ ಬಾದಾವಿಯನ್ನು ಪಲ್ಲವರು ತಮ್ಮ ರಾಜಧಾನಿಯನ್ನು ಮಾಡಿ ಕೊಂಡರೆಂದು ತೋರುತ್ತದೆ. ಅಲ್ಲಿಂದಲೂ ಚಲುಕ್ಯರೇ ಇವರನ್ನು ಓಡಿಸಿದ ಬಳಿಕ ಇವರು ದಕ್ಷಿಣದಲ್ಲಿ ಕಾಂಚಿಪುರದಲ್ಲಿ ತಮ್ಮ ಸಿಂಹಾಸನವನ್ನು ನೆಲೆಗೊಳಿಸಿದರು. ಮುಂದೆ ಬಹು ದಿವಸ ಚಲುಕ್ಯರಿಗೂ ಪಲ್ಲವರಿಗೂ ಆಗಾಗ್ಗೆ ಯುದ್ಧಗಳಾಗಿ ಉಭಯ ಪಕ್ಷಗಳಿಗೂ ಜಯಾಪಜಯಗಳಾಗುತ್ತಿದ್ದವು. ಪಲ್ಲವರು ಚಲುಕ್ಯರ ಮಾಂಡಲಿಕರೊಳಗೆ ಯೆಂದೆಂದು ಶೇರಲಿಲ್ಲ. ಪಲ್ಲವರು ಭಾರದ್ವಾಜ ಗೋತ್ರದವರೆನಿಸಿ ಶಿವನನ್ನು ಆರಾಧಿಸುವರು; ನಂದಿಯೇ ಅವರ ಮುದ್ರಿಯು. ಆದರೂ ಪಲ್ಲವರು ಪರದೇಶಿಯರೊಳಗೆ ಯೆಣಿಸಲ್ಪಡುತ್ತಿದ್ದರು. ಇದೇ ಕಾರಣದಿಂದ ಚಲುಕ್ಯರಿಗೂ ಇವರಿಗೂ ದೀರ್ಘದ್ವೇಷ ಬೆಳಿದಿರ ಬಹುದೆಂದು ತೋರುತ್ತದೆ.

## ಚಲುಕ್ಯರು.

ಇವರು ಸೋಮ ವಂಶದವರಾಗಿ ಮಾನವ್ಯ ಗೋತ್ರದಲ್ಲಿ ಹುಟ್ಟಿದರೆಂತಲೂ ಹಾರಿತಿ ಪುತ್ರರೆಂಬ ಬಿರುದುಳ್ಳವರೆಂತಲೂ ಲಿಪಿಗಳು ಹೇಳುತ್ತವೆ. ಮೊದಲು ಇವರು ವಿಷ್ಣು ಭಕ್ತರಿದ್ದರು; ಆದರೆ ಕಡೆಯಲ್ಲಿ ಶೈವ ಮತವನ್ನು ಸ್ವೀಕರಿಸಿದರು. ಆರಂಭದಲ್ಲಿ ಚಲುಕ್ಯ ಕುಲದ ಅರಸರು ೫೯ ಜನ ಅಯೋಧ್ಯದಲ್ಲಿ ಆಳಿದರೆಂತಲೂ, ಆ ಮೇಲೆ ೧೬ ಜನ ದಕ್ಷಿಣದಲ್ಲಿ ಆಳಿದರೆಂತಲೂ ಲಿಪಿಗಳಿಂದ ತಿಳಿದದೆ. ಈ ೧೬ ಜನರ ತರುವಾಯ ಚಲುಕ್ಯರು ಅಪ್ರಸಿದ್ಧರಾಗಿ ಬಹು ದಿವಸ ಕಾಲಕ್ಷೇಪ ಮಾಡಿದರೆಂದು ತೋರುತ್ತದೆ. ಮುಂದೆ ವಿಜಯಾದಿತ್ಯನೆಂಬ ಚಲುಕ್ಯ ಕುಲದ ವೀರನು ದಕ್ಷಿಣದಲ್ಲಿ ಪಲ್ಲವ ವಂಶದ ತ್ರಿಲೋಚನನೆಂಬ ಅರಸನೆದುರಿಗೆ ಯುದ್ಧಕ್ಕೆ ನಿಂತು ಮಡಿದನು. ಆದರೂ ಅವನ ಮಗನಾದ ವಿಷ್ಣು ವರ್ಧನನಿಗೆ ತ್ರಿಲೋಚನನ ಮನೆತನದವರೇ ಹೆಣ್ಣು ಕೊಟ್ಟರು. ಆದರೆ ಈ ವಿಷ್ಣುವರ್ಧನನ ಕಾಲವೂ ತಿಳಿದಿಲ್ಲ, ಇವನು ಚಲುಕ್ಯ ವಂಶವನ್ನು ಬಹು ಕಾಲ ನೆಲೆಗೊಳಿಸಿದ ೧ನೇ ಜಯಸಿಂಹನಿಗೆ ಯೇನಾಗ ಬೇಕೆಂಬುವದೂ ತಿಳಿದಿಲ್ಲ.

ಮೇಲೆ ಹೇಳಿದ ೧ನೇ ಜಯಸಿಂಹನು ರಾಷ್ಟ್ರಕೂಟ ವಂಶದ ಕೃಷ್ಣ ರಾಜನ ಮಗನಾದ ಇಂದ್ರನೆಂಬವನನ್ನು ಯುದ್ಧದಲ್ಲಿ ಗೆದ್ದು ತಾಪೀ ನದಿಯ ಉತ್ತರದಲ್ಲಿ ಅಂಪರೆ ಗುಜರಾಥದ ನೆರೆಯಲ್ಲಿ ತನ್ನ ಸಿಂಹಾಸನವನ್ನು ಸ್ಥಾಪಿಸಿದನು. ಇವನ ರಾಜಧಾನಿಯು ಇಂದುಪುರಿ ಯೆಂಬ ಪಟ್ಟಣವಿತ್ತೆಂದು ತೋರುತ್ತದೆ. ಅದು ಅಜಯೆಂತವೇ ಇರ ಬಹುದೆಂದು ಫ್ಲೀಟ ಸಾಹೇಬರು ತರ್ಕಿಸುತ್ತಾರೆ. ಈ ಜಯಸಿಂಹನು ಆಳಿದ ಕಾಲವು ತಿಳಿದಿಲ್ಲ. ಇವನ ವಂಶಾವಳಿಯನ್ನು ಕೆಳಗೆ ಕೊಟ್ಟದೇವೆ.

## ೧ನೇ ಜಯಸಿಂಹ.

- ಬುದ್ಧವರ್ಮಾ ವಿಜಯವರ್ಮಾ (ಶಕ ೩೯೪)
- ರಣರಂಗ ಪುಲಿಕೇಶಿ (ಶಕ ೪೧೧)
  - ೧ನೇ ಕೀರ್ತಿವರ್ಮಾ (ಶಕ ೪೮೯)
    - ೨ನೇ ಪುಲಿಕೇಶಿ ಅಥವಾ ೧ನೇ ಸತ್ಯಾಶ್ರಯ (ಶ. ೫೩೨-೫೫೬)
      - ಆದಿತ್ಯವರ್ಮಾ
      - ಚಂದ್ರಾದಿತ್ಯ
      - ೧ನೇ ವಿಕ್ರಮಾದಿತ್ಯ (ಶ. ೫೯೨-೬೦೩)
        - ವಿನಯಾದಿತ್ಯ (ಶ. ೬೦೩-೬೧೮)
          - ವಿಜಯಾದಿತ್ಯ (ಶ. ೬೧೮-೬೫೫)
            - ೨ನೇ ವಿಕ್ರಮಾದಿತ್ಯ (ಶ. ೬೫೫-೬೬೯)
              - ೨ನೇ ಕೀರ್ತಿವರ್ಮಾ (ಶ. ೬೬೯-೬೭೯)
            - ೧ನೇ ಭೀಮ
              - ೩ನೇ ಕೀರ್ತಿವರ್ಮಾ
                - ೧ನೇ ತ್ರೈಲಪ
                  - ೩ನೇ ವಿಕ್ರಮಾದಿತ್ಯ
                    - ೨ನೇ ಭೀಮ
                      - ೧ನೇ ಅಯ್ಯನ
                        - ೪ನೇ ವಿಕ್ರಮಾದಿತ್ಯ
                          - ೨ನೇ ತ್ರೈಲಪ ಅಥವಾ ಆಹವಮಲ್ಲ (ಶ. ೮೯೫-೯೧೯)
      - ಅಂಬಿರ
    - ೧ನೇ ವಿಷ್ಣುವರ್ಧನ (ಪೂರ್ವ ರಾಜ್ಯ)
    - ೨ನೇ ಜಯಸಿಂಹ
  - ಮಂಗಲೇಶ (ಶಕ ೪೮೯-೫೩೨) ಸತ್ಯಾಶ್ರಯ ಅಥವಾ ಇಂದ್ರವರ್ಮಾ (೫೩೨)

## (೨ನೇ ತೈಲಪನ ಮಕ್ಕಳು.)

**೨ನೇ ಸತ್ಯಾಶ್ರಯ** **ದಾಸವರ್ಮ**

- ೫ನೇ ವಿಕ್ರಮಾದಿತ್ಯ ಅಥವಾ ತ್ರಿಭುವನಮಲ್ಲ (ಶ. ೯೩೦-೯೪೦)
- ೨ನೇ ಅಯ್ಯನ
- ಅಕ್ಕಾದೇವಿ (ಶ. ೯೪೪-೯೬೯)
- ೩ನೇ ಜಯಸಿಂಹ ಅಥವಾ ೧ನೇ ಜಗದೇಕಮಲ್ಲ (ಶ.೯೪೦-೯೪೪)
  - ೧ನೇ ಸೋಮೇಶ್ವರ ಅಥವಾ ೧ನೇ ತ್ರೈಲೋಕ್ಯಮಲ್ಲ ಅಥವಾ ೨ನೇ ಆಹವಮಲ್ಲ (ಶ. ೯೬೪-೯೯೦)
    - ೨ನೇ ಸೋಮೇಶ್ವರ ಅಥವಾ ಭುವನೈಕಮಲ್ಲ (ಶ. ೯೯೦-೯೯೭)
    - ೬ನೇ ವಿಕ್ರಮಾದಿತ್ಯ ಅಥವಾ ೨ನೇ ತ್ರಿಭುವನಮಲ್ಲ (ಶ. ೯೯೭-೧೦೪೮)
      - ಜಯಕರ್ಣ
      - ೩ನೇ ಸೋಮೇಶ್ವರ ಅಥವಾ ಭೂಲೋಕಮಲ್ಲ (ಶ. ೧೦೪೮-೧೦೬೦)
        - ೨ನೇ ಜಗದೇಕಮಲ್ಲ (ಶ. ೧೦೬೦-೧೦೭೨)
        - ೩ನೇ ತೈಲಪ ಅಥವಾ ೩ನೇ ತ್ರೈಲೋಕ್ಯಮಲ್ಲ (ಶ. ೧೦೭೨-೧೦೮೪)
          - ೪ನೇ ಸೋಮೇಶ್ವರ ಅಥವಾ ೩ನೇ ತ್ರಿಭುವನಮಲ್ಲ (ಶ. ೧೧೦೪-೧೧೧೧)
      - ಮೈಲಾದೇವಿ (ಗೋವೆಯ ಕದಂಬ ಕುಲದ ೨ನೇ ಜಯಕೇಶಿಯನ್ನು ಲಗ್ನ ಮಾಡಿ ಕೊಂಡಳು)
    - ೪ನೇ ಜಯಸಿಂಹ ಅಥವಾ ೨ನೇ ತ್ರೈಲೋಕ್ಯಮಲ್ಲ (ಶ. ೧೦೦೧-೧೦೦೩)

ಬುದ್ಧವರ್ಮ, ರಣರಂಗ.—ಇವರು ೧ನೇ ಜಯಸಿಂಹನ ಮಕ್ಕಳು. ಇಬ್ಬರೂ ವೊಬ್ಬನ ಹಿಂದೊಬ್ಬನು ಪಟ್ಟವನ್ನು ಆಳಿದಾಗ್ಯೂ ಇವರ ಕಾಲ ಕೀರ್ತಿಯ ಇತಿಹಾಸವೇನು ತಿಳಿಯಲಿಲ್ಲ. ಆದ್ದರಿಂದ ಇವರಿಬ್ಬರೂ ರಾಜ್ಯವನ್ನು ಬೆಳಿಸುವ ಪ್ರಯತ್ನವೇನು ಮಾಡಲಿಲ್ಲೆಂದು ತೋರುತ್ತದೆ.

ವಿಜಯವರ್ಮ.—ಇವನು ಬುದ್ಧವರ್ಮನ ಮಗನು. ಇವನು ಜಂಬುಸರವೆಂಬಲ್ಲಿಯ ಬ್ರಾಹ್ಮಣರಿಗೂ ವಿದ್ಯಾರ್ಥಿಗಳಿಗೂ ವೊಂದು ಹಳ್ಳಿಯನ್ನು ಇನಾಮು ಕೊಟ್ಟ ಲೇಖವದೆ. ಜಂಬುಸರವು ಗುಜರಾಥದಲ್ಲಿ ಇರುತ್ತದೆ. ವಿಜಯಪುರವೆಂಬಲ್ಲಿ ಜಯ ಪಡಿದ ಕಾಲಕ್ಕೆ ವಿಜಯವರ್ಮನು ಈ ಹಳ್ಳಿಯ ಇನಾಮು ಕೊಟ್ಟನು. ಈ ವಿಜಯಪುರ ಯಾವದೆಂಬ ಬಗ್ಗೆ ಇನ್ನೂ ಶೋಧವಾಗಬೇಕಾಗಿದೆ.

೧ನೇ ಪುಲಿಕೇಶಿ.—ಇವನು ರಣರಂಗನ ಮಗನು. ಇವನಿಗೆ ರಣವಿಕ್ರಮನೆಂಬ ಬಿರುದಿತ್ತು. ಇವನ ಹೆಂಡತಿಯು ದುರ್ಲಭಾದೇವಿ, ಬಪ್ಪುರವೆಂಬ ಮನೆತನದವಳು. ಇವನು ದಕ್ಷಿಣಕ್ಕೆ ಬಂದು ಪಲ್ಲವ ಅರಸನನ್ನು ಗೆದ್ದು ಬಾದಾವಿಯಲ್ಲಿ ತನ್ನ ಸಿಂಹಾಸನವನ್ನು ಸ್ಥಾಪಿಸಿದನು. ಆದರೆ ಗುಜರಾಥವನ್ನು ಇವನು ಯಾಕೆ ಬಿಟ್ಟನೆಂಬ ಕಾರಣವು ತಿಳಿದಿಲ್ಲ. ಇವನ ಕಾಲದ ಲಿಪಿಯು ವೊಂದೇ ದೊರಿದದೆ. ಅದರಲ್ಲಿ ಇವನ ಕೈಕೆಳಗಿನವನೊಬ್ಬ ಮಂಡಲೇಶ್ವರನ ಆಳಿಕೆಗೆ ಶೇರಿದ ಕುಂಹುಡಿ ಯೆಂಬ ಪ್ರಾಂತದಲ್ಲಿ ಅಲಕ್ತಕ ನಗರವೆಂಬ ಗ್ರಾಮದಲ್ಲಿ ಈ ಪುಲಿಕೇಶಿ ರಾಜನು ವೊಂದು ಜೈನ ಗುಡಿಯನ್ನು ಕಟ್ಟಿಸಿದನೆಂದು ಬರಿದದೆ. ಆದರೆ ಈ ಲಿಪಿಯು ಕೃತಕವೆಂದು ಫ್ಲೀಟ ಸಾಹೇಬರ ಅಭಿಪ್ರಾಯವದೆ. ಪುಲಿಕೇಶಿಯು ವೊದಲಿನ ರಾಜಧಾನಿಯಾದ ಇಂದುಕಾಂತಿಯನ್ನು ಬಿಟ್ಟು ವಾತಾಪಿಯಲ್ಲಿ, ಅಂದರೆ ಬಾದಾವಿಯಲ್ಲಿ, ಬಂದು ನಿಂತನೆಂದು ತಿಳಿದದೆ. ಇವನು ಪಲ್ಲವ ರಾಜಧಾನಿಯಾದ ಕಾಂಚೀಪುರಕ್ಕೆ ಹೋಗಿ, ಅಲ್ಲಿಯ ಅರಸನನ್ನು ಗೆದ್ದು ಆ ಪಟ್ಟಣವನ್ನು ಸುಟ್ಟನೆಂದು ವೊಂದು ಲಿಪಿಯಲ್ಲಿ ಬರಿದದೆ.

೧ನೇ ಕೀರ್ತಿವರ್ಮ.—ಇವನು ೧ನೇ ಪುಲಿಕೇಶಿಯ ಹಿರಿ ಮಗನು; ಇವನ ಆಳಿಕೆಯ ಆರಂಭದ ವರ್ಷ ತಿಳಿದಿಲ್ಲ; ಸಮಾಪ್ತಿಯು ಕ್ರಿ. ಶ. ೫೬೭ರ ಸುಮಾರಿನಲ್ಲಿ ಆಯಿತು. ಇವನು ನಳ, ಮೌರ್ಯ, ಕದಂಬ, ಯೆಂಬ ಅರಸರನ್ನು ಗೆದ್ದು ಪಶ್ಚಿಮಕ್ಕೂ ದಕ್ಷಿಣಕ್ಕೂ ತನ್ನ ರಾಜ್ಯವನ್ನು ಬೆಳಿಸಿದನು. ಇವನ ಆಳಿಕೆಯಲ್ಲಿ ಆಡೂರಲ್ಲಿ (ಪಾಂಡಿಪುರದಲ್ಲಿ) ಮಂಡಲೇಶ್ವರನಾಗಿ ಆಳುತ್ತಿದ್ದ ಸಿಂದನೆಂಬ ಅರಸು ಅದೇ ಗ್ರಾಮದಲ್ಲಿ ವೊಂದು ಜೈನ ಗುಡಿಯನ್ನು ಕಟ್ಟಿಸಿದನೆಂದು ಅಲ್ಲಿ ಇರುವದೊಂದು ಲಿಪಿಯು ಹೇಳುತ್ತದೆ. ಬಾದಾವಿಯಲ್ಲಿ ೩ನೇ ವೈಷ್ಣವ ಗುಹೆಯನ್ನು ಕೀರ್ತಿವರ್ಮನು ಕಟ್ಟಿಸಲಿಕ್ಕೆ ಆರಂಭ ಮಾಡಿದನೆಂದು ತಿಳಿದದೆ.

ಮಂಗಲೇಶ.—ಇವನು ಕೀರ್ತಿವರ್ಮನ ತಮ್ಮನು, ಕ್ರಿ. ಶ. ೫೬೭ನೇ ವರ್ಷ ಕೀರ್ತಿವರ್ಮನು ತೀರಲಾಗಿ ಅವನ ಹಿರಿ ಮಗ ೨ನೇ ಪುಲಿಕೇಶಿಯು ಚಿಕ್ಕವನಿದ್ದದರಿಂದ ಮಂಗಲೇಶನು ಅವನ ಪಾಲಕನಾಗಿ ಕಾರಭಾರವನ್ನು ಕೈಕೊಂಡನು. ಮಂಗಲೇ

ಶನು ರೇವತೀ ದ್ವೀಪನೆಂಬ ನಡುಗಡ್ಡೆಯನ್ನು ಕೈವಶ ಮಾಡಿ ಕೊಂಡದ್ದಲ್ಲದೆ, ಮಾತಂಗ ಕುಲದ, ಅರಸನನ್ನೂ ಕಲಚ್ಚುರಿ ಕುಲದ ಅರಸನನ್ನೂ ಗೆದ್ದು ಅವರ ರಾಜ್ಯವನ್ನು ಕಸು ಕೊಂಡನು. ಇವನಿಂದ ಗೆಲ್ಲಲ್ಪಟ್ಟ ಕಲಚ್ಚುರೀ ಕಾಲದ ಅರಸನ ಹೆಸರು ಬುದ್ಧನೆಂದು ತೋರುತ್ತದೆ. ಕೊಂಕಣದ ಚಲುಕ್ಯ ಕುಲದವನೇ ಇನ್ನೊಬ್ಬ ಸ್ವಾಮಿರಾಜನೆಂಬ ಅರ ಸು ಆಳುತ್ತಿದ್ದನು. ಅವನ ರಾಜ್ಯವನ್ನು ಸಹ ಮಂಗಲೇಶನು ಕಸುಕೊಂಡನೆಂದು ತಿಳಿ ದದೆ. ಇವನು ಕಲಚ್ಚುರೀ ಬುದ್ಧ ರಾಜನನ್ನು ಜಯಿಸಿ, ಅವನ ಸಂಪತ್ತಿಯನ್ನೆಲ್ಲ ಬಾದಾ ಮಿಯಲ್ಲಿಯ ಮಾಕೂಟೇಶ್ವರವೆಂಬ ದೇವಸ್ಥಾನಕ್ಕೆ ಕೊಟ್ಟನೆಂದು ಅದೇ ದೇವಸ್ಥಾನ ದ್ದೊಂದು ಲಿಪಿಯು ಹೇಳುತ್ತದೆ.

ಮಂಗಲೇಶನ ಶರೀರ ಸಂಬಂಧಿಯಾದ ಸತ್ಯಾಶ್ರಯ ಇಂದ್ರವರ್ಮನೆಂಬ ಮನು ಷ್ಯನು ರೇವತೀ ದ್ವೀಪದಲ್ಲಿ ಅಧಿಕಾರಿಯಾಗಿದ್ದನೆಂದು ವೊಂದು ಲಿಪಿಯು ಹೇಳುತ್ತದೆ. ಇವನು ಬಪುರ ವಂಶದವನೆಂದು ಅದೇ ಲಿಪಿಯಲ್ಲಿ ಬರಿದಿರುವ ಕಾರಣ ಇವನು ಚಲುಕ್ಯ ವಂಶದವನಲ್ಲೆಂದು ತೋರುತ್ತದೆ.

## ಪಶ್ಚಿಮ ಚಲುಕ್ಯ ರಾಜ್ಯವು.

೧ನೇ ಕೀರ್ತಿವರ್ಮನಿಗೆ ಮೂವರು ಮಕ್ಕಳು. ಹಿರಿ ಮಗ ೨ನೇ ಪುಲಿಕೇಶಿ; ಇವನಿಗೆ ಸತ್ಯಾಶ್ರಯನೆಂತಲೂ ಹೆಸರಿತ್ತು. ನಡುವಿನವ ೧ನೇ ವಿಷ್ಣುವರ್ಧನನು; ಇವ ನಿಗೆ ಕುಬ್ಜವಿಷ್ಣುವರ್ಧನನೆಂಬ ಹೆಸರಿದ್ದ ಕಾರಣ ಇವನು ಡೊಗನಿದ್ದನೆಂದು ತೋರು ತ್ತದೆ. ಕಡೆಯವ ೨ನೇ ಜಯಸಿಂಹನು; ಇವನಿಗೆ ಜಯಾಶ್ರಯನೆಂತಲೂ ಧರ್ಮಾ ಶ್ರಯನೆಂತಲೂ ಹೆಸರುಗಳಿದ್ದವು. ಕ್ರಿ. ಶಕದ ೬೧೧ನೇ ವರ್ಷದ ಸುಮಾರಿನಲ್ಲಿ ಚಲು ಕ್ಯ ರಾಜ್ಯದಲ್ಲಿ ಯೆರಡು ವಿಭಾಗಗಳಾಗಿ ೨ನೇ ಪುಲಿಕೇಶಿಯು ಪಶ್ಚಿಮ ರಾಜ್ಯವನ್ನು ವಾತಾಪಿಯಲ್ಲಿ, ಅಂದರೆ ಬಾದಾಮಿಯಲ್ಲಿ ನಿಂತು ಆಳ ಹತ್ತಿದನು; ೧ನೇ ವಿಷ್ಣುವರ್ಧ ನನು ವೆಂಗಿ ( ) ಯೆಂಬ ನಾಡಿನಲ್ಲಿ ನಿಂತು ಪೂರ್ವ ರಾಜ್ಯವನ್ನು ಆಳ ಹತ್ತಿದನು. ಇದೇ ಕಾಲಕ್ಕೆ ೨ನೇ ಜಯಸಿಂಹನು ಉತ್ತರ ದೇಶದ ಭಾಗವನ್ನು ತಕ್ಕೊಂಡನೆಂದು ತೋರುತ್ತದೆ.

**೨ನೇ ಪುಲಿಕೇಶಿ (೬೧೦-೬೪೦).**— ಇವನು ಪಶ್ಚಿಮ ಚಲುಕ್ಯ ರಾಜ್ಯದ ಮೊದ ಲನೇ ಅರಸನಾಗಿ ಕ್ರಿ. ಶ. ೬೧೦ರಲ್ಲಿ ಆಳ ಹತ್ತಿದನು. ಈ ಪುಲಿಕೇಶಿಯಷ್ಟು ಪರಾ ಕ್ರಮಿಗಳು ಹಿಂದೆ ಯಾರು ಆಗಲಿಲ್ಲ. ಇವನು ಜಯಿಸಿದ ಅರಸರ ಅಥವಾ ರಾಜ್ಯ ಗಳ ಹೆಸರುಗಳು— ರಾಷ್ಟ್ರಕೂಟರ ಆಪ್ಪಾಯಿಕ ಗೋವಿಂದ, ಬನವಾಸಿಯ ಕದಂಬರು, ಗಂಗರು, ಆಲೂಪರು, ಕೊಂಕಣದ ಮೌರ್ಯರು, ಲಾಟರು, ಮಾಳವರು, ಗುರ್ಜರರು, ಮಹಾರಾಷ್ಟ್ರವೆಂಬ ಹೆಸರಿನ ಮೂರು ನಾಡುಗಳು (ಇವುಗಳಲ್ಲೆಲ್ಲ ಕೂಡಿ ೯೯ ಸಾವಿರ ಹಳ್ಳಿಗಳಿದ್ದವು), ಕೋಸಲರು, ಕಲಿಂಗರು, ಕಾಂಚೀಪುರದ ಪಲ್ಲವರು, ಚೋಳರು, ಕೇರ ಳರು, ಪಾಂಡ್ಯರು. ಕನೋಜ ಪಟ್ಟಣದ ಹರ್ಷವರ್ಧನನೆಂಬ ಅರಸು ಪುಲಿಕೇಶಿಯಿಂದ

ಗೆಲ್ಲಲ್ಪಟ್ಟ ಅರಸರಲ್ಲಿ ಯೆಲ್ಲಕ್ಕೂ ಹೆಚ್ಚಿನವನು. ಇವನು ಯಾವತ್ತು ಉತ್ತರ ಹಿಂದುಸ್ತಾನದ ವೊಡಿಯನಾಗಿದ್ದನೆಂದು ವೊಂದು ಲಿಪಿಯು ಹೇಳುತ್ತದೆ. ಈ ಅರಸನನ್ನು ಜಯಿಸಿದ್ದರಿಂದ ಪುಲಿಕೇಶಿಗೂ ಅವನ ವಂಶದವರಿಗೂ "ಸತ್ಯಾಶ್ರಯ ಪರಮೇಶ್ವರ" ಯೆಂಬ ಬಿರುದು ಉಂಟಾಯಿತು. ಚೀನಾ ದೇಶದ ಹಿವೆನ್‌ತ್ಸಂಗನೆಂಬ ಪ್ರವಾಸಿಯು ಹಿಂದುಸ್ತಾನದಲ್ಲಿ ಶಾ. ಶ. ೬೨೯ರಿಂದ ೬೪೫ರ ವರೆಗೆ ಸಂಚಾರ ಮಾಡಿದನು. ಇವನು "ಹೊಲಿಶಫತನ್ನ" ಅಂದರೆ ಹರ್ಷವರ್ಧನ, ಅಥವಾ "ಶಿಲೊವೊತಿಯೆತೊ" ಅಂದರೆ ಶಿಲಾದಿತ್ಯ, ಯೆಂಬ ಅರಸನ ರಾಜಧಾನಿಯನ್ನು ನೋಡಿ ಅದರ ವರ್ಣನೆಯನ್ನು ಬರೆದಿದ್ದಾನೆ. ಇದರಂತೆ "ಮೊಹೊಲಚ" ಅಂದರೆ ಮಹಾರಾಷ್ಟ್ರ ರಾಜ್ಯದ ರಾಜಧಾನಿಗೂ ತ್ಸಂಗನು ಹೋಗಿದ್ದನೆಂದು ತೋರುತ್ತದೆ. ಈ ರಾಜ್ಯದ ಅರಸನ ಹೆಸರು ಅವನು "ಪುಲೊಕಿಶೆ," (ಅಂದರೆ ಪುಲಿಕೇಶಿ) ಯೆಂದು ಬರೆದಿದ್ದಾನೆ. ಪುಲಿಕೇಶಿಯ ರಾಜ್ಯದ ಸ್ವರೂಪವನ್ನೂ, ಅವನ ಪ್ರಜೆಗಳ ಸ್ವಭಾವವನ್ನೂ, ದಂಡಾಳುಗಳ ಶೌರ್ಯವನ್ನೂ ತ್ಸಂಗನು ವೊಳಿತಾಗಿ ವರ್ಣಿಸಿದ್ದಾನೆ. ಆದರೆ ರಾಜಧಾನಿಯ ವರ್ಣನೆಯು ಬಾದಾಮಿಗೆ ನಿಃಸಂದೇಹವಾಗಿ ಹತ್ತುವಂತೆ ತೋರುವದಿಲ್ಲ. ಪುಲಿಕೇಶಿಯು ಹಿಂದುಸ್ತಾನದ ಹೊರಗೆ ಸಹ ಖ್ಯಾತಿಯನ್ನು ಪಡೆದಿದ್ದನೆಂದು ತೋರುತ್ತದೆ. ಇರಾಣದ ೨ನೇ ಖುಸರೋ ಯೆಂಬ ಅರಸನು ಪುಲಿಕೇಶಿಯ ದರ್ಬಾರಿಗೆ ವಕೀಲರ ಕೂಡ ಕಾಣಿಕೆಗಳನ್ನು ಕಳಿಸಿದ್ದನೆಂಬ ಬಗ್ಗೆ ಪ್ರಮಾಣಗಳು ಇರುತ್ತವೆ. ಪುಲಿಕೇಶಿಯ ಮರಣದ ಕಾಲವು ನಿಶ್ಚಯಾತ್ಮಕವಾಗಿ ತಿಳಿಯುವದಿಲ್ಲ. ಆದರೆ ಶಾಲಿವಾಹನ ಶಕದ ೫೬೭ನೇ ವರ್ಷದ ನಂತರ ಅವನು ಬಹಳ ದಿವಸ ಬದುಕಿದನೆಂದು ತೋರುವದಿಲ್ಲ.

ಪುಲಿಕೇಶಿಯ ಮರಣದ ನಂತರ ಪಲ್ಲವ ಚೋಳ, ಪಾಂಡ್ಯ, ಕೇರಲ ಅರಸರು ಕೂಡಿ ಚಲುಕ್ಯರನ್ನು ಜಯಿಸಿ, ಅವರ ಮನೆತನದವರನ್ನು ಪಶ್ಚಿಮಕ್ಕೆ ಘಟ್ಟದ ಕೆಳಗೂ, ದಕ್ಷಿಣಕ್ಕೆ ಕರ್ನೂಲಿನ ಕಡೆಗೂ ಕೆಲವು ಕಾಲ ಓಡಿಸಿದ್ದರೆಂದು ತೋರುತ್ತದೆ.

**ಆದಿತ್ಯವರ್ಮ.**—೨ನೇ ಪುಲಿಕೇಶಿಗೆ ಆದಿತ್ಯವರ್ಮ, ಚಂದ್ರಾದಿತ್ಯ, ೧ನೇ ವಿಕ್ರಮಾದಿತ್ಯ, ಯೆಂಬ ಮೂವರು ಗಂಡು ಮಕ್ಕಳೂ, ಅಂಬಿಕೆ ಯೆಂಬ ಹೆಣ್ಣು ಮಗಳೂ ಇದ್ದರು. ಆದಿತ್ಯವರ್ಮನು ಕರ್ನೂಲಿನ ಬಳಿಯಲ್ಲಿ ಸಣ್ಣದೊಂದು ರಾಜ್ಯವನ್ನು ಆಳಿದನೆಂದು ತೋರುತ್ತದೆ. ಚಂದ್ರಾದಿತ್ಯನ ಹೆಂಡತಿ ವಿಜಯಾದೇವಿಯೆಂಬವಳು ಬರಿಸಿಟ್ಟದ್ದೊಂದು ಶಾಸನದಿಂದ ಆಕೆಯ ಗಂಡನು ಕೊಂಕಣದಲ್ಲಿ ಕೆಲವು ಪ್ರದೇಶಕ್ಕೆ ವೊಡೆಯನಾಗಿ ಆಳಿದನೆಂದು ತೋರುತ್ತದೆ.

**೧ನೇ ವಿಕ್ರಮಾದಿತ್ಯ (೬೭೦-೬೮೦).**—ಇವನು ಪಲ್ಲವ ಅರಸನನ್ನು ಗೆದ್ದು ಕಾಂಚೀಪುರವನ್ನು ಆಕ್ರಮಿಸಿದನು. ಮತ್ತೂ ಚೋಳ, ಪಾಂಡ್ಯ, ಕೇರಲ, ಕಲಭ್ರ (ಕಲಭೂರ್ಯ ) ಯೆಂಬ ಅರಸರ ರಾಜ್ಯಗಳನ್ನು ಕಸುಕೊಂಡು ತನ್ನ ತಂದೆಯ ರಾಜ್ಯವನ್ನೆಲ್ಲ ಮೊದಲಿನಂತೆ ಕೈವಶ ಮಾಡಿ ಕೊಂಡನು. ಇದಲ್ಲದೆ ಇವನು ಸೇಂದ್ರಕ ಕುಲದ ದೇವಶಕ್ತಿ ಯೆಂಬ ಅರಸನನ್ನು ತನ್ನ ಮಾಂಡಲಿಕರೊಳಗೆ ಸೇರಿಸಿದನು.

ವಿನಯಾದಿತ್ಯ (೬೮೦-೬೯೭).— ಇವನಿಗೆ ರಾಜಾಶ್ರಯನೆಂತಲೂ ಯುದ್ಧಮಲ್ಲನೆಂತಲೂ ಅನ್ನುವರು. ಇವನು ಕಾಂಚೀಪುರದ ಪಲ್ಲವ ಅರಸರ ಗೌರವವನ್ನು ತಗ್ಗಿಸಿ, ಕಾವೇರ, ಪಾರಸೀಕ, ಸಿಂಹಲ, ಮುಂತಾದ ದೇಶಗಳ ಅರಸರ ಕೈಯಿಂದ ಕಪ್ಪಗಾಣಿಕೆಯನ್ನು ತಕ್ಕೊಂಡನು. ಇದಲ್ಲದೆ ವಿನಯಾದಿತ್ಯನು ಉತ್ತರದಲ್ಲಿ "ಸರ್ವರಾಷ್ಟ್ರಗಳ ಚಕ್ರವರ್ತಿಯನ್ನೂ" ಬೇರೆ ಬಲಾಢ್ಯರಾದ ಅರಸರನ್ನೂ ಗೆದ್ದು ಮತ್ತೆ ವಾತಾಪಿಯನ್ನೇ ರಾಜಧಾನಿಯನ್ನು ಮಾಡಿ ಕೊಂಡು ನಿಂತನೆಂದು ತೋರುತ್ತದೆ.

ವಿಜಯಾದಿತ್ಯ, (೬೯೭-೭೩೩).— ಇವನು ರಾಜ್ಯಕಾರಭಾರದಲ್ಲಿ ಚತುರನಿದ್ದನೆಂದು ತೋರುತ್ತದೆ. ಬಹಳ ಯುದ್ಧಗಳನ್ನು ಮಾಡದಿದ್ದಾಗ್ಯೂ, ಇವನು ತನ್ನ ತಂದೆ ಮುತ್ಯೆಂದಿರಿಂದ ಗಳಿಸಲ್ಪಟ್ಟ ವಿಸ್ತಾರವಾದ ರಾಜ್ಯವನ್ನೂ ಘನವಾದ ಗೌರವವನ್ನೂ ಕಾದು ಕೊಂಡು ಸೌಖ್ಯದಿಂದ ಆಳಿದನೆಂದು ಲಿಪಿಗಳು ಹೇಳುತ್ತವೆ. ಇವನು ಪಟ್ಟದ ಕಲ್ಲಿನಲ್ಲಿ ವಿಜಯೇಶ್ವರನ, ಅಂದರೆ ಈಗಿನ ಸಂಗಮೇಶ್ವರನ ಗುಡಿಯನ್ನು ಕಟ್ಟಿಸಿದನು.

೨ನೇ ವಿಕ್ರಮಾದಿತ್ಯ, (೭೩೩-೭೪೭).— ಇವನು ವಿಜಯಾದಿತ್ಯನ ಹಿರಿ ಮಗನು. ಇವನ ಹೆಂಡತಿ ಲೋಕ ಮಹಾದೇವಿ ಯೆಂಬವಳು ಹೈಹಯ ಅರಸರ ಮನೆತನದವಳು. ಆಕೆ, ತನ್ನ ಗಂಡನು ಕಾಂಚಿಯ ಪಲ್ಲವ ಅರಸನನ್ನು ಮೂರು ಸಾರಿ ಗೆದ್ದದ್ದರ ಸ್ಮಾರಕ ರೂಪವಾಗಿ ಪಟ್ಟದ ಕಲ್ಲಿನಲ್ಲಿ ಲೋಕೇಶ್ವರನ ಗುಡಿಯನ್ನು ಕಟ್ಟಿಸಿದಳು. ಇವನ ಆಳಿಕೆಯಲ್ಲಿ ಇವನ ಮಗನಾದ ೨ನೇ ಕೀರ್ತಿವರ್ಮನು ತನ್ನ ಪೂರ್ವಜರ ಕುಲವೈರಿಗಳಾದ ಪಲ್ಲವರ ಅರಸನಾದ ನಂದಿಪೋತವರ್ಮನೆಂಬವನನ್ನು ತುದಾಕವೆಂಬಲ್ಲಿ ಯುದ್ಧದಲ್ಲಿ ಕೊಂದು ಕಾಂಚೀ ಪಟ್ಟಣವನ್ನು ಪ್ರವೇಶಿಸಿದಾಗ್ಯೂ ಅದನ್ನು ಹಾಳು ಮಾಡಲಿಲ್ಲವೆಂತಲೂ, ಪಾಂಡ್ಯ, ಚೋಳ, ಕೇರಲ, ಕಲಭ್ರ ಅರಸನನ್ನು ಬಹಳ ಪೀಡಿಸಿದನೆಂತಲೂ ವೊಂದು ಲಿಪಿಯು ಹೇಳುತ್ತದೆ.

೨ನೇ ಕೀರ್ತಿವರ್ಮ, (೭೪೭-೭೫೭).— ಇವನ ಆಳಿಕೆಯಲ್ಲಿ ಕರ್ನೂಲಿನ ಬಳಿಯಲ್ಲಿಯೇ ಚಲುಕ್ಯರ ರಾಜಧಾನಿ ಇತ್ತೆಂದು ತೋರುತ್ತದೆ. ಇವನು ತಂದೆಯ ಆಳಿಕೆಯಲ್ಲಿ ಮೇಲೆ ಹೇಳಿದಂತೆ ಹೆಸರು ಪಡೆದಾಗ್ಯೂ, ತನ್ನ ಸ್ವಂತ ಆಳಿಕೆಯಲ್ಲಿ ಚಲುಕ್ಯರ ಸಾಮ್ರಾಜ್ಯಕ್ಕೆ ಮೋಸ ತಂದನೆಂದು ವೊಂದು ಲಿಪಿಯು ಹೇಳುತ್ತದೆ. ಇದೇ ಸಂಧಿಯಲ್ಲಿ ಬಾದಾಮಿಯನ್ನು ರಾಷ್ಟ್ರ ಕೂಟ ಅರಸರು ಮತ್ತೆ ಆಕ್ರಮಿಸಿದರೆಂದು ತೋರುತ್ತದೆ.

ರಾಷ್ಟ್ರಕೂಟರು.— ಇವರು ಚಲುಕ್ಯರ ಪೂರ್ವದಲ್ಲಿ ಕರ್ನಾಟಕದ ಕೆಲವು ಭಾಗಕ್ಕೆ ವೊಡೆಯರಾಗಿದ್ದರೆಂದು ಪೂರ್ವದಲ್ಲಿ ಸೂಚಿಸಿದ್ದೇವೆ. ಇವರ ವಂಶದವರು ಈ ಸಂಧಿಯಲ್ಲಿ ಸವದತ್ತಿಯಲ್ಲಿ ರಟ್ಟರೆಂಬ ಹೆಸರಿನಿಂದ ಆಳುತ್ತಿದ್ದರು. ಚಲುಕ್ಯರು ಪ್ರಬಲರಾದಾಗ ಸವದತ್ತಿಯ ರಟ್ಟರು ಅವರ ಮಾಂಡಲಿಕರೊಳಗೆ ಶೇರುತ್ತಿದ್ದರು; ಅವರು ದುರ್ಬಲರಾದಾಗ ರಟ್ಟರು ಸ್ವತಂತ್ರರಾಗಿ ಚಲುಕ್ಯರ ಶೀಮೆಗಳನ್ನು ಕಸುಕೊಳ್ಳುವರು. ಸನ್ ೭೬೦ರಲ್ಲಿ ದಂತಿವರ್ಮನೆಂಬ ರಟ್ಟ ಕುಲದ ಅರಸು ಚಲುಕ್ಯರನ್ನು ಗೆದ್ದು ಓಡಿಸಿದನು. ಸವದತ್ತಿಯ ರಟ್ಟರ ಇತಿಹಾಸವನ್ನು ಕೆಳಗೆ ಕೊಟ್ಟಿದ್ದೇವೆ.

೨ನೇ ತೈಲಪ, (೯೭೩-೯೯೯).—ಇವನು ರಾಷ್ಟ್ರಕೂಟರ ೪ನೇ ಕೃಷ್ಣ ರಾಜನ ಮಗನಾದ ೩ನೇ ಕಕ್ಕಲನೆಂಬ ಅರಸನನ್ನು ಕೊಂದು ಚಲುಕ್ಯರ ಪೂರ್ವದ ಸಾಮ್ರಾಜ್ಯವನ್ನು ಮತ್ತೊಮ್ಮೆ ನೆಲೆಗೊಳಿಸಿದನು. ಇಡೀ ಕುಂತಲ ದೇಶವನ್ನು (ಅಂದರೆ ಕರ್ನಾಟಕ ದೇಶವನ್ನು) ಇವನು ಆಳುತ್ತಿದ್ದನೆಂದು ವೊಂದು ಲಿಪಿಯಲ್ಲಿ ಬರಿದದೆ. ಇವನಿಗೆ ಆಹವ ಮಲ್ಲನೆಂತಲೂ ಹೆಸರಿತ್ತು. ಇವನ ಹೆಂಡತಿ ಮೇಲೆ ಹೇಳಿದ ಕಕ್ಕಲ ರಾಜನ ಮಗಳು ಜಾಕಲಾದೇವಿ. ಇವನು ಚೇದಿ, ಉತ್ಕಲ (ಒಡಿಸಾ), ದೇಶಗಳ ಅರಸರನ್ನು ಗೆದ್ದನಂತೆ.

೨ನೇ ಸತ್ಯಾಶ್ರಯ, (೯೯೯-೧೦೦೮).— ಕರ್ನಾಟಕದ ಹೊರ್ತು ಕೊಂಕಣದಲ್ಲಿ ಆಳುತ್ತಿದ್ದ ಶಿಲಾಹಾರರೆಂಬ ಅರಸರು ಇವನ ಮಾಂಡಲಿಕರಾಗಿದ್ದರು.

ಸತ್ಯಾಶ್ರಯನ ತಮ್ಮನಾದ ದಾಸವರ್ಮನ ಲೇಖಗಳು ಕೆಲವು ಕಡೆಯಲ್ಲಿ ಇರುತ್ತವೆ. ಆದರೆ ಅವನು ಅರಸನಾಗಿ ಆಳಿದಂತೆ ತೋರುವದಿಲ್ಲ.

೫ನೇ ವಿಕ್ರಮಾದಿತ್ಯ, (೧೦೦೮-೧೦೧೮).—ಇವನಿಗೆ ೧ನೇ ತ್ರಿಭುವನ ಮಲ್ಲನೆಂತಲೂ ಅನ್ನುವರು. ಇವನು ದಾಸವರ್ಮನ ಹಿರಿ ಮಗನು.

ಮೇಲಿನ ಅರಸನ ತಮ್ಮನಾದ ೨ನೇ ಅಯ್ಯನನೆಂಬವನು ಅರಸನಾದಂತೆ ತೋರುವದಿಲ್ಲ.

೩ನೇ ಜಯಸಿಂಹ, (೧೦೧೮-೧೦೪೨).—ಇವನಿಗೆ ೧ನೇ ಜಗದೇಕ ಮಲ್ಲನೆಂಬ ಬಿರುದು ಇತ್ತು. ಇವನು ೫ನೇ ವಿಕ್ರಮನ ಕಡೆಯ ತಮ್ಮನು. ಇವನ ಹೆಂಡತಿಯ ಹೆಸರು ಸಗ್ಗಲಾದೇವಿ. ಇವನು ಯೇಳು ಕೊಂಕಣಗಳನ್ನು ಕೈವಶ ಮಾಡಿ ಕೊಂಡನೆಂತಲೂ ಚೋಳ ರಾಜನನ್ನು ಗೆದ್ದನೆಂತಲೂ ತಿಳಿದದೆ. ಇವನ ರಾಜಧಾನಿ ಮದಗದ ದಕ್ಷಿಣದಲ್ಲಿ, ಅಂದರೆ ಮೈಸೂರು ಶೀಮೆಯಲ್ಲಿ ಇರುವ ಬೆಲಗಾಮೆ ಯೆಂಬ ಊರು ಇತ್ತು. ಇನ್ನು ವೊಂದೆರಡು ಗ್ರಾಮಗಳು ಇವನ ರಾಜಧಾನಿಗಳೆನಿಸುತ್ತಿದ್ದವೆಂದು ತೋರುತ್ತದೆ.

೧ನೇ ಸೋಮೇಶ್ವರ, (೧೦೪೨-೧೦೬೮).—ಇವನು ಮೂರನೇ ಜಯಸಿಂಹನ ಮಗ; ೨ನೇ ತ್ರೈಲೋಕ್ಯ ಮಲ್ಲನೆಂತಲೂ ೧ನೇ ಅಹವಲ್ಲನೆಂತಲೂ ಬಿರುದುಗಳಿದ್ದವು. ಇವನಿಗೆ ಬಚ್ಚಲಾದೇವಿ, ಚಂದಲಾದೇವಿ, ಮೈಲಲಾದೇವಿ, ಯೆಂಬ ಮೂವರು ಹೆಂಡರಿದ್ದರು. ಇವನ ಹೆಂಡತಿ ಮೈಲಾದೇವಿಯೂ, ೨ನೇ ಸೋಮೇಶ್ವರ, ೬ನೇ ವಿಕ್ರಮ, ಯೆಂಬ ಮಕ್ಕಳೂ ಬಹು ಶೌರ್ಯದಿಂದ ಯುದ್ಧಗಳನ್ನು ಮಾಡಿ ರಾಜ್ಯವನ್ನು ಬೆಳಿಸಿದರು. ಚೋಳ ರಾಜನು ಇವನ ರಾಜ್ಯದಲ್ಲಿ ಬಂದು ದಾಳಿಯನ್ನು ನಡಿಸಲಾಗಿ, ೧ನೇ ಸೋಮೇಶ್ವರನು ಅವನನ್ನು ಸೋಲಿಸಿ, ಕಾಂಚಿಯ ವರೆಗೆ ಬೆನ್ನಟ್ಟಿ ಆ ಪಟ್ಟಣವನ್ನು ಸುಲಿದನು. ಇವನ ಆಳಿಕೆಯಲ್ಲಿ ಕಲ್ಯಾಣ ಪಟ್ಟಣವು ಇವನ ರಾಜಧಾನಿ ಇತ್ತು. ಇವನಿಂದ ಮುಂದೆ ಈ ವಂಶಕ್ಕೆ "ಚಲುಕ್ಯ"ವೆಂಬದಕ್ಕೆ ಬದಲಾಗಿ "ಚಾಲುಕ್ಯ"ವೆನ್ನಹತ್ತಿದರು. ಇದರ ಕಾರಣವು ತಿಳಿದಿಲ್ಲ. ೧ನೇ ಸೋಮೇಶ್ವರನು ಮಾಳವದಲ್ಲಿ ಧಾರಾ ನಗರದ ಅರಸನಾದ ಭೋಜನನ್ನೂ, ತ್ರಿಪುರ (ತೆವಾರ) ಪಟ್ಟಣದ

ಕಲಭುರಿ ವಂಶದ ಕರ್ಣನೆಂಬ ಅರಸನನ್ನೂ ಗೆದ್ದನು. ಕಲ್ಯಾಣ ಪಟ್ಟಣವನ್ನು ಪ್ರೌಳಿತಾಗಿ ಶೃಂಗರಿಸಿದನು.

ಈ ಸಂಧಿಯಲ್ಲಿ ಚಲುಕ್ಯರ ಪಶ್ಚಿಮ ವಂಶವೂ ಪೂರ್ವ ವಂಶವೂ ಕೂಡಿ ಯೇನೋ ಗೊಂದಲವಾದಂತೆ ತೋರುತ್ತದೆ. ಕಲ್ಯಾಣ ಪಟ್ಟಣವು ಪೂರ್ವ ವಂಶದವರ ರಾಜಧಾನಿಯೆಂತಲೂ, ಆ ಪೂರ್ವ ವಂಶದವರಿಗೆ "ಚಲುಕ್ಯ"ರೆನದೆ, "ಚಾಲುಕ್ಯರೆಂದೆನ್ನುತ್ತಿದ್ದರೆಂತಲೂ ತೋರುತ್ತದೆ." ಪೂರ್ವ ಚಾಲುಕ್ಯರ ರಾಜ್ಯವನ್ನು ಚೋಳ ರಾಜರು ಆಕ್ರಮಿಸಿ, ಕಲ್ಯಾಣ ಪಟ್ಟಣದಲ್ಲಿ ಕೆಲವು ಕಾಲ ಆಳಿದರೆಂದೆನ್ನಲಿಕ್ಕೂ ಆಧಾರವದೆ. ಈ ಪೂರ್ವ ಚಾಲುಕ್ಯ ರಾಜ್ಯದಲ್ಲಿ ೧ನೇ ಸೋಮೇಶ್ವರನ ಮಗನಾದ ವಿಷ್ಣುವರ್ಧನನೆಂಬವನು ಮಹಾ ಮಂಡಲೇಶ್ವರನಾಗಿ ಮೈಸೂರು ಶೀಮೆಯಲ್ಲಿ ಆಳುತ್ತಿದ್ದನೆಂದು ತಿಳಿದದೆ.

೨ನೇ ಸೋಮೇಶ್ವರ, (೧೦೬೮-೧೦೭೬).— ಇವನು ೧ನೇ ಸೋಮೇಶ್ವರನ ಹಿರಿ ಮಗನು. ಇವನು ದುರ್ಬಲನಿದ್ದನೆಂದು ತೋರುತ್ತದೆ. ಆದರೂ ಬಂಕಾಪುರದಲ್ಲಿ ಮಂಡಲೇಶ್ವರನಾಗಿ ಆಳುತ್ತಿದ್ದ ಗಂಗ ಕುಲದ ಉದಯಾದಿತ್ಯನೆಂಬ ಕಲಿಯು ಚೇರ, ಚೋಳ, ಪಾಂಡ್ಯ, ಪಲ್ಲವ ಅರಸರನ್ನು ಗೆದ್ದು ಕಪ್ಪಗಾಣಿಕೆಯನ್ನು ತಕ್ಕೊಂಡನು. ಈ ೨ನೇ ಸೋಮೇಶ್ವರನ ತಮ್ಮನಾದ ೬ನೇ ವಿಕ್ರಮಾದಿತ್ಯನು ಇವನನ್ನು ತಳ್ಳಿ ಸಿಂಹಾಸನವನ್ನು ಆಕ್ರಮಿಸಿದನು.

೬ನೇ ವಿಕ್ರಮಾದಿತ್ಯನು, (೧೦೭೬-೧೧೨೬).— ಇವನಿಗೆ ೨ನೇ ತ್ರಿಭುವನಮಲ್ಲ, ಪೆರ್ಮಾಡಿ, ಕಲಿವಿಕ್ರಮ ಯೆಂಬ ಬಿರುದುಗಳಿದ್ದವು. ಇವನು ತನ್ನ ಹೆಸರಿನ ಶಕ ಕಾಲವನ್ನು ನೆಲೆಗೊಳಿಸಿದನು. ಅದು ಇವನು ಸಿಂಹಾಸನ ವೇರಿದಂದಿನಿಂದ, ಅಂದರೆ ಕ್ರಿ. ಶ. ೧೦೭೬ನೇ ವರ್ಷದಿಂದ "ಚಾಲುಕ್ಯ ವಿಕ್ರಮ ಶಕ" ಯೆಂಬ ಹೆಸರಿನಿಂದ ಆರಂಭವಾಯಿತು. ಆದರೆ ಈ ಶಕವು ಮುಂದೆ ಇವನ ವಂಶದವರಲ್ಲಿ ಮಾತ್ರ ಸ್ವಲ್ಪ ದಿವಸ ನಡೀತು. ಈಗಿನ ನಿಜಾಮನ ರಾಜ್ಯ, ದಕ್ಷಿಣ ಮಹಾರಾಷ್ಟ್ರ, ಕಾನಡಾ, ಮೈಸೂರ ಶೀಮೆಯ ದೊಡ್ಡ ಭಾಗ, ಇಷ್ಟೆಲ್ಲ ಪ್ರದೇಶಗಳು ಇವನ ರಾಜ್ಯಕ್ಕೆ ಶೇರಿದ್ದವು. ಇದಲ್ಲದೇ ಈ ವಿಕ್ರಮನು ನರ್ಮದೆಯನ್ನು ದಾಟ ನಾಗಪುರದ ವರೆಗೆ ದೇಶವನ್ನು ಅಭಿಗಮಿಸಿ ಅಲ್ಲಿಯ ಅರಸರನ್ನು ಗೆದ್ದನೆಂದು ತೋರುತ್ತದೆ. ಇವನಿಗೆ ಬಹು ಜನರು ಹೆಂಡರಿದ್ದರು. ಯೇಳು ಜನ ಹೆಂಡರ ಹೆಂಗಸರುಗಳು ಇದು ವರೆಗೆ ತಿಳಿದವೆ. ೬ನೇ ವಿಕ್ರಮ ರಾಜನು ವಿಖ್ಯಾತನಾದ ಕಲಿಯೂ ಚತುರನೂ ಇದ್ದನು. ಇವನು ಉತ್ತರದಲ್ಲಿ ಗೌಡ, ಕಾಮರೂಪ ದೇಶಗಳ ವರೆಗೂ ದಕ್ಷಿಣದಲ್ಲಿ ಸಿಂಹಲ ದ್ವೀಪದ ವರೆಗೂ ಅರಸರನ್ನು ಪಾದಾಕ್ರಾಂತರನ್ನು ಮಾಡಿದನು. ಇವನ ಅಣ್ಣನಾದ ೨ನೇ ಸೋಮೇಶ್ವರನು ಕಾಂಚಿಯ ಅರಸನಿಗೆ ಕೂಡಿ ಇವನಿಗೆ ವಿರೋಧವಾಗಿ ದಾಳಿಯ ಮಾಡಿದ್ದರಿಂದ ಇವನು ಸೋಮೇಶ್ವರನನ್ನು ತಳ್ಳಿದನು. ಇವನ ತಮ್ಮನಾದ ೩ನೇ ಜಯಸಿಂಹನು ಬನವಾಸಿಯಲ್ಲಿ ಮಂಡಲೇಶ್ವರನಾಗಿ ಆಳುತ್ತಿರಲು, ಅವನು ಬಂಡಾಯ ಮಾಡಿದನು. ಆದರೆ ವಿಕ್ರಮನು ಬೇಗತೆ ಬಂಡಾಯ ಮುರಿದು ಜಯಸಿಂಹನನ್ನು ಶರೆ ಹಿಡಿದನು. ಪೂರ್ವದಿಂದ ನಡಿದು ಬಂ

ದಂತೆ ಈ ವಿಕ್ರಮ ರಾಜನು ಬುದ್ಧಯತಿಗಳಿಗೂ ದೇವಸ್ಥಾನಗಳಿಗೂ ಬಹಳ ಆಶ್ರಯ ಕೊಟ್ಟನು. ಚಾಲುಕ್ಯ ಕುಲದ ಅರಸರು ಸ್ವತಃ ಬೌದ್ಧ ಮತದವರಲ್ಲದಾಗ್ಯೂ, ಆ ಧರ್ಮದ ಸತ್ಪುರುಷರಿಗೂ ದೇವಸ್ಥಾನಗಳಿಗೂ ಬಹಳ ಮಾನ ಕೊಡುತ್ತಿದ್ದರು. ಇವನ ಕಾಲದ ಲಿಪಿಗಳು ೨೦೦ ದೊರಿದವೆ. ಅವುಗಳಿಂದ ಆ ಕಾಲದ ಸ್ಥಿತಿ ರೀತಿಗಳೂ, ವ್ಯವಹಾರ ಧರ್ಮ ಮುಂತಾದವುಗಳೂ ಸರಸಾಗಿ ತಿಳಿಯುವ ಹಾಗಿವೆ.

೪ನೇ ಜಯಸಿಂಹನು ಅಣ್ಣನ ತರುವಾಯ ಸಿಂಹಾಸನವೇರಿದಂತೆ ತೋರುವದಿಲ್ಲ. ಇವನ ತಾಯಿಯು ಪಲ್ಲವ ವಂಶದವಳೆಂದು ತಿಳಿದದೆ. ಇದರಂತೆ ೬ನೇ ವಿಕ್ರಮನ ಮಗನಾದ ಜಯಕರ್ಣನಾದರೂ ತಂದೆಯ ತರುವಾಯ ರಾಜ್ಯಾಧಿಕಾರಿಯಾಗಲಿಲ್ಲೆಂದು ತೋರುತ್ತದೆ.

೩ನೇ ಸೋಮೇಶ್ವರ, (೧೧೨೬-೧೧೩೮).—ಇವನಿಗೆ ಭೂಲೋಕ ಮಲ್ಲನೆಂಬ ಬಿರುದಿತ್ತು.

೨ನೇ ಜಗದೇಶಮಲ್ಲ, (೧೧೩೮-೧೧೫೦).—ಇವನು ೩ನೇ ಸೋಮೇಶ್ವರನ ಹಿರಿ ಮಗನು. ೨ನೇ ಜಗದೇಶಮಲ್ಲನೆಂದು ಈ ಅರಸನ ಬಿರುದು ಇರುತ್ತದೆ; ಇವನ ನಿಜವಾದ ಹೆಸರು ತಿಳಿದಿಲ್ಲ. ಕಲಚೂರಿ ವಂಶದ ಬಿಜ್ಜಳನೆಂಬ ಅರಸು ನೋನಂಬವಾಡಿಯಲ್ಲಿ ಇದೇ ಕಾಲಕ್ಕೆ ಇವನ ಮಾಂಡಲಿಕನಾಗಿ ಅಥವಾ ಸ್ವತಂತ್ರ ಆಳುತ್ತಿದ್ದನು.

೩ನೇ ತ್ರೈಲಪ, (೧೧೫೦-೧೧೬೧).—ಇವನು ಜಗದೇಶಮಲ್ಲನ ತಮ್ಮನು; ಇವನಿಗೆ ೩ನೇ ತ್ರೈಲೋಕ್ಯಮಲ್ಲನೆಂಬ ಬಿರುದು ಇತ್ತು. ಈ ಅರಸು ಆನೆಯ ಮೇಲೆ ಕೂಡುವದರಲ್ಲಿ ಹೆಸರಾಗಿದ್ದನು, ಯುದ್ಧದಲ್ಲಿ ಬಹು ಪರಾಕ್ರಮಿ ಯೆನಿಸುತ್ತಿದ್ದನು. ಆದರೆ ತೆಲಗು ದೇಶದ ಶಾಕತೀಯ ವಂಶದ ಅರಸನಾದ ರುದ್ರದೇವನು ಇವನನ್ನು ಯುದ್ಧದಲ್ಲಿ ಶರೆ ಹಿಡಿದು, ಇವನ ಭಕ್ತಿ ಭಾವ ನೋಡಿ ಬಿಟ್ಟು ಕೊಟ್ಟನು. ಆದರೂ ಇವನ ಕೈ ಕೆಳಗೆ ದಳವಾಯಿಯಾಗಿದ್ದ ಮೇಲೆ ಹೇಳಿದ ಬಿಜ್ಜಳನು ಇವನನ್ನು ಓಡಿಸಿ, ಚಾಲುಕ್ಯ ಕುಲದವರನ್ನೆಲ್ಲ ಕೊಂದು ಚಾಲುಕ್ಯರ ಕಲ್ಯಾಣ ಪಟ್ಟಣದ ಸಿಂಹಾಸನವನ್ನು ಆಕ್ರಮಿಸಿದನು.

೪ನೇ ಸೋಮೇಶ್ವರ, (೧೧೮೪-೧೧೮೯).—ತ್ರೈಲಪನ ತರುವಾಯ ಬಿಜ್ಜಳನು ಕಲ್ಯಾಣಪುರದ ಸಿಂಹಾಸನವನ್ನು ಆಕ್ರಮಿಸಿ, ಸುಮಾರು ೨೧ ವರ್ಷ ಆಳಿದ ಬಳಿಕ ೪ನೇ ಸೋಮೇಶ್ವರನು ಚಾಲುಕ್ಯರ ವಂಶದ ಅಧಿಕಾರವನ್ನು ಮತ್ತೆ ನೆಲೆಗೊಳಿಸಿದನು, (೧೧೮೪). ಬರಮರಸನೆಂಬ ದಂಡನಾಯಿಕನ ಸಹಾಯದಿಂದ ಸೋಮೇಶ್ವರನಿಗೆ ರಾಜ್ಯಾಧಿಕಾರ ಸಿಕ್ಕಿತೆಂದು ತೋರುತ್ತದೆ. ಆದರೆ ಇವನು ಕಲ್ಯಾಣದಲ್ಲಿ ಆಳಲಿಲ್ಲ; ಅಣ್ಣೀಗೇರಿಯಲ್ಲಿ ಆಳಿದನು. ಇದರಿಂದ ಕಲ್ಯಾಣದಲ್ಲಿ ಬಿಜ್ಜಳನ ಸಾಮ್ರಾಜ್ಯಾಧಿಕಾರವು ನಡಿದಿರಲಾಗಿ, ಅಣ್ಣೀಗೇರಿಯಲ್ಲಿ ಸೋಮೇಶ್ವರನು ತಾನು ಸ್ವತಂತ್ರ ಅರಸನೆಂದೆನಿಸಿಕೊಂಡು ಸ್ವಲ್ಪ ರಾಜ್ಯವನ್ನು ಕ್ರಿ. ಶ. ೧೧೮೪ರಿಂದ ೧೧೮೯ರ ವರೆಗೆ ಆಳಿದನೆಂದು ಸಿದ್ಧವಾಗುತ್ತದೆ. ಕ್ರಿ. ಶ. ೧೧೮೯ನೇ ವರ್ಷದಲ್ಲಿ ಸೋಮೇಶ್ವರನು ಬರಿಸಿದ್ದೊಂದು ಲಿಪಿ

ಯು ದೊರಿದದೆ. ಇದರ ನಂತರ ಅವನು, ಅಥವಾ ಅವನ ಮಗನು ಬಲ್ಲಾಳರ ಮಾಂಡಲಿಕನಾದನೆಂದು ತೋರುತ್ತದೆ. ಇಲ್ಲಿಗೆ ಚಾಲುಕ್ಯರ ಸಾಮ್ರಾಜ್ಯ ನಷ್ಟವಾಯಿತು.

ಬಿಜ್ಜಳ.—ಇವನು ಕಲಚೂರಿ ವಂಶದವನು. ಈ ವಂಶದವರಿಗೆ ಕಲಿಂಜರಪುರವರಾಧೀಶ್ವರರೆಂಬ ಬಿರುದು ಇತ್ತು. ಇವರಿಗೆ ಹೈಹಯ ವಂಶದವರೆಂತಲೂ ಅನ್ನುವರು. ಮಾಹಿಷ್ಮತಿಯಲ್ಲಿ ಬುನಾದಿಯಲ್ಲಿ ಆಳಿದ ಸಹಸ್ರಬಾಹು ಕಾರ್ತವೀರ್ಯಾರ್ಜುನನು ತಮ್ಮ ಮೂಲ ಪುರುಷನೆಂದು ಇವರು ಹೇಳುವರು. ಆದರೆ ಮಾಹಿಷ್ಮತಿಯು ನರ್ಮದಾ ತೀರದಲ್ಲಿ ಇತ್ತು; ಕಲಚೂರಿಗಳ ಮೂಲ ರಾಜಧಾನಿಯಾದ ಕಲಿಂಜರ ಪುರವು ಚೇದಿ ದೇಶದಲ್ಲಿ, ಅಂದರೆ ಬುಂದೇಲ ಖಂಡದಲ್ಲಿ, ಇರುತ್ತದೆ. ಕಲಿಂಜರದಲ್ಲಿ ಇವರು ಯಾವ ಕಾಲದಲ್ಲಿ ಆಳಿದರೆಂಬುವದು ತಿಳಿದಿಲ್ಲ. "ಕಲಚೂರಿ ಸಂವತ್" ಯೆಂಬ ಶಕವು ಕ್ರಿಸ್ತೀ ಶಕದ ೨೪೯ನೇ ವರ್ಷದಲ್ಲಿ ಆರಂಭವಾಗುತ್ತದೆ. ಈ ಶಕವನ್ನು ಸ್ಥಾಪಿಸಿದ ಕಲಚೂರೀ ಕುಲದ ಮೊದಲನೇ ಅರಸು ತ್ರಿಪುರವೆಂಬ ಪಟ್ಟಣದಲ್ಲಿ ಆಳಿದನೆಂದು ತಿಳಿದದೆ. ಜಬಲ ಪುರದಿಂದ ೭ ಮೈಲಿನ ಮೇಲೆ ಇರುವದೊಂದು "ತೇವಾರ"ವೆಂಬ ಹಳ್ಳಿಯೇ ತ್ರಿಪುರವೆಂದು ಗೊತ್ತಾಗಿದೆ.

ಕಲಚೂರಿಗಳು ದಕ್ಷಿಣಕ್ಕೆ ಯಾವ ಕಾಲದಲ್ಲಿ ಬಂದರೆಂಬದು ತಿಳಿದಿಲ್ಲ. ಇವರ ವಂಶದವರು ಚಾಲುಕ್ಯರ ಮಾಂಡಲೀಕರಾಗಿ ಬೇರೆ ಬೇರೆ ಕಡೆಯಲ್ಲಿ ಆಳಿದರು. ಬಿಜ್ಜಳನು ಈಗಿನ ಮೈಸೂರ ಸೀಮೆಯಲ್ಲಿ ಇದ್ದ ನೋನಂಬವಾಡಿ ಯೆಂಬಲ್ಲಿ ಚಾಲುಕ್ಯರ ದಂಡನಾಯಿಕನಾಗಿ ಆಳುತ್ತಿದ್ದನೆಂದು ಮೇಲೆ ತಿಳಿಸಿದ್ದೇವೆ. ೩ನೇ ತೈಲಪನನ್ನು ತೆಲಗು ದೇಶದ ಅರಸನಾದ ರುದ್ರದೇವನು ಸೋಲಿಸಿದ ಬಳಿಕ ಬಿಜ್ಜಳನು ಪ್ರಬಲನಾಗಿ ಕಲ್ಯಾಣ ಪುರದ ಸಿಂಹಾಸನವನ್ನು ಆಕ್ರಮಿಸಿದನೆಂದು ಹಿಂದೆ ಹೇಳಿದ್ದೇವೆ. ಇವನು ಜೈನನು. ಇವನ ಮಂತ್ರಿಯೂ ಲಿಂಗವಂತ ಮತದ ಸ್ಥಾಪಕನೂ ಆದ ಬಸವೇಶ್ವರನಿಗೂ ಇವನಿಗೂ ಕಲಹ ನಡಿದು ಕಡೆಯಲ್ಲಿ ಬಸವೇಶ್ವರನು ಬಿಜ್ಜಳನನ್ನು ಕೊಲ್ಲಿಸಿದ ವೃತ್ತಾಂತವನ್ನು ೩ನೇ ಭಾಗದಲ್ಲಿ ಲಿಂಗವಂತರ ವರ್ಣನೆಯಲ್ಲಿ ವಿವರಿಸಿದ್ದೇವೆ; ಬಸವೇಶ್ವರನ ಮರಣದ ವೃತ್ತಾಂತವನ್ನಾದರೂ ಅಲ್ಲೇ ಹೇಳಿದ್ದೇವೆ. ಬಿಜ್ಜಳನು ಕಲಿಯುಗದ ೪೨೬೫ನೇ ವರ್ಷದಲ್ಲಿ, ಅಂದರೆ ಕ್ರಿ. ಶ. ೧೧೬೫ನೇ ವರ್ಷದಲ್ಲಿ, ಕೊಲ್ಲಲ್ಪಟ್ಟನೆಂದು ಬಿಜ್ಜಳಂಕಿನ ಕಾವ್ಯದಲ್ಲಿ ಬರಿದದೆ. ಆದರೆ ಕ್ರಿ. ಶ. ೧೧೬೭ರ ವರೆಗೆ ಬಿಜ್ಜಳನು ಸತ್ತಿದ್ದಿಲ್ಲವೆಂದು ಶಿಲಾ ಲಿಪಿಗಳಿಂದ ತಿಳಿದದೆ. ಬಸವೇಶ್ವರನ ತರುವಾಯ ಅವನ ಸೋದರಳಿಯನಾದ ಚನ್ನಬಸವೇಶ್ವರನು ದಾಳಿಯನ್ನೆಬ್ಬಿಸಿದಾಗ್ಯೂ ಬಿಜ್ಜಳನ ಮಗನಾದ ಸೋಮೇಶ್ವರನು ಆ ಬಂಡಾಯ ಮುರಿದನು.

ಈ ಸೋಮೇಶ್ವರನಿಗೆ ಸೋವಿ ದೇವನೆಂತಲೂ ರಾಯಮುರಾರಿ ಯೆಂತಲೂ ಅನ್ನುವರು. ಇವನು ಕ್ರಿ. ಶ. ೧೧೬೭ರಿಂದ ೧೧೭೫ರ ವರೆಗೆ ಕಲ್ಯಾಣದಲ್ಲಿ ಆಳಿದನು. ಇವನ ಆಳಿಕೆಯಲ್ಲಿ ಗೌರವದ ಸಂಗತಿಗಳೇನು ವರ್ತಿಸಿದಂತೆ ತೋರುವದಿಲ್ಲ. ಈ ಕಾಲದಲ್ಲಿ ದಕ್ಷಿಣದಲ್ಲಿ ದ್ವಾರ ಸಮುದ್ರದ ಬಲ್ಲಾಳ ಅರಸರು ಪ್ರಬಲರಾಗುತ್ತಾ ನಡಿದಿದ್ದರು. ಸೋ

ಮೇಶ್ವರನ ತರುವಾಯ ಅವನ ತಮ್ಮನಾದ ಸಂಕಮನೆಂಬವನು ಅರಸನಾದನು. ಆದರೆ ಸಂಕಮನ ಇಬ್ಬರು ತಮ್ಮಂದಿರು, ಆಹವಮಲ್ಲ, ಸಿಂಹಣ, ಯೆಂಬವರು ಸಹ ಸಂಕಮನಿಗೆ ಸರಿಯವರಾಗಿ ಏಕ ಕಾಲಕ್ಕೆ ಆಳುತ್ತಿದ್ದರೆಂದು ತೋರುತ್ತದೆ. ಆಹವಮಲ್ಲನು ಚೋಳ, ಬಲ್ಲಾಳ ಅರಸರ ಕೂಡ ಯುದ್ಧ ಮಾಡಿದನೆಂದು ವೊಂದು ಲಿಪಿಯಲ್ಲಿ ಬರಿದದೆ. ಆದರೆ ಕ್ರಿ. ಶ. ೧೧೦೫ನೇ ವರ್ಷದ ನಂತರ ಸ್ವಲ್ಪ ಕಾಲದೊಳಗೆ ದ್ವಾರ ಸಮುದ್ರದ ವೀರಬಲ್ಲಾಳನೆಂಬ ಅರಸು ಈ ಕಲಚೂರಿ ಅಣ್ಣ ತಮ್ಮಂದಿರನ್ನು ಜಯಿಸಿ ಚಾಲುಕ್ಯರ ರಾಜ್ಯವನ್ನು ಆಕ್ರಮಿಸಿದನು.

## ದೇವಗಿರಿಯ ಯಾದವರು.

ಕ್ರಿ. ಶ. ೧೧ನೇ ಶತಕದ ಕಡೆಯ ಸುಮಾರಿನಲ್ಲಿ ಯಾದವ ಕುಲದ ಸಿಂಹಣನೆಂಬ ಪರಾಕ್ರಮಿಯು ದೇವಗಿರಿಯಲ್ಲಿ, ಅಂದರೆ ದೌಲತಾಬಾದಿಯಲ್ಲಿ ಸ್ವತಂತ್ರವಾದ ರಾಜ್ಯವನ್ನು ಸ್ಥಾಪಿಸಿದನು. ಮೇಲೆ ಹೇಳಿದ ದ್ವಾರ ಸಮುದ್ರದ ಬಲ್ಲಾಳರಾದರೂ ಯಾದವ ಕುಲದವರೇ. ಆದರೆ ಅವರಿಗೂ ದೇವಗಿರಿಯವರಿಗೂ ಸಂಬಂಧವಿದ್ದಂತೆ ತೋರುವದಿಲ್ಲ. ಚಾಲುಕ್ಯ ರಾಜ್ಯದ ಸಮಾಪ್ತಿಯ ಕಾಲಕ್ಕೆ ಆ ರಾಜ್ಯದ ದಕ್ಷಿಣ ಭಾಗವನ್ನು, ಬಹುತರ ಕೃಷ್ಣೆಯ ವರೆಗೆ ಬಲ್ಲಾಳರು ಆಕ್ರಮಿಸಿದಂತೆ ಉತ್ತರ ಭಾಗವನ್ನು ದೇವಗಿರಿಯ ಯಾದವರು ಆಕ್ರಮಿಸಿದರು. ಆದರೆ ಚಾಲುಕ್ಯರು ಹಾಳಾದ ಸಂಧಿಯಲ್ಲಿ ಅಂದರೆ ಕ್ರಿ. ಶ. ೧೧೮೭ನೇ ವರ್ಷ ದೇವಗಿರಿಯಲ್ಲಿ ಭಿಲ್ಲಮನೆಂಬ ಅರಸು ಪಟ್ಟವೇರಿದ ಬಳಿಕ ಅಣ್ಣೀಗೇರಿಯ ವರೆಗೆ ಅವನ ಅಧಿಕಾರವು ಹಬ್ಬಿತು. ಭಿಲ್ಲಮನ ಮಹಾ ಮಂಡಲೇಶ್ವರನಾದ ಬಾಚಿ ರಾಜನೆಂಬವನು ಕ್ರಿ. ಶ. ೧೧೯೧ನೇ ವರ್ಷದ ಸುಮಾರಿನಲ್ಲಿ ಅಣ್ಣೀಗೇರಿಯಲ್ಲಿ ಬೆಳುವಲು ನಾಡಿನ ವೊಡೆಯನಾಗಿ ಆಳುತ್ತಿದ್ದನೆಂದು ವೊಂದು ಲಿಪಿಯು ಹೇಳುತ್ತದೆ. ಇದರಂತೆ ವಿಜಾಪುರ ಜಿಲ್ಲೆಯಲ್ಲಿ ಭೈರವಾಡಿಗೆಯಲ್ಲಿಯೂ ಹಿಪ್ಪರಿಗೆಯಲ್ಲಿಯೂ ಭಿಲ್ಲಮನ ಮಂಡಲೇಶ್ವರರು ಆಳುತ್ತಿದ್ದರು. ೧ನೇ ಜೇತುಗಿಯೆಂಬ ಯಾದವರ ೪ನೇ ಅರಸು ವಿಜಾಪುರದಲ್ಲಿ ಆಳುತ್ತಿದ್ದನೆಂದು ತೋರುತ್ತದೆ. ಈ ಪ್ರಕಾರ ಯಾದವ ಅರಸರು ಕರ್ನಾಟಕದ ಉತ್ತರ ಭಾಗವನ್ನು ಕ್ರಿ. ಶ. ೧೩೧೧ನೇ ವರ್ಷದ ವರೆಗೆ ಆಳಿದರು. ಆ ವರ್ಷದಲ್ಲಿ ದಿಲ್ಲಿಯ ಅಲ್ಲಾಉದ್ದೀನ ಬಾದಶಹನ ಸರದಾರನಾದ ಮಲಿಖ ಕಾಫುರನು ದೇವಗಿರಿಯ ಕಡೆಯ ಅರಸನಾದ ಸಮುಕರವೆಂಬವನನ್ನು ಕೊಂದು ದೇವಗಿರಿಯನ್ನು ಆಕ್ರಮಿಸಿದನು. ಇಲ್ಲಿಗೆ ಯಾದವರ ಆಳಿಕೆ ತೀರಿತು.

## ದ್ವಾರ ಸಮುದ್ರದ ಬಲ್ಲಾಳರು.

ಇವರಿಗೆ "ಹೊಯಿಸಾಳ ಬಲ್ಲಾಳ" ರೆನ್ನುವರು. ಇವರ ಪೂರ್ವಜನಾದ ಸಾಲನೆಂಬ ಸನ್ಯಾಸಿಯನ್ನು ವೊಂದು ಹುಲಿಯು ತಿನ್ನಲಿಕ್ಕೆ ಬರಲಾಗಿ, ಅವನು "ಹೊಯಿ ಸಾಲ" ಯೆಂದು ನುಡಿದು ಹುಲಿಯನ್ನು ಕೊಂದನಂತೆ. ಆದ್ದರಿಂದ ಅವನ ವಂಶದವರು "ಹೊಯಿ

ಸಾಳ"ವೆಂಬ ಬಿರುದು ಧರಿಸಿದರು. ಇವರಾದರೂ ಯಾದವ ಕುಲದವರೇ. ಇವರು ಚಾಲುಕ್ಯರ ಆಳಿಕೆಯಲ್ಲಿಯೂ ಕಲಚೂರಿಗಳ ಆಳಿಕೆಯಲ್ಲಿಯೂ ಅವರ ಮಂಡಲೇಶ್ವರರಾಗಿ ಈಗಿನ ಮೈಸೂರು ಶೀಮೆಯಲ್ಲಿ ದ್ವಾರ ಸಮುದ್ರವೆಂಬ ಪಟ್ಟಣದಲ್ಲಿ ಆಳುತ್ತಿದ್ದರೆಂದು ತೋರುತ್ತದೆ. ದ್ವಾರ ಸಮುದ್ರವು ಈಗ ಹಾಳಾದ್ದರಿಂದ ಅದಕ್ಕೆ ಹಳೆ ಬೀದಿಯೆನ್ನುತ್ತಾರೆ. ಸಾಲನು ಬಲ್ಲಾಳರ ಮೂಲ ಪುರುಷನಾದಾಗ್ಯೂ, ಶಿಲಾಲಿಪಿಗಳಿಂದ ವಿನಯಾದಿತ್ಯನೆಂಬ ಅರಸನ ವರೆಗೆ ಮಾತ್ರ ಇವರ ವಂಶಾವಳಿಯು ತಿಳಿಯುತ್ತದೆ. ವಿನಯಾದಿತ್ಯನಿಗೆ ತ್ರಿಭುವನ ಮಲ್ಲನೆಂಬ ಬಿರುದಿತ್ತು; ಇವನು ೬ನೇ ಚಾಲುಕ್ಯ ವಿಕ್ರಮಾದಿತ್ಯನ ಆಳಿಕೆಯಲ್ಲಿ ಅವನ ಮಹಾ ಮಂಡಲೇಶ್ವರನಾಗಿ ಪಶ್ಚಿಮ ಸಮುದ್ರತೀರ, ತಳಕಾಡು, ಸಾವಿಮಲೆ ಯೆಂಬ ಶೀಮೆಗಳನ್ನು ಆಳುತ್ತಿದ್ದನು, ಕ್ರಿ. ಶ. ೧೦೪೯—ವಿನಯಾದಿತ್ಯನ ಮೊಮ್ಮಗನಾದ ೧ನೇ ಬಲ್ಲಾಳ ರಾಜನು ಕ್ರಿ. ಶ. ೧೧೦೩ರಲ್ಲಿ ಆಳುತ್ತಿದ್ದನು. ಇವನ ಮಗನಾದ ವಿಷ್ಣುವರ್ಧನನು ಚಾಲುಕ್ಯರ ಮಹಾ ಮಂಡಲೇಶ್ವರನೆನಿಸಿ ಕೊಳ್ಳುತ್ತಿದ್ದಾಗ್ಯೂ, ಚಾಲುಕ್ಯರ ಹಲ ಕೆಲವು ಶೀಮೆಗಳನ್ನು ಆಕ್ರಮಿಸಿಯೂ ಬೇರೆ ಬಗೆಯಾಗಿಯೂ ತನ್ನ ರಾಜ್ಯದ ವಿಸ್ತಾರವನ್ನು ಬಹಳ ಬೆಳಿಸಿದನು. ಇವನೂ ಇವನ ಪೂರ್ವಜರೂ ಜೈನರಿದ್ದರು. ಇವನ ಮೊದಲಿನ ಹೆಸರು ವಿಟ್ಟಿದೇವನು. ಇವನ ಕಾಲದಲ್ಲಿ ಹೆಸರು ಪಡೆದ ರಾಮಾನುಜಾಚಾರ್ಯನಿಗೂ ಇವನ ದರ್ಬಾರಿನಲ್ಲಿ ಇದ್ದ ಜೈನ ಪಂಡಿತರಿಗೂ ೧೮ ದಿವಸ ವಾದ ನಡಿದು ಕಡೆಯಲ್ಲಿ ಆ ಪಂಡಿತರು ಸೋತದ್ದರಿಂದ ವಿಟ್ಟಿದೇವನು ಅವರನ್ನು ಗಾಣದ ಕಣಿಯಲ್ಲಿ ಹಾಕಿ ಗಾಣವಾಡಿಸಿ ಕೊಂದು, ತಾನು ರಾಮಾನುಜಾಚಾರ್ಯನ ಶಿಷ್ಯನಾಗಿ, ವಿಷ್ಣುವರ್ಧನೆಂಬ ಹೆಸರು ಇಟ್ಟು ಕೊಂಡನೆಂದು ಬುಕಾನನ್ ಸಾಹೇಬರು ಬರಿದಿದ್ದಾರೆ. ಇವನು ಕ್ರಿ. ಶ. ೧೧೩೭ರಲ್ಲಿ ಆಳುತ್ತಿದ್ದನು.

ವಿಷ್ಣುವರ್ಧನನ ಮೊಮ್ಮಗನಾದ ೨ನೇ ಬಲ್ಲಾಳ ರಾಜನು, ಅಥವಾ ವೀರ ಬಲ್ಲಾಳನು ಬಲ್ಲಾಳರ ವಂಶದಲ್ಲಿ ಯೆಲ್ಲರಿಗಿಂತ ಶ್ರೇಷ್ಠನು. ಇವನು ಬಿಜ್ಜಳನ ಮಕ್ಕಳನ್ನು ಸೋಲಿಸಿ, ಚಾಲುಕ್ಯ ರಾಜ್ಯದ ದಕ್ಷಿಣ ಭಾಗವನ್ನು ಆಕ್ರಮಿಸಿ ಸಾರ್ವಭೌಮರಾಜನೆನಿಸಿಕೊಂಡನು. ವೀರ ಬಲ್ಲಾಳನು ಕೃಷ್ಣೆಯಿಂದ ರಾಮೇಶ್ವರದ ವರೆಗೆ ಯಾವತ್ತು ದೇಶವನ್ನು ತನ್ನ ರಾಜ್ಯಕ್ಕೆ ಶೇರಿದನೆಂದು ಹೇಳ ಬಹುದು. ಚೋಳ, ಪಾಂಡ್ಯ, ಚೇರ, ಗಂಗ, ಮುಂತಾದ ಅರಸರು ಇವನ ಮಾಂಡಲಿಕರಾಗಿದ್ದರು. ಇವನ ಆಳಿಕೆಯಲ್ಲಿ ಇವನ ಮಹಾಪ್ರಧಾನನೂ ದಂಡನಾಯಿಕನೂ ಆದ ಪೊಳಾಳನು ಹರಿಹರದಲ್ಲಿ ಹರಿ ಹರೇಶ್ವರನ ಗುಡಿಯನ್ನು ಕಟ್ಟಿಸಿದನು. ವೀರ ಬಲ್ಲಾಳನು ಕ್ರಿ. ಶ. ೧೧೮೩ರಿಂದ ೧೨೩೩ರ ವರೆಗೆ ಆಳಿದನು.

ವೀರ ಬಲ್ಲಾಳನ ತರುವಾಯ ನಾಲ್ವರು ಅರಸರು ದ್ವಾರ ಸಮುದ್ರದಲ್ಲಿ ಇಲ್ಲವೆ ಬೇಲೂರಲ್ಲಿ ಆಳಿದರು. ಕಡೆಯ ಅರಸನ ಹೆಸರು ೩ನೇ ಬಲ್ಲಾಳನು. ಅವನನ್ನು ಹಿಂದೆ ಹೇಳಿದ ಮಲಿಖ ಕಾಫುರನು ಕ್ರಿ. ಶ. ೧೩೧೦ರಲ್ಲಿ ಸೋಲಿಸಿ ದ್ವಾರ ಸಮುದ್ರವನ್ನು ಸುಲಿದು ಅಪರಿಮಿತ ದ್ರವ್ಯವನ್ನು ತಕ್ಕೊಂಡು ಹೋದನು. ಇಲ್ಲಿಗೆ ಬಲ್ಲಾಳರ ಆಳಿಕೆ ತೀರಿತೆಂದು ಹೇಳ ಬಹುದು.

## ಸವದತ್ತಿಯ ರಟ್ಟ ರಾಜರು.

ಇವರು ತಾವು ರಾಷ್ಟ್ರಕೂಟ ಅರಸರ ವಂಶದವರೆಂದು ಹೇಳುವರು; ಆದರೆ ರಡ್ಡೇರ ಕುಲದವರೆಂದು ತೋರುತ್ತದೆ. ರಟ್ಟರು ಜೈನ ಧರ್ಮಿಗಳು; ಇವರ ರಾಜ್ಯಧಾನಿ ಸವದತ್ತಿ, ಅಥವಾ ಬೆಳಗಾವಿ. ಇವರ ಮೂಲ ಪುರುಷನಾದ ಮೆರದನೆಂಬುವನೂ, ಅವನ ಮಗ ಪೃಥಿವೀ ರಾಮನೂ ಜೈನ ಧರ್ಮೋಪದೇಶಕರಾಗಿದ್ದರು. ಪೃಥಿವೀ ರಾಮನಿಗೆ ರಾಷ್ಟ್ರಕೂಟರ ೨ನೇ ಕೃಷ್ಣನೆಂಬ ಅರಸು ಮಹಾಮಂಡಲೇಶ್ವರಾಧಿಕಾರವನ್ನು ಕ್ರಿ. ಶ. ೮೭೫ರಲ್ಲಿ ಕೊಟ್ಟನು. ಪೃಥಿವೀ ರಾಮನ ಮಗ ಪಿತ್ತುನ, ಅವನ ಮಗ ಶಾಂತಿವರ್ಮ (೯೬೦), ಅವನ ಮಗ ಅಥವಾ ತಮ್ಮನು, ಅವನ ಮಗ ೧ನೇ ಕಾರ್ತವೀರ್ಯ (೯೮೦), ಇವರೆಲ್ಲರು ಚಾಲುಕ್ಯರ ಮಾಂಡಲಿಕರಾಗಿ ಸವದತ್ತಿಯ ನೆರೆಹೊರೆಯಲ್ಲಿ ಸಣ್ಣ ದೊಡ್ಡ ಶೀಮೆಗಳನ್ನು ಆಳಿದರು. ಇವರ ರಾಜ್ಯಕ್ಕೆ ಕುಹುಂಡಿ ಅಥವಾ ಕುಂಡಿ ದೇಶವೆನ್ನುವರು.

೧ನೇ ಕಾರ್ತವೀರ್ಯನ ಮಕ್ಕಳು ದಾವರಿ ಅಥವಾ ದಾಯಿಮ, ೧ನೇ ಕನ್ನಕೈರ, ಯೆಂಬವರಿಬ್ಬರೂ ರಾಜ್ಯವನ್ನು ಆಳಿದರೆಂದು ತೋರುತ್ತದೆ. ಇದರಂತೆ ಕನ್ನಕೈರನ ಮಕ್ಕಳು, ಎರಗ, ಅಂಕ (೧೦೪೮) ಯೆಂಬವರಿಬ್ಬರೂ ಚಾಲುಕ್ಯರ ಮಾಂಡಲಿಕರಾಗಿ ಆಳಿದರು. ಎರಗನ ಮಗನಾದ ೧ನೇ ಸೇನನಿಗೆ ಕಾಲಸೇನನೆಂತಲೂ ಅನ್ನುವರು. ಅವನ ಇಬ್ಬರು ಮಕ್ಕಳು ೨ನೇ ಕನ್ನಕೈರ, ೨ನೇ ಕಾರ್ತವೀರ್ಯ, ಇವರಿಬ್ಬರೂ ಕೂಡಿ ಕ್ರಿ. ಶ. ೧೦೯೬ನೇ ವರ್ಷದಲ್ಲಿ ಆಳುತ್ತಿದ್ದರು. ೨ನೇ ಕನ್ನಕೈರನ ವಂಶ ಮುಗ್ಗಿತು; ೨ನೇ ಕಾರ್ತವೀರ್ಯನ ವಂಶವು ಕೆಳಗೆ ಬರಿದಂತೆ.

೨ನೇ ಕಾರ್ತವೀರ್ಯ
(ಕ್ರಿ. ಶ. ೧೦೯೬)
|
೨ನೇ ಸೇನ
|
೩ನೇ ಕಾರ್ತವೀರ್ಯ
(೧೧೬೪)
|
೧ನೇ ಲಕ್ಷ್ಮೀದೇವ
(೧೨೦೮)
|
೪ನೇ ಕಾರ್ತವೀರ್ಯ (೧೨೧೮) — ಮಲ್ಲಿಕಾರ್ಜುನ (೧೨೦೮)

೪ನೇ ಕಾರ್ತವೀರ್ಯ
(೧೨೧೮)
|
೨ನೇ ಲಕ್ಷ್ಮೀದೇವ
(೧೨೨೮)

೩ನೇ ಕಾರ್ತಿವೀರ್ಯನು "ಚಕ್ರವರ್ತಿ" ಯೆಂಬ ಪದವಿಯನ್ನು ಧರಿಸಿದನು. ಇವನ ಮುಂದಿನ ಅರಸರು ಮಹಾ ಮಂಡಲೇಶ್ವರರೆನಿಸಿ ಕೊಳ್ಳುತ್ತಿದ್ದಾಗ್ಯೂ ಸಾಮ್ರಾಜ್ಯಾಧಿಪತಿಗಳೆಂದು ಹೇಳಿ ಕೊಳ್ಳುವರು, ಮತ್ತು ತಮ್ಮ ವೊಡೆಯರಾದ ಚಾಲುಕ್ಯ ಸಾರ್ವ ಭೌಮರ ಹೆಸರುಗಳನ್ನು ತಮ್ಮ ಲೇಖಗಳಲ್ಲಿ ಹಿಂದಿನವರಂತೆ ತರುತ್ತಿದ್ದಿಲ್ಲ. ೧ನೇ ಲಕ್ಷ್ಮೀದೇವನ ಕಾಲದಲ್ಲಿ ಬೆಳಗಾವಿಯು ಅವನ ರಾಜಧಾನಿಯಾಯಿತು. ೪ನೇ ಕಾರ್ತಿವೀರ್ಯನೂ ಮಲ್ಲಿಕಾರ್ಜುನನೂ ಕೂಡಿ ಆಳಿದರು. ಕಡೆಯ ಅರಸನಾದ ೨ನೇ ಲಕ್ಷ್ಮೀದೇವನಿಗೆ ಬೊಪ್ಪನ ಸಿಂಗಮೆಂಬ ಬಿರುದಿತ್ತು. ಯಾದವ ಕುಲದ ೨ನೇ ಸಿಂಹಣ ರಾಜನ ಮಂತ್ರಿಯಾದ ವೀಚನನೆಂಬವನು ಕ್ರಿ. ಶ. ೧೨೫೦ನೇ ವರ್ಷದ ಸುಮಾರಿನಲ್ಲಿ ೨ನೇ ಲಕ್ಷ್ಮೀದೇವನನ್ನು ಜಯಿಸಿ ರಟ್ಟರ ಆಳಿಕೆಯನ್ನು ಮುರಿದನೆಂದು ತೋರುತ್ತದೆ.

## ಬನವಾಸಿಯ ಕಾದಂಬ ಅರಸರು.

ಕದಂಬರೆಂಬ ಕುರುಬ ಜಾತಿಯ ಅರಸರ ಮೂಲ ಪುರುಷನಾದ ತ್ರಿಲೋಚನ ಕದಂಬನೆಂಬ ಕಲಿಯು ಆನೇಗುಂದಿಯಲ್ಲಿ ಆಳುತ್ತಿದ್ದ ಇಜಿಪ್ತ ದೇಶದವರಾದ ಅರಸರನ್ನು ಜಡಿದೋಡಿಸಿ, ಶಾಲಿವಾಹನ ಶಕದ ಅರಂಭದ ಸುಮಾರಿನಲ್ಲಿ ಅದೇ ರಾಜಧಾನಿಯಲ್ಲಿ ತನ್ನ ವಂಶವನ್ನು ನೆಲೆಗೊಳಿಸಿದ ಸಂಗತಿಯನ್ನು ಈ ಭಾಗದ ಆರಂಭದಲ್ಲಿ ತಿಳಿಸಿದ್ದೇವೆ. ಚಲುಕ್ಯರ ಬಳಗದವರು ಹ್ಯಾಗೆ ಚಾಲುಕ್ಯರೋ, ಹಾಗೆ ಕದಂಬರ ಬಳಗದವರಾದ ಕಾದಂಬರೆಂಬ ಅರಸರು ಚಲುಕ್ಯರ ರಾಜ್ಯದಲ್ಲಿ ಅವರ ಮಾಂಡಲಿಕರಾಗಿ ಬಹುಕಾಲ ಬನವಾಸಿಯಲ್ಲಿ ಆಳಿದರು. ಇವರು ತಮ್ಮ ಮೂಲ ಪುರುಷನಾದ "ಮುಕ್ಕಣ್ಣನು" (ಅಂದರೆ ತ್ರಿಲೋಚನ) ಶಿವನಿಂದ ಹುಟ್ಟಿದನೆಂದು ವೊಂದು ಲಿಪಿಯಲ್ಲಿ ಬರಿದಿದ್ದಾರೆ. ಈ ಕದಂಬರ ವಂಶದವನಾದ, ಅಥವಾ ಕಾದಂಬರ ಮೂಲ ಪುರುಷನಾದ ೧ನೇ ಮಯೂರ ವರ್ಮನೆಂಬ ಪರಾಕ್ರಮಶಾಲಿಯಾದ ಅರಸನು ತೆಲಗು ದೇಶದ ಅಹಿ ಛತ್ರವೆಂಬ ಪಟ್ಟಣದಿಂದ ಮೂವತ್ತೆರಡು ಗೋತ್ರಗಳಿಗೆ ಶೇರಿದಂಥ ಹನ್ನೆರಡು ಸಾವಿರ ಜನ ಬ್ರಾಹ್ಮಣರನ್ನು ತಂದು ತನ್ನ ರಾಜ್ಯದಲ್ಲಿ ಸ್ಥಾಣುಗೂಢ ಪುರದಲ್ಲಿ, ಅಂದರೆ ಈಗಿನ ಶಿಕಾರಪುರ ತಾಲೂಕಿನಲ್ಲಿ ಇರುವ ತಾಲಗುಂದವೆಂಬಲ್ಲಿ, ಅಗ್ರಹಾರ ಕೊಟ್ಟು ಇಟ್ಟನೆಂದು ಕೆಲವು ಲಿಪಿಗಳಿಂದ ತಿಳಿದದೆ. ಕಾದಂಬರಿಗೆ "ಜಯಂತೀಪುರವರಾಧೀಶ್ವರ" ರೆಂಬ ಬಿರುದು ಇತ್ತು; ಅವರ ಧ್ವಜ ಚಿನ್ಹ ಹನುಮಂತ, ಮುದ್ರೆ ಸಿಂಹದ್ದು, ಕುಲದೇವತೆ ಬನವಾಸಿಯ ಮಧುಕೇಶ್ವರನು.

೧ನೇ ಮಯೂರ ವರ್ಮನ ಪೂರ್ವದಲ್ಲಿ ೭೭ ಜನ ಅರಸರು ಆಳಿದರೆಂತಲೂ, ಅವನ ತರುವಾಯ ೧. ಕೃಷ್ಣವರ್ಮಾ, ೨. ೧ನೇ ನಾಗವರ್ಮಾ, ೩. ವಿಷ್ಣುವರ್ಮಾ, ೪. ಮೃಗವರ್ಮಾ, ೫. ಸತ್ಯವರ್ಮಾ, ೬. ವಿಜಯವರ್ಮಾ, ೭. ೧ನೇ ಜಯವರ್ಮಾ, ೮. ೨ನೇ ನಾಗವರ್ಮಾ, ೯. ೧ನೇ ಶಾಂತಿವರ್ಮಾ, ೧೦. ೧ನೇ ಕೀರ್ತಿವರ್ಮಾ, ೧೧. ಆದಿತ್ಯವರ್ಮಾ, ೧೨. ಚತ್ತಯ ಅಥವಾ ಚತ್ತುಗ, ಯೆಂಬವರು ಕ್ರಮವಾಗಿ ಆಳಿದರೆಂತಲೂ

ಕೆಲವು ಲಿಪಿಗಳಿಂದ ತಿಳಿದದೆ. ಆದರೆ ಇವರ ಇತಿಹಾಸವು ಇನ್ನೂ ಬೈಲಿಗೆ ಬಂದಿಲ್ಲ. ಚತ್ತುಗನ ಮುಂದಿನ ಅರಸನಾದ ೨ನೇ ಜಯವರ್ಮನಿಂದ ಮುಂದಿನ ವಂಶಾವಳಿಯನ್ನು ಕೆಳಗೆ ಕೊಟ್ಟಿದ್ದೇವೆ.

೨ನೇ ಜಯವರ್ಮ
ಅಥವಾ ಜಯಸಿಂಹ

ಮಾವುಲಿದೇವ | ೧ನೇ ತೈಲಪ | ೨ನೇ ಶಾಂತಿವರ್ಮ (ಶಕ. ೧೦೧೦) | ಚೊಕಿದೇವ | ವಿಕ್ರಮ

೧ನೇ ತೈಲಪ → ೨ನೇ ಕೀರ್ತಿವರ್ಮ (ಶಾ. ಶ. ೯೯೦, ೯೯೯)

೨ನೇ ಶಾಂತಿವರ್ಮ → ೨ನೇ ತೈಲಪ (ಶಾ. ಶ. ೧೦೨೧, ೧೦೫೭)

೨ನೇ ತೈಲಪ → ೩ನೇ ಮಯೂರವರ್ಮ (೧೦೫೩) | ಮಲ್ಲಿಕಾರ್ಜುನ (೧೦೫೪, ೧೦೫೭) | ತೈಲಮ

ತೈಲಮ → ೨ನೇ ಕೀರ್ತಿದೇವ | ಕಾಮದೇವ (೧೧೨೫)

ಇವರಲ್ಲಿ ೨ನೇ ಕೀರ್ತಿವರ್ಮನು ಚಾಲುಕ್ಯರ ೧ನೇ ಸೋಮೇಶ್ವರನ ಆಳಿಕೆಯಲ್ಲಿಯೂ ೬ನೇ ವಿಕ್ರಮನ ಆಳಿಕೆಯಲ್ಲಿಯೂ ಮಂಡಲೇಶ್ವರನಾಗಿ ಬನವಾಸಿಯಲ್ಲಿ ಆಳುತ್ತಿದ್ದನೆಂದು ತಿಳಿದದೆ. ಇದರಂತೆ ಮೇಲಿನ ವಂಶಾವಳಿಯಲ್ಲಿ ಯಾರ ಯಾರ ಹೆಸರಿನ ಮುಂದೆ ಶಕ ವರ್ಷಗಳು ಬರಿಯಲ್ಪಟ್ಟಿರುತ್ತವೆಯೋ ಅವರವರು ಆಯಾ ವರ್ಷದಲ್ಲಿ ಚಾಲುಕ್ಯರ ಮಾಂಡಲಿಕರಾಗಿ ಬನವಾಸಿಯಲ್ಲಿ ಆಳುತ್ತಿದ್ದರೆಂದು ತಿಳಿದದೆ. ಇವರ ಆಳಿಕೆಯಲ್ಲಿ ಬನವಾಸಿಯ ಕೆಳಗೆ ೧೨೦೦೦ ಹಳ್ಳಿಗಳಿದ್ದವು. ಅವಲ್ಲದೆ ಹಾನಗಲ್ಲಿನ ಪರಗಣೆಯೂ ಕಾದಂಬ ಅರಸರ ರಾಜ್ಯಕ್ಕೆ ಶೇರಿತ್ತು. ಅದರಲ್ಲಿ ೫೦೦ ಹಳ್ಳಿದ್ದವು. ೨ನೇ ತೈಲಪನ ಆಳಿಕೆಯಲ್ಲಿ ಬಲ್ಲಾಳರ ವಿಷ್ಣುವರ್ಧನ ರಾಜನು ಕಾದಂಬರ ಯಾವತ್ತು ರಾಜ್ಯವನ್ನು ಕಸುಕೊಂಡಿದ್ದನು. ಆದರೆ ಅದು ಅವನ ಕೈಯಲ್ಲಿ ಬಹಳ ದಿವಸ ನಿಲ್ಲಲಿಲ್ಲ; ಕಾದಂಬರು ತಮ್ಮ ರಾಜ್ಯವನ್ನು ಬಹುತರ ಚಾಲುಕ್ಯರ ಬಲದಿಂದ ಹಿಂದಕ್ಕೆ ತಕ್ಕೊಂಡರು. ಈ ಕಾಲದ ಲಿಪಿಗಳಲ್ಲಿ ಹಾನಗಲ್ಲಿಗೆ ವಿರಾಟನ ಕೋಟೆ, ವಿರಾಟ ನಗರ ಯೆಂಬ ಹೆಸರುಗಳು ಕೊಡಲ್ಪಟ್ಟವೆ. (ಕ್ರಿ. ಶ. ೧೧೨೪). ಕಾಮದೇವನೆಂಬ ಕಡೆಯ ಅರಸು ಯೆಲ್ಲರಿಗಿಂತ ಹೆಚ್ಚು ಪರಾಕ್ರಮಶಾಲಿ ಯೆಂದು ತೋರುತ್ತದೆ. ಇವನು ಲಕ್ಷ್ಮೇಶ್ವರ ಪರಗಣೆಯನ್ನು ತಕ್ಕೊಂಡದ್ದಲ್ಲದೆ ಮಲೆ, ತುಳು, ಕೊಂಕಣ, ಮುಂತಾದ ಶೀಮೆಗಳನ್ನು ಆಕ್ರಮಿಸಿದನು. ದ್ವಾರ ಸಮುದ್ರದ ವೀರ ಬಲ್ಲಾಳ ರಾಜನು ಹಾನಗಲ್ಲಿಗೆ ಮುತ್ತಿಗೆ

ಹಾಕಿದ್ದನು; ಆದರೆ ಕಾಮದೇವನ ಸರದಾರರು ಬಲ್ಲಾಳನನ್ನು ಸೋಲಿಸಿ ಹಿಂದಕ್ಕಟ್ಟಿದ್ದರು. ಈ ಕಾದಂಬರ ರಾಜ್ಯವನ್ನು ಕಡೆಯಲ್ಲಿ ಯಾರು ಕಸು ಕೊಂಡರೆಂಬುವದು ಇನ್ನೂ ತಿಳಿದಿಲ್ಲ.

ಗೋವೆಯ ಕಾದಂಬರು—ಗೋವೆಯಲ್ಲಿ ಕಾದಂಬ ಕುಲದ ಬೇರೆ ಅರಸರು ಚಾಲುಕ್ಯರ ಮಾಂಡಲಿಕರಾಗಿ ಕ್ರಿ. ಶ. ೧೦೦೮ರಿಂದ ೧೩೫೦ರ ವರೆಗೆ ಆಳಿದರು. ಇವರ ಪೂರ್ವದಲ್ಲಿ ಗೋವೆಯಲ್ಲಿ ಶಿಲಾಹಾರ ವಂಶದ ಅರಸನು ಆಳುತ್ತಿದ್ದನೆಂದು ತೋರುತ್ತದೆ. ಈ ಕಾದಂಬರ ಬಿರುದು, ಧ್ವಜ, ಮುದ್ರೆ ಇವೆಲ್ಲ ಬನವಾಸಿಯ ಕಾದಂಬರವೇ; ಆದರೆ ಕುಲದೇವತೆ ಸಪ್ತ ಕೋಟೀಶ್ವರವೆಂಬ ಗೋವೆಯಲ್ಲಿಯ ದೇವಸ್ಥಾನವು. ಗೋವೆಗೆ ಆ ಕಾಲದಲ್ಲಿ ಗೋಪಕಪತ್ತನ, ಅಥವಾ ಗೋಪಕಪುರಿಯೆಂಬ ಹೆಸರಿತ್ತು. ಗೋವೆಯ ಹೊರ್ತು ಹಲಸಿಗೆಯಲ್ಲಿಯೂ ಈ ಅರಸರು ಇರುತ್ತಿದ್ದರು. ಹಲಸಿಗೆಗೆ ಆ ಕಾಲಕ್ಕೆ ಪಲಾಶಿಕೆ, ಅಥವಾ ಪಲಸಿಗೆ ಯೆಂದೆನ್ನುವರು. ೧ನೇ ಜಯಕೇಶಿಯೆಂಬ ಅರಸು ಕ್ರಿ. ಶ. ೧೦೦೮ರ ಸುಮಾರಿನಲ್ಲಿ ಅಥವಾ ಅದರ ನಂತರ ಗೋವೆಯಲ್ಲಿ ಹೋಗಿ ನಿಂತನು. ಇವನು ಚಾಲುಕ್ಯರ ನಷ್ಟವಾದ ರಾಜ್ಯವನ್ನು ನೆಲೆಗೊಳಿಸಿದನೆಂತಲೂ, ಕಾಂಚಿಯಲ್ಲಿ ಚೋಳ ರಾಜನಿಗೂ ಚಾಲುಕ್ಯ ರಾಜನಿಗೂ ಸ್ನೇಹ ಭಾವವನ್ನುಂಟು ಮಾಡಿದನೆಂತಲೂ, ಕಪರ್ದಿಕ ದ್ವೀಪದ (ಸಾಷ್ಟಿಯ) ಅರಸನನ್ನು ಯುದ್ಧದಲ್ಲಿ ಕೊಂದನೆಂತಲೂ, ತಿಳಿದದೆ. ೨ನೇ ಜಯಕೇಶಿ ಯೆಂಬ ಅರಸನ ಮಕ್ಕಳಾದ ಪೇರ್ಮಾಡಿ, ೨ನೇ ವಿಜಯಾದಿತ್ಯ, ಯೆಂಬ ಅಣ್ಣ ತಮ್ಮಂದಿರು ಕ್ರಿ. ಶ. ೧೧೪೭ರಿಂದ ೧೧೭೫ರ ವರೆಗೆ ಜೋಡಿನಿಂದ ಆಳಿದರು. ಮೊದಲಿನವನಿಗೆ ಶಿವಚಿತ್ತನೆಂತಲೂ ಯೆರಡನೇಯವನಿಗೆ ವಿಷ್ಣು ಚಿತ್ತನೆಂತನೆಂತಲೂ ಪದವಿಗಳಿದ್ದದ್ದರಿಂದ ಮೊದಲಿನವ ಶೈವ, ಯೆರಡನೇಯವ ವೈಷ್ಣವ ಇದ್ದಂತೆ ತೋರುತ್ತದೆ. ಇವರ ಆಳಿಕೆಯಲ್ಲಿ ಗೋವೆಯ ರಾಜ್ಯಕ್ಕೆ ಕೊಂಕಣದ ೯೦೦ ಹಳ್ಳಿಗಳು, ಹಲಸಿಗೆಯ ೧೨೦೦೦ ಗ್ರಾಮಗಳು, ಬೆಳಗಾವಿಯ ೭೦ ಗ್ರಾಮಗಳು, ಇಷ್ಟು ಪ್ರದೇಶಗಳು ಶೇರಿದ್ದವು. ೨ನೇ ವಿಜಯಾದಿತ್ಯನ ಮಗನಾದ ೩ನೇ ಜಯಕೇಶಿಯು ಕ್ರಿ. ಶ. ೧೧೮೮ನೇ ವರ್ಷದಲ್ಲಿ ಆಳುತ್ತಿದ್ದನು. ಇವನು ಹಲಸಿಗೆಯಲ್ಲಿ ನರಸಿಂಹನ ಗುಡಿ ಯೆದುರಿಗೆ ವರಾಹನ ಗುಡಿಯನ್ನು ಕಟ್ಟಿಸಿದನು. ಇವನ ಆಳಿಕೆಯಲ್ಲಿ ದೇಗಾವಿಯೆಂಬಲ್ಲಿಯ ಮಲ್ಲಿಕಾರ್ಜುನನ ಗುಡಿಯಲ್ಲಿ ಕಲ್ಯಾಣಶಕ್ತಿ, ಶಿವಶಕ್ತಿ ಯೆಂಬವರಿಬ್ಬರು ಬ್ರಾಹ್ಮರುವೊಂದು ಹೊಲದ ವ್ಯಾಜ್ಯದ ಮೂಲಕವಾಗಿ ಊರವರ ಸಮಕ್ಷ ದಿವ್ಯವನ್ನು ಮಾಡಿದರು. ಕಲ್ಯಾಣಶಕ್ತಿಯು ದೇವರ ಅಂಗಾರವನ್ನು ತಲೆಯ ಮೇಲಿಟ್ಟು ಕೊಂಡು ಹೊಲವು ತನ್ನ ದೇವರೆಂದು ಆಣೆ ಮಾಡಿದನು. ಆದರೆ ಶಿವಶಕ್ತಿಯು ಕೆಂಪಗಾಗಿ ಕಾದಂಥ ರಂಟೆಯ ಕುಳವನ್ನು ಕೈಯಲ್ಲಿ ಹಿಡಿದು ಕೊಂಡು ಹೊಲವು ತನ್ನ ದೇವರದೆಂದು ಆಣೆ ಮಾಡಿದನು. ಮರು ದಿವಸ ಅವನ ಕೈಯು ಯೆಷ್ಟು ಮಾತ್ರವೂ ಸುಟ್ಟಿಲ್ಲವೆಂದು ನೋಡಿ ಊರವರು ಹೊಲವನ್ನು ಅವನಿಗೆ ಕೊಟ್ಟರು. ಈ ಕದಂಬರ ಕಡೆಯ ಅರಸನಾದ ೨ನೇ ಷಷ್ಠ ದೇವನು ಕ್ರಿ. ಶ. ೧೩೫೦ರಲ್ಲಿ ಆಳುತ್ತಿದ್ದನು. ಆದರೆ ಇದರ ಪೂರ್ವದಲ್ಲಿಯೇ

ಠಾಣೆಯ ಶಿಲಾಹಾರ ಅರಸನೂ, ಸವದತ್ತಿಯ ರಟ್ಟ ರಾಜನೂ ಗೋವೆಯ ರಾಜ್ಯವನ್ನು ಬಹುತರ ಯಾವತ್ತು ಆಕ್ರಮಿಸಿದ್ದರೆಂದು ತೋರುತ್ತದೆ. ಆದ್ದರಿಂದ ೨ನೇ ಷಷ್ಠದೇವನ ತರುವಾಯ ಗೋವೆಯ ಕಾದಂಬ ಅರಸರ ಆಳಿಕೆಯು ಲಯ ಹೊಂದಿತೆಂದು ಹೇಳ ಬಹುದು.

## ಯೆಲಬುರ್ಗೆಯ ಸಿಂದ ಅರಸರು.

ಇವರಾದರೂ ಚಾಲುಕ್ಯರ ಮಾಂಡಲಿಕರೇ. ಆದರೆ ಚಾಲುಕ್ಯರ ಪೂರ್ವದಲ್ಲಿ ಇವರು ಹಲಕೆಲವು ಶೀಮೆಯನ್ನು ಸ್ವತಂತ್ರದಿಂದ ಆಳುತ್ತಿದ್ದರೆಂದು ತೋರುತ್ತದೆ. ಈಗಿನ ನಿಜಾಮನ ರಾಜ್ಯದ ನೈರುತ್ಯ ಭಾಗವೂ, ಧಾರವಾಡ ಜಿಲ್ಲೆಯ ಈಶಾನ್ಯ ಭಾಗವೂ, ವಿಜಾಪುರ ಜಿಲ್ಲೆಯ ಪೂರ್ವ ಭಾಗವೂ ಇವರ ರಾಜ್ಯಕ್ಕೆ ಶೇರಿದ್ದವು. ಇವರ ಆರಂಭವು ಇನ್ನೂ ವೊಳಿತಾಗಿ ತಿಳಿದಿಲ್ಲ; ಸಮಾಪ್ತಿಯು ಕ್ರಿ. ಶ. ೧೨ನೇ ಶತಕದ ಕಡೆಯಲ್ಲಿ ಆಯಿತು. ಇವರ ರಾಜಧಾನಿಯ ಹೆಸರು ಯರಂಬರಗೆ; ಈಗಿನ ಯೆಲಬುರ್ಗೆಯೇ (ನಿಜಾಮನ ರಾಜ್ಯದಲ್ಲಿ) ಯರಂಬರಗೆ ಯೆಂದು ಫ್ಲೀಟ ಸಾಹೇಬರು ತರ್ಕಿಸುತ್ತಾರೆ. ಇವರ ರಾಜ್ಯವನ್ನು ಕಡೆಯಲ್ಲಿ ದ್ವಾರಸಮುದ್ರದ ಬಲ್ಲಾಳರು ಆಕ್ರಮಿಸಿದರೆಂದು ತೋರುತ್ತದೆ. ಇವರ ಮೂಲ ಪುರುಷನಾದ ಸಿಂದನೆಂಬವನು ಅಹಿಛತ್ರ ನಗರದಲ್ಲಿ ಹುಟ್ಟಿದನೆಂದು ವೊಂದು ಲಿಪಿಯಲ್ಲಿ ಬರಿದದೆ. ಇವರು ತಾವು ನಾಗ ವಂಶದವರೆಂದು ಹೇಳಿ ಧ್ವಜದಲ್ಲಿ ಹೆಡೆಯುಳ್ಳ ಸರ್ಪ ಚಿನ್ಹವನ್ನು ಧರಿಸುವರು; ಇವರಿಗೆ ಭೋಗಾವತೀ ಪುರ ವರಾಧೀಶ್ವರರೆಂಬ ಬಿರುದಿತ್ತು; ಇವರ ಮುದ್ರೆಯ ಚಿನ್ಹ ಸಿಂಹವು. ಈ ಯಾವತ್ತು ಲಕ್ಷಣಗಳಿಂದ ಸಿಂದರು ತೆಲಗು ದೇಶದಿಂದ ಬಂದವರಾದ ಈಗಿನ ನಾಗರೆಂಬ ಕಾಡು ದ್ರವಿಡ ಕುಲದವರಿದ್ದರೆಂದು ತೋರುತ್ತದೆ.

## ಕೊಲ್ಲಾಪುರದ ಶಿಲಾಹಾರರು.

ಚಾಲುಕ್ಯರ ಪೂರ್ವದಲ್ಲಿ ಶಿಲಾಹಾರ ವಂಶದ ಅರಸರು ಕೊಂಕಣದಲ್ಲಿ ಆಳುತ್ತಿದ್ದರು. ಕ್ರಿ. ಶಕದ ೯ನೇ ಶತಕದ ಮಧ್ಯದ ಸುಮಾರಿನಲ್ಲಿ ಉತ್ತರ ಕೊಂಕಣದಲ್ಲಿ ವೊಬ್ಬ, ದಕ್ಷಿಣ ಕೊಂಕಣದಲ್ಲಿ ವೊಬ್ಬ, ಹೀಗೆ ಇಬ್ಬರು ಶಿಲಾಹಾರ ವಂಶದ ಅರಸರು ಚಾಲುಕ್ಯರ ಮಾಂಡಲಿಕರಾಗಿ ಆಳುತ್ತಿದ್ದರು. ಉತ್ತರ ಕೊಂಕಣದ ರಾಜಧಾನಿ ಠಾಣೆ; ದಕ್ಷಿಣ ಕೊಂಕಣದ ರಾಜಧಾನಿ ಗೋವೆ. ಗೋವೆಯ ರಾಜ್ಯವನ್ನು ಕಾದಂಬರು ಶಿಲಾಹಾರ ಅರಸನ ಕೈಯಿಂದ ಕಸುಕೊಂಡರೆಂದು ಹಿಂದೆ ಹೇಳಿದ್ದೇವೆ.

ಕೊಂಕಣದ ಯೆರಡು ಸಿಂಹಾಸನಗಳ ಹೊರ್ತು ಕೊಲ್ಲಾಪುರದಲ್ಲಿ ಶಿಲಾಹಾರರ ಮೂರನೇದೊಂದು ಸಿಂಹಾಸನವಿತ್ತು. ಈ ಅರಸರು ಕೊಲ್ಲಾಪುರದ ಸುತ್ತು ಮುತ್ತಲಿನ ಪ್ರದೇಶವನ್ನು ಮಿರ್ಜಿ, ಶಾಡಬಾಳ, ರಾಯಬಾಗಗಳ ವರೆಗೆ ಕ್ರಿ. ಶಕದ ೧೦ನೇ ಶಕದಿಂದ ೧೩ನೇ ಶತಕದ ಆರಂಭದ ವರೆಗೆ ಆಳಿದರು.

ಶಿಲಾಹಾರರು ವಿದ್ಯಾಧರಜೀಮೂತ ವಾಹನನೆಂಬವನು ತಮ್ಮ ಮೂಲ ಪುರುಷನೆಂದು ಹೇಳುವರು. ನಾಗ ಕುಲದ ಅರಸನಾದ ಶಂಖಚೂಡನೆಂಬವನು ಗರುಡನ ಕೈಯಲ್ಲಿ ಶಿಕ್ಕಿರಲಾಗಿ, ಜೀಮೂತವಾಹನನು ತಾನೇ ಗರುಡನಿಗೆ ಆಹಾರವಾಗಿ ಶಂಖಚೂಡನನ್ನು ಬಿಡಿಸಿದನೆಂದು ವೊಂದು ಲಿಪಿಯಲ್ಲಿ ಬರಿದದೆ. ಶಿಲಾಹಾರರ ಧ್ವಜ ಚಿನ್ಹ ಗರುಡ; ಇವರು ಜೈನರು, ಕುಲದೇವತೆ ಕೊಲ್ಲಾಪುರದ ಮಹಾಲಕ್ಷ್ಮಿಯು. ಈ ದೇವತೆಗೆ ಆ ಕಾಲಕ್ಕೆ ಪದ್ಮಾವತಿ ಯೆಂಬ ಹೆಸರಿತ್ತು. ಶಿಲಾಹಾರರಿಗೆ ತಗರಪುರ ವರಾಧೀಶ್ವರರೆಂಬ ಬಿರುದಿತ್ತು. ತಗರಪುರವೆಂದರೆ ಕೊಲ್ಲಾಪೂರವೇ ಯೆಂದು ಫ್ಲೀಟ ಸಾಹೇಬರ ಅನುಮಾನವದೆ. ಈ ತಗರಪುರವು ಕ್ರಿಸ್ತೀ ಶಕದ ೨ನೇ ಶಕದಲ್ಲಿ ಹೆಸರಾದ ವ್ಯಾಪಾರದ ಸ್ಥಳವಿತ್ತೆಂದು ತಾಲೆಮಿ, ಆರಿಯನ್, ಮುಂತಾದ ಪರದೇಶಗಳ ಇತಿಹಾಸ ಲೇಖಕರು ಬರಿದಿದ್ದಾರೆ. ಆದ್ದರಿಂದ ಫ್ಲೀಟ ಸಾಹೇಬರ ಅನುಮಾನದಂತೆ ಕೊಲ್ಲಾಪುರವೇ ತಗರಪುರವು ನಿಜವಾದರೆ, ಕ್ರಿಸ್ತೀ ಶಕದ ಆರಂಭದ ಸುಮಾರಿನಲ್ಲಿ ಶಿಲಾಹಾರ ವಂಶದ ಅರಸರು ಅಲ್ಲಿ ಆಳುತ್ತಿದ್ದರೆಂದು ಸಿದ್ಧವಾಗುತ್ತದೆ. ಕೊಲ್ಲಾಪುರವು ಬಹು ಪುರಾತನ ಕಾಲದ ಪಟ್ಟಣವಿರುತ್ತದೆಂಬದಕ್ಕೆ ಸಂದೇಹವಿಲ್ಲ. ಕೃಷ್ಣನು ಕೊಲ್ಲಾಪುರದ ಶೃಗಾಲ ವಾಸುದೇವನೆಂಬ ಅರಸನನ್ನು ಕೊಂದು ಗೋಮಂತಕದ ರಾಜ್ಯವನ್ನು ತಕ್ಕೊಂಡನೆಂದು ಭಾಗವತದಲ್ಲಿ ಬರಿದದೆ.

ಸದ್ಯಕ್ಕೆ ಯೆಲ್ಲಕ್ಕೂ ಹಳೆದಾದ ಶಿಲಾಹಾರರ ಲಿಪಿಯು ಶಾ. ಶ. ೯೮೦ನೇ ವರ್ಷದ್ದು, ಅಂದರೆ ಕ್ರಿ. ಶ. ೧೦೫೮ನೇ ವರ್ಷದ್ದು, ದೊರಿದದೆ. ಆ ವರ್ಷ ಮಾರಸಿಂಹನೆಂಬ ಅರಸು ಕೊಲ್ಲಾಪುರದಲ್ಲಿ ಆಳುತ್ತಿದ್ದನು. ಇವನ ಪೂರ್ವದಲ್ಲಿ ೧ನೇ ಜತಿಗ, ನಾಯಿವರ್ಮಾ, ಚಂದ್ರ ರಾಜ, ೨ನೇ ಜತಿಗ, ಗೊಂಕ, ೧ನೇ ಗುಹಲ ಅಥವಾ ಗೂಹಲ್ಲ ಕೀರ್ತಿವರ್ಮಾ, ಚಂದ್ರಾದಿತ್ಯ, ಯೆಂಬ ಅರಸರು, ಕ್ರಮವಾಗಿ ಆಳಿದರೆಂದು ತಿಳಿದದೆ. ಮಾರಸಿಂಹನು ಗೊಂಕ, ಅಥವಾ ಗೊಂಕಲ, ಯೆಂಬವನ ಮಗನು. ಮಾರಸಿಂಹನ ೫ ಜನ ಮಕ್ಕಳಲ್ಲಿ ೧ನೇ ಭೋಜನು ಕ್ರಿ. ಶ. ೧೦೯೮ರಲ್ಲಿ ಆಳುತ್ತಿದ್ದನೆಂತಲೂ, ಕಡೆಯವನಾದ ಗಂಡರಾದಿತ್ಯನೆಂಬವನು ಕ್ರಿ. ಶ. ೧೧೩೫ರಲ್ಲಿ ಆಳುತ್ತಿದ್ದನೆಂತಲೂ ತಿಳಿದದೆ. ಮುಂದೆ ಗಂಡರಾದಿತ್ಯನ ಮಗ ವಿಜಯಾದಿತ್ಯನು ೧೧೫೩ರಲ್ಲಿ, ಅವನ ಮಗ ೨ನೇ ಭೋಜನು ೧೨೦೯ರಲ್ಲಿ ಆಳುತ್ತಿದ್ದನು. ಈ ಅರಸರು ಚಾಲುಕ್ಯರ ಮಹಾ ಮಂಡಲೇಶ್ವರರೊಳಗೆ ಯೆಣಿಸಲ್ಪಡುತ್ತಿದ್ದಾಗ್ಯೂ ಇವರು ಬಹುತರ ಸ್ವತಂತ್ರದಿಂದ ಆಳುತ್ತಿದ್ದರೆಂದು ತೋರುತ್ತದೆ.

ಗೊಂಕನ ಆಳಿಕೆಯಲ್ಲಿ ಕರಹಾಟವೆಂದರೆ ಈಗಿನ ಕಹ್ರಾಡದ ಪ್ರಾಂತ, ಕುಂಡಿನಾಡು, ಅಂದರೆ ಸವದತ್ತಿಯ ಪ್ರಾಂತ, ಮಿರಿಂಜವೆಂದರೆ ಮಿರ್ಜಿಯ ಪ್ರಾಂತ, ಕೊಂಕಣ, ಇಷ್ಟು ಶೀಮೆಗಳು ಕೊಲ್ಲಾಪುರದ ರಾಜ್ಯಕ್ಕೆ ಶೇರಿದ್ದವು. ಆದರೆ ಇದೇ ಕಾಲದಲ್ಲಿ ಕ ಡಿನಾಡಿನ ಅರಸರು ರಟ್ಟರಿದ್ದರು. ಚಾಲುಕ್ಯರ ೬ನೇ ವಿಕ್ರಮಾದಿತ್ಯನ ಹೆಂಡತಿಯಾದ ಚಂದಲಾದೇ... ...ಲ ಹೇಳಿದ ಮಾರಸಿಂಹನ ಮಗಳೆಂದು ತೋರುತ್ತದೆ.

ಕಡೆಯಲ್ಲಿ ದೇವಗಿರಿಯ ೨ನೇ ಸಿಂಹಣರಾಜನು ಶಿಲಾಹಾರರ ೨ ಭೋಜನೆಂಬ ಕಡೆಯ ರಸನ್ನು ಜಯಿಸಿ ಕ್ರಿ. ಶ. ೧೨೧೩ನೇ ವರ್ಷದ ಸುಮಾರಿನಲ್ಲಿ ಕೊಲ್ಲಾಪುರದ ರಾಜ್ಯವನ್ನು ತಕ್ಕೊಂಡನೆಂದು ತೋರುತ್ತದೆ.

ಹಿಂದಿನ ಯಾವತ್ತು ಇತಿಹಾಸದಿಂದ ಕ್ರಿ. ಶಕದ ೧೪ನೇ ಶತಕದ ಆರಂಭದಲ್ಲಿ ದಕ್ಷಿಣ ದೇಶದಲ್ಲಿ ಯೆರಡು ದೊಡ್ಡ ರಾಜವಂಶಗಳು ಆಳುತ್ತಿದ್ದವೆಂದು ಸ್ಪಷ್ಟವಾಗುತ್ತದೆ. ಉತ್ತರದಲ್ಲಿ ದೇವಗಿರಿಯ ಯಾದವರು ನರ್ಮದೆಯಿಂದ ಕೃಷ್ಣೆಯ ವರೆಗೆ, ಅಂದರೆ ಗುಜರಾಥ, ಮಹಾರಾಷ್ಟ್ರ, ಕರ್ನಾಟಕದ ಉತ್ತರ ಭಾಗ ಅಥವಾ ದಕ್ಷಿಣ ಮಹಾರಾಷ್ಟ್ರ, ಇಷ್ಟು ಪ್ರದೇಶಗಳನ್ನು ಆಳುತ್ತಿದ್ದರು. ದಕ್ಷಿಣದಲ್ಲಿ ದ್ವಾರಸಮುದ್ರದ ಬಲ್ಲಾಳರು ಇಡೀ ಕರ್ನಾಟಕ ದೇಶವನ್ನು ಆಕ್ರಮಿಸಿ, ಕಾಂಚಿಯ ಚೋಳ ಅರಸರನ್ನೂ, ಮಧುರೆಯ ಪಾಂಡ್ಯ ಅರಸರನ್ನೂ, ಪಶ್ಚಿಮ ಸಮುದ್ರತೀರದ ಚೇರ ಅರಸನನ್ನೂ ತಮ್ಮ ಮಾಂಡಲಿಕರೊಳಗೆ ಶೇರಿದ್ದರು. ಈ ಯೆರಡು ದೊಡ್ಡ ಸಂಸ್ಥಾನಗಳಲ್ಲದೆ ಆಂಧ್ರ ಭೃತ್ಯರೆಂಬ ಅರಸರು ತೆಲಗು ದೇಶವನ್ನು ಪೂರ್ವ ಸಮುದ್ರದ ವರೆಗೆ ಆಳುತ್ತಿದ್ದರು. ಅವರ ರಾಜಧಾನಿ ಓರಂ ಕಲ್ಲು (ವರಂಗೂಳು) ಹೈದರಾಬಾದಿನ ಬಳಿಯಲ್ಲಿ ಇರುತ್ತದೆ.

## ದಕ್ಷಿಣದಲ್ಲಿ ಮುಸಲ್ಮಾನರ ಪ್ರವೇಶ.

ಕ್ರಿಸ್ತೀ ಶಕದ ೧೧ನೇ ಶತಕದಲ್ಲಿ ಗಿಝನಿಯ ಮಹಮೂದನು ಹಿಂದುಸ್ತಾನದಲ್ಲಿ ದೌಡುಗಳನ್ನು ಮಾಡಿದಂದಿನಿಂದ ಉತ್ತರ ಹಿಂದುಸ್ತಾನದಲ್ಲಿ ಮುಸಲ್ಮಾನರು ಕಾಲೂರಿ ನಿಂತು ದಿಲ್ಲಿಯಲ್ಲಿ ತಮ್ಮ ಸಿಂಹಾಸನವನ್ನು ಸ್ಥಾಪಿಸಿದರು. ಖಿಲಜೀ ವಂಶದ ಜಲಾಲ ಉದ್ದೀನನೆಂಬ ಬಾದಶಹನು ದಿಲ್ಲಿಯಲ್ಲಿ ಆಳುತ್ತಿರುವಾಗ ಅವನ ತಮ್ಮನ ಮಗನಾದ ಅಲ್ಲಾ ಉದ್ದೀನನು ಕ್ರಿಸ್ತೀ ಶಕದ, ಅಂದರೆ ಇಸವೀ ಸನ್ ೧೨೯೦ರಲ್ಲಿ ದೊಡ್ಡ ದಂಡು ತಕ್ಕೊಂಡು ದಕ್ಷಿಣಕ್ಕೆ ಬಂದನು. ಆಗ ದೇವಗಿರಿಯಲ್ಲಿ ರಾಮ ದೇವನೆಂಬ ಅರಸು ಆಳುತ್ತಿದ್ದನು. ಅಲ್ಲಾ ಉದ್ದೀನನು ರಾಮ ದೇವನನ್ನು ಗೆದ್ದು ದೇವಗಿರಿಯನ್ನು ಸುಲಿದನು. ಆದರೂ ಮುಂದೆ ಸನ್ ೧೩೦೬ನೇ ವರ್ಷದ ವರೆಗೆ ರಾಮ ದೇವನ ಆಳಿಕೆಯು ನಿರಾತಂಕವಾಗಿ ಸಾಗಿತು. ದಿಲ್ಲಿಯಲ್ಲಿ ಅಲ್ಲಾ ಉದ್ದೀನನು ತನ್ನ ಕಕ್ಕನನ್ನು ಸನ್ ೧೨೯೫ ರಲ್ಲಿ ಕೊಂದು ಸಿಂಹಾಸನವನ್ನು ಆಕ್ರಮಿಸಿದ ಬಳಿಕ ಸನ್ ೧೩೦೬ನೇ ವರ್ಷ ಮಲಿಖ ಕಾಫುರನೆಂಬ ಸರದಾರನ ಕೂಡ ವೊಂದು ಲಕ್ಷ ಕುದುರೇ ಸ್ವಾರರನ್ನು ಕೊಟ್ಟು ದಕ್ಷಿಣಕ್ಕೆ ಕಳಿಸಿದನು. ಕಾಫುರನು ರಾಮ ದೇವನ ಕೈಯಿಂದ ಕಪ್ಪ ತಕ್ಕೊಂಡು ಮಹಾರಾಷ್ಟ್ರ ದೇಶವನ್ನು ಹಾಳು ಮಾಡಿದನು. ರಾಮದೇವನು ಸನ್ ೧೩೧೦ನೇ ವರ್ಷ ಮರಣ ಹೊಂದಲಾಗಿ ಅವನ ಮಗ ಶಂಕರ ರಾಜನು ಪಟ್ಟವೇರಿದನು. ಅದೇ ವರ್ಷ ಮಲಿಖ ಕಾಫುರನು ಯೆರಡನೇ ಸಾರಿ ದಕ್ಷಿಣಕ್ಕೆ ಬಂದು, ವರಂಗೂಳದ ಅರಸನನ್ನು ಹಾಳು ಮಾಡಿ ದ್ವಾರಸಮುದ್ರಕ್ಕೆ ಹೋದನು. ಅಲ್ಲಿ ಆಳುತ್ತಿದ್ದ ೩ನೇ ಬಲ್ಲಾಳ ರಾಜನನ್ನು ಕಾಫುರನು ಯುದ್ಧದಲ್ಲಿ ಜಯಿಸಿ ಶರೆ ಹಿಡಿದು, ದ್ವಾರಸಮುದ್ರವನ್ನು ಸುಲಿದು

ಅಪರಿಮಿತ ದ್ರವ್ಯವನ್ನು ತಕ್ಕೊಂಡು ಸನ್ ೧೩೧೧ನೇ ವರ್ಷ ದಿಲ್ಲಿಗೆ ಹೋದನು. ದೇವಗಿರಿಯ ಶಂಕರ ರಾಜನು ಕಪ್ಪದ ಹಣವನ್ನು ಕೊಡಲಿಕ್ಕೆ ತಪ್ಪಿಸಿದ್ದರಿಂದ ಕಾಫು ರನು ಸನ್ ೧೩೧೨ನೇ ವರ್ಷ ದಕ್ಷಿಣಕ್ಕೆ ಬಂದು ಯುದ್ಧದಲ್ಲಿ ಶಂಕರ ರಾಜನನ್ನು ಕೊಂ ದು ಮಹಾರಾಷ್ಟ್ರ, ದಕ್ಷಿಣ ಮಹಾರಾಷ್ಟ್ರ ದೇಶಗಳನ್ನು ದಾಭೋಳದಿಂದ ಮುದಗಲ್ಲಿನ ವರೆಗೆ ಹಾಳು ಮಾಡಿದನು. ಮುಂದೆ ಸನ್ ೧೩೧೬ನೇ ವರ್ಷ ದಿಲ್ಲಿಯಲ್ಲಿ ಅಲ್ಲಾಉದ್ದೀ ನನೂ, ಅವನ ತರುವಾಯ ಸ್ವಲ್ಪ ದಿವಸದೊಳಗೆ ಮಲಿಖ ಕಾಫುರನೂ ಕೊಲ್ಲಲ್ಪಟ್ಟದ್ದ ರಿಂದ ದಿಲ್ಲಿಯ ರಾಜ್ಯದಲ್ಲಿ ಬಹಳ ಗೊಂದಲ ವುಂಟಾಯಿತು. ಆ ಸಂಧಿಯಲ್ಲಿ ದೇವಗಿ ರಿಯ ರಾಮ ದೇವನ ಅಳಿಯನಾದ ಹರಿಪಾಳನೆಂಬವನು ಯಾದವರ ಗಾದಿಯನ್ನು ಮತ್ತೆ ನೆಲೆಗೊಳಿಸಿ ತಾನೇ ಅರಸಾದನು; ಆದರೆ ಸನ್ ೧೩೧೮ರಲ್ಲಿ ಮುಬಾರಿಕ ಬಾದಶಹನು ದಕ್ಷಿಣಕ್ಕೆ ಬಂದು ಹರಿಪಾಳನನ್ನು ಹಿಡಿದು ಅವನ ಮೈದೊಗಲು ಸುಲಿಸಿ ದೇವಗಿರಿಯನ್ನು ಆಕ್ರಮಿಸಿದನು. ಮುಂದೆ ಸನ್ ೧೩೨೭ರಲ್ಲಿ ಮಹಮ್ಮದ ತಘುಲಖ ಬಾದಶಹನು ಕರ್ನಾಟಕ ದೇಶವನ್ನು ಸಮುದ್ರದ ವರೆಗೆ ಹಾಳು ಮಾಡಿ, ದೇವಗಿರಿಗೆ ದೌಲತಾಬಾ ದೆಂಬ ಹೆಸರಿಟ್ಟು ಅಲ್ಲಿ ನಿಂತನು. ಈ ಪ್ರಕಾರ ದಕ್ಷಿಣದ ಮೂರೂ ರಾಜ್ಯಗಳು ೧೦ ವರ್ಷ ದೊಳಗೆ ನಿರ್ಮೂಲವಾದವು. ಅದರಿಂದ ಮಹಾರಾಷ್ಟ್ರ, ತೆಲಗು, ಕರ್ನಾಟಕ ದೇಶಗ ಳಲ್ಲಿ ಅರಾಜಕ ಉಂಟಾಗಿ ಕೊಲೆ ಸುಲಿಗೆಗಳು ನಡಿಯ ಹತ್ತಿದವು. ಇಂಥಾ ಸ್ಥಿತಿಯಲ್ಲಿ ಕೆಲವೊಬ್ಬ ಬಲಶಾಲಿಯಾದ ಮನುಷ್ಯನು ಮುಂದಕ್ಕೆ ಬಂದು ದಾಳಿಗಾರರನ್ನು ಅಂಕಿತ ದೊಳಗೆ ತಂದು ಕೊಂಡು ತನ್ನ ಅಧಿಕಾರವನ್ನು ನೆಲೆಗೊಳಿಸುತ್ತಾನೆ. ಈ ನಿಯಮ ದಂತೆ ಈ ಅರಾಜಕದ ಸ್ಥಿತಿಯಲ್ಲಿ ದಕ್ಷಿಣದಲ್ಲಿ ಯೆರಡು ದೊಡ್ಡ ಹೊಸ ರಾಜ್ಯಗಳು ಉದಯ ಹೊಂದಿದವು; ಒಂದು ಹಿಂದೂ ಜನರದು, ಯೆರಡನೇದು ಮುಸಲ್ಮಾನರದು.

## ವಿಜಯನಗರದ ನರಪತಿಗಳು.

ಮೇಲೆ ವಿವರಿಸಿದ ಸ್ಥಿತಿಯಲ್ಲಿ ಹುಕ್ಕ ಬುಕ್ಕ, ಯೆಂಬವರಿಬ್ಬರು ಅತಿ ಸಾಧಾರಣ ತರದ ಮನುಷ್ಯರು ಶೃಂಗೇರಿಯಲ್ಲಿ ಶಂಕರಾಚಾರ್ಯರ ಪೀಠಾಧಿಷ್ಠಿತರಾದ ವಿದ್ಯಾರಣ್ಯ ನೆಂಬ ಬಿರುದುಳ್ಳ ಮಾಧವಾಚಾರ್ಯರೆಂಬ ಘನ ಪಂಡಿತರ ಸಹಾಯದಿಂದ ಆನೇಗುಂದಿ ಯ ಯೆದುರಿಗೆ ತುಂಗಭದ್ರೆಯ ದಕ್ಷಿಣ ತೀರದಲ್ಲಿ ಹಂಪೀ ಕ್ಷೇತ್ರಕ್ಕೆ ಹೊಂದಿ ವಿಜಯ ನಗರವೆಂಬ ಹೊಸ ಪಟ್ಟಣವನ್ನು ಕಟ್ಟಿಸಿ ಹೊಸ ರಾಜ್ಯವನ್ನು ಕ್ರಿ. ಶ. ೧೩೩೬ರಲ್ಲಿ ಸ್ಥಾಪಿಸಿದರು. ಹುಕ್ಕ ಬುಕ್ಕರ ಪೂರ್ವದ ವೃತ್ತಾಂತದ ಬಗ್ಗೆ ನಾನಾ ಪ್ರಕಾರದ ಕಥೆಗ ಳುಂಟು. ಇವರು ಯಾದವ ವಂಶದವರೆಂದು ಕೆಲವರು ಹೇಳುವರು; ಕೆಲವರು ಬಲ್ಲಾ ಳರ ರಾಜಕ್ಕೆ ಶೇರಿದ ಜಮೇದಾರರೆಂದು ಹೇಳುವರು. ಆದರೆ ಯೆಲ್ಲಕ್ಕೂ ಹೆಚ್ಚು ಸಂಭಾ ವ್ಯವಾದ ಕಥೆ ಯೇನಂದರೆ, ತೆಲಗು ದೇಶದ ರಾಜಧಾನಿಯಾದ ವಂಗೂಳ ಪಟ್ಟಣವನ್ನು ಮಲಿಖ ಕಾಫುರನು ಹಾಳು ಮಾಡಿದ ಬಳಿಕ ಅಲ್ಲಿಯ ಬೊಕ್ಕಸದ ಕಾವಲುಗಾರರಾದ ದಂಡಾಳುಗಳಿಬ್ಬರಿವರು ಬಹಳ ಹಣ ತಕ್ಕೊಂಡು ವಿದ್ಯಾರಣ್ಯರ ಬಳಿಗೆ ಬಂದರೆಂಬದು.

ಇವರ ಹಣದ ಹೊರ್ತು ಮಾಧವಾಚಾರ್ಯರು ಇವರಿಗೆ ಅಪರಿಮಿತ ದ್ರವ್ಯವನ್ನು ಸಂಪಾದಿಸಿ ಕೊಟ್ಟು ವಿಜಯನಗರವನ್ನು ಕಟ್ಟಿಸಿದರು. ಈ ಸ್ವಾಮಿಗಳು ಮೊದಲು ಹುಕ್ಕನಿಗೆ ಹರಿಹರ ರಾಜನೆಂದು ಹೆಸರಿಟ್ಟು ವಿಜಯನಗರದಲ್ಲಿ ಪಟ್ಟಗಟ್ಟಿ ತಾವು ಅವನ ಮಂತ್ರಿ ಪದವನ್ನು ಸ್ವೀಕರಿಸಿದರು. ಆ ಕಾಲಕ್ಕೆ ದಕ್ಷಿಣ ದೇಶದಲ್ಲಿ ಪ್ರಬಲರಾದ ಅರಸರು ಯಾರು ಇಲ್ಲದ್ದರಿಂದ ಹರಿಹರ ರಾಜನ ಅಮಲು ಸ್ವಲ್ಪ ಕಾಲದೊಳಗೆ ನಾಲ್ಕು ದಿಕ್ಕುಗಳಲ್ಲಿಯೂ ಬಹಳವಾಗಿ ಹಬ್ಬಿ ವಿಜಯನಗರವು ದಕ್ಷಿಣ ದೇಶದಲ್ಲಿ ಹೆಸರಾದ ರಾಜಧಾನಿಯಾಯಿತು. ಉತ್ತರದಲ್ಲಿ ಮುಸಲ್ಮಾನರು ಕನೋಜ ಪಟ್ಟಣವನ್ನು ಹಾಳು ಮಾಡಿದ ಬಳಿಕ ಸಂಸ್ಕೃತ ವಿದ್ಯಕ್ಕೆ ರಾಜಾಶ್ರಯವು ಉಳಿದಿದ್ದಿಲ್ಲ. ವಿಜಯನಗರದ ಸ್ಥಾಪನೆಯಾದ ಬಳಿಕ ಸ್ವಲ್ಪ ಕಾಲದೊಳಗೆ ದಿಗ್ದೇಶಗಳಿಂದ ಪಂಡಿತರು ಬಂದು ಹರಿಹರ ರಾಜನ ದರ್ಬಾರಿನಲ್ಲಿ ನಿಂತರು. ಮಾಧವಾಚಾರ್ಯರು ಮಂತ್ರಿಗಳಾದದ್ದರಿಂದ ವಿಜಯನಗರದ ದರ್ಬಾರಿನಲ್ಲಿ ವಿದ್ಯಕ್ಕೆ ಬಲವಾದ ಆಶ್ರಯ ದೊರಿದು ಪಂಡಿತರು, ಸತ್ಪುರುಷರು, ಅತಿಥಿಗಳು, ಅನಾಥರು ಮುಂತಾದ ದಯೆಗೆ ಪಾತ್ರರಾದಂಥ ಜನರ ಪರಾಮರ್ಶವಾಗುತ್ತಿದ್ದಷ್ಟು ಅರ್ವಾಚೀನ ಕಾಲದಲ್ಲಿ ಬೇರೆ ಯಾವ ದರ್ಬಾರಿನಲ್ಲಿಯೂ ಆಗುತ್ತಿತ್ತೆಂದು ತೋರುವದಿಲ್ಲ. ಇತಲಿಯವನೊಬ್ಬ ಪ್ರವಾಸಿಯು ವಿಜಯನಗರವನ್ನು ನೋಡಿ, ಈ ಪ್ರಕಾರ ವರ್ಣಿಸಿದ್ದಾನೆ—"ಈ ಪಟ್ಟಣವು ಬಹು ದೊಡ್ಡದು, ಘನವಾದ ವ್ಯಾಪಾರಸ್ಥಾನವಾಗಿದೆ. ಇಲ್ಲಿಯ ವ್ಯಾಪಾರಸ್ಥರು ರತ್ನಗಳ ಮಾರಾಟವನ್ನು ಬಹಳವಾಗಿ ಮಾಡುವರು. ಆ ಕಾಲದಲ್ಲಿ ವಜ್ರಗಳು ದುರ್ಲಭವಾಗಿದ್ದವು. ಮುತ್ತುಗಳು ಇರಾಣೀ ಅಖಾತದಿಂದ, ಮಾಣಿಕಗಳು ಪೇಗೂ ದೇಶದಿಂದ; ರೇಶಿಮೆಯ ಜರತಾರೀ ವಸ್ತ್ರಗಳು ಅಲೇಕ್ಸಾಂದ್ರಿಯ ಪಟ್ಟಣ ಚೀನ ದೇಶಗಳಿಂದ; ಪಾರಜ, ಅಫು, ಕಪ್ಪುರ ಬೇರೆ ದೇಶಗಳಿಂದ ಈ ಪಟ್ಟಣಕ್ಕೆ ಮಾರಾಟಕ್ಕೆ ಬರುತ್ತಿದ್ದವು. ಅರಸನು ೯೦೦ ಆನೆಗಳನ್ನು ಕಟ್ಟಿದ್ದನು. ಇವನ ದಂಡಿನಲ್ಲಿ ೨೦೦೦೦ ರಾಹುತರೂ ಅಸಂಖ್ಯ ದಂಡಾಳುಗಳೂ ಇದ್ದರು. ಊರೊಳಗಿನ ಅರಮನೆಗಳು, ಗುಡಿಗಳು, ಮುಂತಾದ ಭವ್ಯವಾದ ಇಮಾರತುಗಳು ಕಲ್ಲಿನಿಂದ ಕಟ್ಟಿದ್ದವು. ಆದರೆ ಬಡ ಜನರ ಮನೆಗಳು ಕೆಸರಿನ ಗೋಡೆಗಳಿಂದಲೂ ಹುಲ್ಲಿನ ಚಪ್ಪರದಿಂದಲೂ ಆಗಿದ್ದವು." ವಿಜಯನಗರದ ಅರಸರ ವಂಶಾವಳಿಯು ಕೆಳಗೆ ಬರಿದಂತೆ.—

| ವಂಶಾವಳಿ. | | ಆಳಿಕೆಯ ಆರಂಭ ಕ್ರಿ. ಶ. |
|---|---|---|
| ೧. | ಹರಿಹರರಾಯ . . . . . . . . . . . . . | ೧೩೩೬ |
| ೨. | ಬುಕ್ಕರಾಯ . . . . . . . . . . . . . | ೧೩೬೧ |
| ೩. | ೨ನೇ ಹರಿಹರರಾಯ . . . . . . . . . . | ೧೩೭೬ |
| ೪. | ವಿರೂಪಾಕ್ಷರಾಯ . . . . . . . . . . . | ೧೪೦೪ |
| ೫. | ೨ನೇ ಬುಕ್ಕರಾಯ . . . . . . . . . . . | ೧೪೦೮ |

| ವಂಶಾವಳಿ. | ಆಳಿಕೆಯ ಆರಂಭ ಕ್ರಿ. ಶ. |
|---|---|
| ೬, ೭. ದೇವರಾಯ, ರಾಮರಾಯ | ೧೪೦೯ |
| ೮. ೨ನೇ ವಿರೂಪಾಕ್ಷರಾಯ | ೧೪೧೬ |
| ೯, ೧೦. ೨ನೇ ದೇವರಾಯ, ವಿರೂಪಾಕ್ಷರಾಯ. | ೧೪೨೭ |
| ೧೧. ಮಲ್ಲಿಕಾರ್ಜುನರಾಯ | ೧೪೫೫ |
| ೧೨, ೧೩. ೩ನೇ ವಿರೂಪಾಕ್ಷರಾಯ, ರಾಮರಾಯ | ೧೪೫೯ |
| ೧೪. ಪ್ರೌಢರಾಯ (ರಾಮರಾಯ) | ೧೪೮೬ |
| ೧೫. ವೀರನರಸಿಂಗರಾಯ | ೧೪೯೮ |
| ೧೬. ಸೋಳ್ವನರಸಿಂಗರಾಯ | ೧೫೦೮ |
| ೧೭, ೧೮. ಅಚ್ಯುತರಾಯ, ಕೃಷ್ಣರಾಯ | ೧೫೩೦ |
| ೧೯, ೨೦. ರಾಮರಾಯ, ಸದಾಶಿವರಾಯ | ೧೫೬೩ |

ಹರಿಹರರಾಯನು ಶೂರನಿದ್ದನು. ಇವನು ತನ್ನ ರಾಜ್ಯದಲ್ಲಿ ರಾಯರೆಂಬ ಸುಭೇದಾರರನ್ನು ನೇಮಿಸಿ, ರಾಜ್ಯದೊಳಗಿನ ಪಾಳ್ಯಗಾರರನ್ನು ಅವರ ಕೈಕೆಳಗೆ ಕೊಟ್ಟನು. ಪಾಳ್ಯಗಾರರು ತಮ್ಮ ಯೋಗ್ಯತೆಯಂತೆ ದಂಡು ಇಟ್ಟು ಕೊಂಡು ಜಹಾಗೀರುಗಳನ್ನು ಅನುಭೋಗಿಸಿ, ಸರಕಾರದ ಕಂದಾಯವನ್ನು ಯೆತ್ತುವರು. ಭೂಮಿಯ ಹುಟ್ಟುವಳಿಯಲ್ಲಿ ೩೦ ಪಾಲು ಮಾಡಿ, ೫ ಸರಕಾರಕ್ಕೆ, ೭½ ವೊಡೆಯನಿಗೆ, ೧೫ ರೈತನಿಗೆ, ೧½ ಬ್ರಾಹ್ಮಣರಿಗೆ, ೧ ದೇವರಿಗೆ, ಈ ಪ್ರಕಾರ ಭಾಗಗಳನ್ನು ಹಂಚಿ ಕೊಟ್ಟಿದ್ದನು.

ಹರಿಹರನ ತಮ್ಮ ಬುಕ್ಕರಾಜನು ಬಹು ಪರಾಕ್ರಮಿಯು, ಬಹು ದಿವಸ ರಾಜ್ಯವಾಳಿದನು. ಇವನು ಚೋಳ ಚೇರ ಮುಂತಾದ ರಾಜ್ಯಗಳನ್ನು ಜಯಿಸಿ, ಪೂರ್ವ, ಪಶ್ಚಿಮ, ದಕ್ಷಿಣ ದಿಕ್ಕುಗಳಲ್ಲಿ ತನ್ನ ರಾಜ್ಯವನ್ನು ಸಮುದ್ರದ ವರೆಗೆ ಬೆಳಿಸಿದನು. ಈ ಕಾರಣದಿಂದ ಅರ್ಕಾಟ ಪ್ರಾಂತಕ್ಕೆ ಕರ್ನಾಟಕವೆಂಬ ಹೆಸರು ಮುಂದೆ ಬಿತ್ತು. ಇವನ ಆಳಿಕೆಯಲ್ಲಿ ಮಾಧವಾಚಾರ್ಯರ ಅಣ್ಣನಾದ ಸಾಯನಾಚಾರ್ಯನು ಋಗ್ವೇದಕ್ಕೆ ಭಾಷ್ಯವನ್ನು ಬರಿದನು.

೨ನೇ ಹರಿಹರರಾಯನು ಧಾರವಾಡ, ಬೆಳಗಾವಿ, ಮುಂತಾದ ಕನ್ನಡ ಶೀಮೆಗಳನ್ನು ಆಕ್ರಮಿಸಿ, ಮಾಲವಣದ ವರೆಗೆ ಕೊಂಕಣವನ್ನು ಗೆದ್ದು ಕೊಂಡನು. ಇವನಿಗೂ ಮುಂದೆ ಹೇಳುವ ಬಾಮನೀ ಬಾದಶಹಗಳಿಗೂ ಬಹಳ ಜಗಳಗಳು ನಡಿದವು. ಅವನ್ನು ಮುಂದೆ ವಿವರಿಸುವ.

ಮುಸಲ್ಮಾನರು ಯುದ್ಧದಲ್ಲಿ ಬಿಲ್ಲುಗಳನ್ನೂ ತೋಫುಗಳನ್ನೂ ಉಪಯೋಗಿಸುವರು. ಆದರೆ ವಿಜಯನಗರದವರ ದಂಡಿನಲ್ಲಿ ಕತ್ತಿ ಭಾಲೆಗಳೇ ಮುಖ್ಯ ಆಯುಧಗಳಾಗಿದ್ದವು. ಆದ್ದರಿಂದ ೨ನೇ ದೇವರಾಯನು ೨೦೦೦ ಜನ ಮುಸಲ್ಮಾನರನ್ನು ಚಾಕರಿಗಿಟ್ಟು, ಅವರ ಕೈಯಿಂದ ೬೦೦೦೦ ಹಿಂದೂ ಶಿಪಾಯಿಗಳಿಗೆ ಬಿಲ್ಲಿನ ಯುದ್ಧ ಕಲಿಸಿದನು. ದೇವರಾಯನು ಬಾಮನೀ ಬಾದಶಹನ ಕೂಡ ಮುದಗಲ್ಲಿನ ಬಳಿಯಲ್ಲಿ ಮಾಡಿದ ೩ ದೊಡ್ಡ ಯುದ್ಧಗಳಲ್ಲಿ ಕಡೆಗೆ ಸೋತಾಗ್ಯೂ, ವಿಜಯನಗರದ ದಂಡಾಳುಗಳು ಸ್ವಲ್ಪ ಕಾಲದೊಳಗೆ ಮುಸಲ್ಮಾನರಿಗಿಂತ ಬಹು ಪ್ರಬಲರಾದರು. ಆದ್ದರಿಂದ ಬಾಮನೀ ಬಾದಶಹಗಳು ವಿಜಯನಗರದವರ ಕೂಡ ಸ್ನೇಹದಿಂದ ನಡಿಯ ಹತ್ತಿದರು.

ಪ್ರೌಢರಾಯರು ಹರಿಹರರಾಯನ ವಂಶದವನಲ್ಲ; ವಿರೂಪಾಕ್ಷ ರಾಯನ ಅಳಿಯನು. ಆದ್ದರಿಂದ ವಿರೂಪಾಕ್ಷನ ತರುವಾಯ ಹರಿಹರನ ವಂಶವು ಮುಗ್ಗಿತು. ಮುಂದೆ ಬಲಿಷ್ಠರಾದವರೇ ಪಟ್ಟಾಧಿಕಾರಿಗಳಾಗುವರು. ಅದರಿಂದ ರಾಜ್ಯದೊಳಗೆ ಅವ್ಯವಸ್ಥೆ ಬಹಳಾಯಿತು. ಕೆಲವು ದಿವಸ ವೊಂಬತ್ತು ಮಂದಿ ನಾಯಕರು ಕೂಡಿ ರಾಜ್ಯವನ್ನಾಳಿದರು.

೨ನೇ ನರಸಿಂಗರಾಯನನ್ನು ಅವನ ಕಕ್ಕನಾದ ಹುಚ್ಚು ತಿರುಮಲರಾಯನು ಕೊಲ್ಲಿಸಿ ಪಟ್ಟವೇರಲಾಗಿ ನರಸಿಂಗನ ಮಂತ್ರಿಯಾದ ಕೃಷ್ಣರಾಯನು ತಿರುಮಲನನ್ನು ಶಿಕ್ಷಿಸಲಿಕ್ಕೆ ದಂಡು ತಕ್ಕೊಂಡು ಬರಲಾಗಿ, ತಿರುಮಲನು ಇರಿದು ಕೊಂಡು ಸತ್ತನು. ತರುವಾಯ ಕೃಷ್ಣರಾಯನು ಮಂತ್ರಿಗಳ ಸಮ್ಮತಿಯಿಂದ ಅರಸನಾದನು.

ಕೃಷ್ಣರಾಯನು ಹೆಸರಾದ ಪರಾಕ್ರಮಿ ಯೆನಿಸಿ ಕೊಂಡು, ವಿದ್ಯಾ, ಕಲಾ, ಕೌಶಲ್ಯ, ಔದಾರ್ಯಗಳಲ್ಲಿ ಬಹು ವಿಖ್ಯಾತನಾದನು. ಇವನ ಆಳಿಕೆಯಲ್ಲಿ ಮುಸಲ್ಮಾನರು ವಿಜಯನಗರದ ಮೇಲೆ ಶಸ್ತ್ರ ಹಿಡಿದು ವೊಮ್ಮೆ ಸಹ ಜಯ ಹೊಂದಲಿಲ್ಲ. ಇವನು ಮಧುರೆಯ ವರೆಗೆ ಯಾವತ್ತು ದಕ್ಷಿಣ ದೇಶವನ್ನು ಪಾದಾಕ್ರಾಂತವಾಗಿ ಮಾಡಿದನು. ಇವನ ದಂಡಿನವರಿಗೂ ವಿಜಾಪುರದ ಇಸ್ಮಾಯಿಲ್ ಅದಿಲ್‌ಶಹನಿಗೂ ಕೃಷ್ಣೆಯ ದಂಡೆಯಲ್ಲಿ ದೊಡ್ಡ ಯುದ್ಧವಾಗಿ, ಅದರಲ್ಲಿ ಅದಿಲ್‌ಶಹನು ಸೋತನು. ಈ ಯುದ್ಧದಲ್ಲಿ ವಿಜಯನಗರದ ದಂಡಿನವರು ತೋಪುಗಳನ್ನೂ ತುಬಾಕಿಗಳನ್ನೂ ಉಪಯೋಗಿಸಿದರು; ಅದಿಲ್‌ಶಹನ ದಂಡಿನಲ್ಲಿ ಈ ಆಯುಧಗಳಿದ್ದಿಲ್ಲ. ಕೃಷ್ಣರಾಯನು ಗೋವೆಯ ಶೀಮೆಯಲ್ಲಿ ಶೇರಿ ವಿಜಾಪುರದ ದಂಡಿನವರನ್ನು ಗೆದ್ದು ಕೆಲವು ಶೀಮೆಯನ್ನು ಆಕ್ರಮಿಸಿದನು. ಇಬ್ರಾಹಿಮ ಶಹನ ಆಳಿಕೆಯಲ್ಲಿ ಐನ ಉಲ್ಮಲ್ಕನೆಂಬ ಸರದಾರನು ಬಾದಶಹನ ಮೇಲೆ ತಿರುಗಿ ಬಿದ್ದು ವಿಜಾಪುರವನ್ನು ಸುತ್ತುಗಟ್ಟಲಾಗಿ, ಬಾದಶಹನು ಕೃಷ್ಣರಾಯನ ಸಹಾಯ ಬೇಡಿ ಕೊಂಡನು. ಆಗ ವೆಂಕಟಾದ್ರಿಯೆಂಬ ಅತಿ ವಿಖ್ಯಾತನಾದ ದಳವಾಯಿಯು ಬಾದಶಹನ ಸಹಾಯಕ್ಕೆ ಹೋಗಿ ಆ ಸರದಾರನನ್ನು ಗೆದ್ದು ಓಡಿಸಿದನು. ಈ ಸಂಗತಿಗಳಿಂದ ವಿಜಯನಗರದವರು ಮುಸಲ್ಮಾನರಿಗಿಂತ ಯೆಷ್ಟು ಬಲಾಢ್ಯರಾಗಿದ್ದರೆಂಬುವದು ವ್ಯಕ್ತವಾಗುತ್ತದೆ.

ಆದರೆ ಕೃಷ್ಣರಾಯನ ತರುವಾಯ ವಿಜಯನಗರದ ಗೌರವವು ಕಳೆಗುಂದಿತು. ರಾಜ್ಯಾಧಿಕಾರದ ಸಲುವಾಗಿ ಕದನಗಳು ಮೊದಲಿನಂತೆ ಮತ್ತೆ ನಡಿದವು. ಕಡೆಯಲ್ಲಿ

ಸದಾಶಿವರಾಯನ (ಇವನು ಕೃಷ್ಣರಾಯನ ಅಣ್ಣನ ಮಗನೆಂದು ತೋರುತ್ತದೆ.) ಮಗನಾದ ರಾಮರಾಯನ ಆಳಿಕೆಯಲ್ಲಿ ವಿಜಯನಗರದ ದಂಡಿನವರು ಅತಿ ಗರ್ವಿಷ್ಠರಾಗಿ, ಮುಸಲ್ಮಾನರ ಮಾನಭಂಗವನ್ನು ಬಹಳ ಮಾಡಿದ್ದರಿಂದ ವಿಜಾಪುರ, ಗೋವಳಕೊಂಡ, ಅಹಮ್ಮದನಗರ, ಈ ಮೂರು ರಾಜ್ಯಗಳ ಬಾದಶಹಗಳು ವೊಕ್ಕಟ್ಟಾಗಿ, ಸನ್ ೧೫೬೪ನೇ ಇಸವಿಯಲ್ಲಿ ತಾಳೀ ಕೋಟೆಯ ಹತ್ತರ ರಾಮರಾಯನೆದುರಿಗೆ ಯುದ್ಧಕ್ಕೆ ನಿಂತು, ಅವನನ್ನು ಕೊಂದು ವಿಜಯನಗರದ ರಾಜ್ಯವನ್ನು ಮುರಿದರು. (ಮುಂದೆ ನೋಡು).

## ಕಲಬುರ್ಗೆಯ ಬಾಮನೀ ಬಾದಶಹಗಳು.

ಹಿಂದೆ ಹೇಳಿದ ಅರಾಜಕ ಸ್ಥಿತಿಯಲ್ಲಿ ಮುಸಲ್ಮಾನರು ದಕ್ಷಿಣದಲ್ಲಿ ಪ್ರಬಲರಾಗುತ್ತ ನಡಿದಿದ್ದರು. ದಿಲ್ಲಿಯ ಮುಹಮ್ಮದ ತಘಲಖ ಬಾದಶಹನು ದೌಲತಾಬಾದಿನಲ್ಲಿ ಇರುತ್ತಿದ್ದನೆಂದು ಹಿಂದೆ ಹೇಳಿದ್ದೇವೆ. ಅವನು ವೊಳಿತಾಗಿ ವಿದ್ಯ ಕಲಿತವನಿದ್ದಾಗ್ಯೂ ಹುಚ್ಚು ಸ್ವಭಾವದವನೂ ಅತಿ ಕ್ರೂರನೂ ಇದ್ದನು. ಅವನು ದಕ್ಷಿಣದ ಮುಸಲ್ಮಾನ ಸರದಾರರ ಮೇಲೆ ಶಿಟ್ಟಾಗಿ ಅವರನ್ನು ದೌಲತಾಬಾದಿಗೆ ಕರಿಸಲಾಗಿ ಆ ಸರದಾರರು ಅವನ ಕ್ರೂರತನಕ್ಕೆ ಹೆದರಿ ಅವನ ಬಳಿಗೆ ಹೋಗದೆ ಬಂಡಾಯ ವೆಬ್ಬಿಸಿದರು. ಈ ಬಂಡಾಯದ ಕಡೆಯಲ್ಲಿ ಯಾವತ್ತು ಮುಸಲ್ಮಾನ ಸರದಾರರು ಕೂಡಿ, ಸನ್ ೧೩೪೭ನೇ ಇಸವಿಯಲ್ಲಿ ಜಾಫರಖಾನನೆಂಬ ಪಠಾಣ ಸರದಾರನಿಗೆ ಕಲಬುರ್ಗೆಯಲ್ಲಿ ಪಟ್ಟಗಟ್ಟಿದರು. ಜಾಫರಖಾನನು ಚಿಕ್ಕಂದಿನಲ್ಲಿ ದಿಲ್ಲಿಯೊಳಗೆ ಗಂಗೂ ಯೆಂಬ ಬ್ರಾಹ್ಮಣನಲ್ಲಿ ಆಳಾಗಿದ್ದನು. ಆ ಬ್ರಾಹ್ಮಣನು ತನಗೆ ಮಾಡಿದ ಉಪಕಾರಗಳನ್ನು ಸ್ಮರಿಸಿ, ಜಾಫರಖಾನನು ತಾನು ಪಟ್ಟವೇರಿದ ಬಳಿಕ ಹೊಸದಾಗಿ ಧರಿಸಿದ "ಅಲ್ಲಾಉದ್ದೀನ ಹಸನ್" ಯೆಂಬ ಹೆಸರಿಗೆ "ಗಂಗೂ ಬಾಮನಿ" ಯೆಂಬ ಬಿರುದು ಜೋಡಿಸಿದನು. ಆದ್ದರಿಂದ ಇವನ ವಂಶದವರಿಗೆಲ್ಲ "ಬಾಮನೀ" ಬಾದಶಹಗಳೆಂಬ ಹೆಸರು ಬಂತು. ಅಲ್ಲಾಉದ್ದೀನನು ಶೂರನೂ ಶಾಂತನೂ, ಜನರನ್ನು ವೊಲಿಸಿಕೊಳ್ಳುವ ಚಾತುರ್ಯವುಳ್ಳವನೂ ಇದ್ದದರಿಂದ ನಾಲ್ಕು ವರ್ಷಗಳಲ್ಲಿ ತಾಪಿ, ಕೃಷ್ಣಾ, ಈ ಯೆರಡು ಹೊಳೆಗಳ ನಡುವಿನ ಶೀಮೆ ಯೆಲ್ಲ ಇವನ ರಾಜ್ಯಕ್ಕೆ ಶೇರಿತು. ತೆಲಗು ದೇಶದ ರುದ್ರದೇವರಾಜನು ದಿಲ್ಲಿಯ ಬಾದಶಹನಿಗೆ ಕೊಡುತ್ತಿದ್ದ ಕಪ್ಪವನ್ನು ಇವನಿಗೆ ಕೊಟ್ಟು ಇವನ ಸ್ನೇಹವನ್ನು ಸಂಪಾದಿಸಿದನು. ಈ ಪ್ರಕಾರ ವಿಜಯನಗರದ ಸ್ಥಾಪನೆಯಾಗಿ ೧೦ ವರ್ಷದೊಳಗೆ ಅದರ ಉತ್ತರದಲ್ಲಿ ೧೪೦ ಮೈಲಿನ ಅಂತರದಲ್ಲಿ ಮುಸಲ್ಮಾನರ ಹೊಸ ರಾಜ್ಯವು ನೆಲೆಗೊಂಡಿತು. ಈ ಬಾದಶಹಗಳಿಗೂ ವಿಜಯನಗರದ ಅರಸರಿಗೂ ಯುದ್ಧಗಳು ಆಗಾಗ್ಗೆ ಬಹಳ ಆಗುತ್ತಿದ್ದವು. ಆದಾಗ್ಯೂ ಕಡೆತನಕ ವೊಬ್ಬರನ್ನೊಬ್ಬರು ತೀರ ಮುರಿಯಲಿಕ್ಕೆ ಸಮರ್ಥರಾಗಲಿಲ್ಲ. ಅಲ್ಲಾಉದ್ದೀನನ ವಂಶದ ಬಾದಶಹಗಳು ಕಲಬುರ್ಗೆಯಲ್ಲಿ ವೊಟ್ಟಿಗೆ ೧೪ ಜನ ಆಳಿದರು. ಅವರ ಪಟ್ಟಿಯು.—

| | | ಆರಂಭದ ವರ್ಷ ಕ್ರಿ. ಶ. |
|---|---|---|
| ೧. | ಅಲ್ಲಾಉದ್ದೀನ ಹಸನ ಗಂಗೂಬಾಮನಿ | ೧೩೪೭ |
| ೨. | ಮಹಮ್ಮದಶಹ | ೧೩೫೮ |
| ೩. | ಮುಜಾಹಿದಶಹ | ೧೩೭೫ |
| ೪. | ದಾವೂದಶಹ | ೧೩೭೮ |
| ೫. | ಮಹಮೂದಶಹ | ೧೩೭೮ |
| ೬. | ಗ್ಯಾಸುದ್ದೀನ | ೧೩೯೭ |
| ೭. | ಶಮುಸುದ್ದೀನ | ೧೩೯೭ |
| ೮. | ಫಿರೋಜಶಹ | ೧೩೯೭ |
| ೯. | ಅಹಮ್ಮದಶಹ | ೧೪೨೨ |
| ೧೦. | ೨ನೇ ಅಲ್ಲಾಉದ್ದೀನ | ೧೪೩೫ |
| ೧೧. | ಹುಮಾಯೂನಶಹ ಜಾಲೀಮ | ೧೪೫೭ |
| ೧೨. | ನಿಜಾಮಶಹ | ೧೪೬೧ |
| ೧೩. | ೩ನೇ ಮಹಮ್ಮದಶಹ | ೧೪೬೩ |
| ೧೪. | ೨ನೇ ಮಹಮೂದಶಹ | ೧೪೮೨ |
| ೧೫. | ೨ನೇ ಅಹಮ್ಮದಶಹ | ೧೫೧೮ |

ಮುಂದಿನ ೮ ವರ್ಷಗಳಲ್ಲಿ ಮೂರು ಮಂದಿ ಹೆಸರಿಗೆ ಮಾತ್ರ ಆಳಿದರು.

ಸನ್ ೧೩೫೭ನೇ ಇಸವಿಯಲ್ಲಿ ಅಲ್ಲಾಉದ್ದೀನನು ತನ್ನ ರಾಜ್ಯದಲ್ಲಿ ನಾಲ್ಕು ಸುಭೆಗಳನ್ನು ಮಾಡಿದನು. ಅವುಗಳಲ್ಲಿ ಕಲಬುರ್ಗೆಯಿಂದ ಪಶ್ಚಿಮಕ್ಕೆ ದಾಭೋಳದ ವರೆಗೆ ವೊಂದು ಸುಭೆಯಾಗಿತ್ತು. ಅಂದರೆ ಈಗಿನ ವಿಜಾಪುರ ಜಿಲ್ಲೆಯೆಲ್ಲ ಬಹುತರ ಬಾಮನೀ ರಾಜ್ಯಕ್ಕೆ ಮೊದಲಿನಿಂದ ಶೇರಿತ್ತು. ಆದರೆ ಕಾನಡಾ, ಬೆಳಗಾವಿ, ಧಾರವಾಡ, ಈ ಮೂರು ಜಿಲ್ಲೆಗಳು ವಿಜಯನಗರದ ರಾಜ್ಯಕ್ಕೆ ಶೇರಿದ್ದವೆಂದು ಹಿಂದೆ ಹೇಳಿದ್ದೇವೆ. ಹೀಗೆ ಪಶ್ಚಿಮ ದಿಕ್ಕಿನಲ್ಲಿ ಕಡೆ ತನಕ ಬಾಮನೀ ರಾಜ್ಯವೂ ವಿಜಯನಗರದ ರಾಜ್ಯವೂ ವೊಂದಕ್ಕೊಂದು ಹೊಂದಿದ್ದ ಕಾರಣ ಈ ಯೆರಡು ಸ್ಥಂಸ್ಥಾನಗಳಲ್ಲಿ ಜಗಳಗಳು ಯೆಡೆಬಿಡದೆ ನಡಿಯುತ್ತಿದ್ದವು. ಈ ಜಗಳಗಳ ವೃತ್ತಾಂತವನ್ನು ಫೆರಿಸ್ತನೆಂಬ ಇತಿಹಾಸಕರ್ತನು ಬರಿದು ಇಟ್ಟಿದ್ದಾನೆ. ಆದರೆ ಅವನು ಮುಸಲ್ಮಾನನಿದ್ದದ್ದರಿಂದ ವಿಜಯನಗರದವರಿಗಾದ ಸೋಲುಗಳನ್ನು ಅತಿಶಯೋಕ್ತಿಯಿಂದ ಬರಿದು, ಮುಸಲ್ಮಾನರಿಗೆ ಆದವುಗಳನ್ನು ಬಿಟ್ಟು ಬಿಟ್ಟಿದ್ದಾನೆ. ಆದರೆ ಈ ಯುದ್ಧಗಳು ನಮ್ಮ ಕರ್ನಾಟಕ ಶೀಮೆಯ ಹೊರಗೆ ಆದ್ದರಿಂದ ಅವುಗಳನ್ನೆಲ್ಲ ನಾವು ಇಲ್ಲಿ ವಿವರಿಸುವ ಪ್ರಯೋಜನವಿಲ್ಲ. (ಕರ್ನಾಟಕದ ಇತಿಹಾಸದಲ್ಲಿ ಈ ಯುದ್ಧಗಳು ವಿವರಿಸಲ್ಪಟ್ಟಿವೆ.) ನಮ್ಮ ನಾಲ್ಕು ಜಿಲ್ಲೆಗಳಿಗೆ ಸಂಬಂಧಿಸಿದಂಥವುಗಳನ್ನು ಮಾತ್ರ ಕೆಳಗೆ ಸಂಕ್ಷೇಪದಿಂದ ವಿವರಿಸುತ್ತೇವೆ.

ದೇವರಾಯನಿಗೂ ಫಿರೋಜ ಶಹನಿಗೂ ವೊಬ್ಬ ಸೊನ್ನಗಾರ ಜಾತಿಯ ಬಹು ಸುಂದರಿಯಾದ ಕನ್ನಿಕೆಯನ್ನು ಮುದಗಲ್ಲಿನಿಂದ ದೇವರಾಜನು ಯೆತ್ತಿಕೊಂಡು ಬಂದದರಿಂದ

ಬಹಳ ಯುದ್ಧಗಳು ನಡಿದು ಕಡೆಯಲ್ಲಿ ಸನ್ ೧೪೧೦ನೇ ವರ್ಷದ ಸುಮಾರಿನಲ್ಲಿ ವಿಜಯನಗರದ ಯುದ್ಧದಲ್ಲಿ ದೇವರಾಜನು ಸೋತದ್ದರಿಂದ ಫಿರೋಜನಿಗೆ ತನ್ನ ಮನೆತನದವಳೊಬ್ಬ ಕನ್ನಿಕೆಯನ್ನು ಕೊಟ್ಟು ಬಂಕಾಪುರ ಪರಗಣೆಯನ್ನು ಕೊಟ್ಟನು. ಆದರೆ ಮುಂದೆ ಸನ್ ೧೪೧೬ರಲ್ಲಿ ಗೋವಳಕೊಂಡದ ಬಳಿಯಲ್ಲಿ ಆದ ಯುದ್ಧದಲ್ಲಿ ಫಿರೋಜನು ಬಹಳ ಘಾಯ ಪಟ್ಟು, ಜೀವ ಉಳಿಸಿ ಕೊಂಡು ಓಡಿ ಹೋದನು. ಆಗ ದೇವರಾಯನು ಬಂಕಾಪುರದ ಪರಗಣೆಯನ್ನು ಹಿಂದಕ್ಕೆ ತಕ್ಕೊಂಡನು.

೨ನೇ ಅಲ್ಲಾಉದ್ದೀನನ ತಮ್ಮನಾದ ಮಹಮ್ಮದನೆಂಬವನು ಅಣ್ಣನ ಕೂಡ ಜಗಳ ತೆಗೆದು ಅರ್ಧ ರಾಜ್ಯ ಬೇಡಿ ಸನ್ ೧೪೩೫ರಲ್ಲಿ ದೇವರಾಯನ ಸಹಾಯದಿಂದ ವಿಜಾಪುರದ ಪ್ರಾಂತವನ್ನು ತಕ್ಕೊಂಡಿದ್ದನು. ಆದರೆ ಅಲ್ಲಾಉದ್ದೀನನು ಅದನ್ನು ಮತ್ತೆ ಬೇಗ ಹಿಂದಕ್ಕೆ ತಕ್ಕೊಂಡನು.

ಸನ್ ೧೪೪೪ರಲ್ಲಿ ದೇವರಾಯನು ಮತ್ತೆ ವಿಜಾಪುರದ ಶೀಮೆಯನ್ನು ಹಾಳು ಮಾಡಿದ್ದರಿಂದ ಅಲ್ಲಾಉದ್ದೀನನಿಗೂ ಅವನಿಗೂ ಮೂರು ಯುದ್ಧಗಳಾಗಿ ಕಡೆಯಲ್ಲಿ ದೇವರಾಯನು ಸೋತು ಕಪ್ಪ ಕೊಟ್ಟನು.

ಸನ್ ೧೪೭೦ರಲ್ಲಿ ಬಾಮನೀ ಬಾದಶಹನ ವಜೀರನಾದ ಮಹಮೂದ ಗವಾನನು ವಿಜಯನಗರದವರ ದಂಡು ಸೋಲಿಸಿ ಗೋವೆಯನ್ನೂ ಅದರ ಸುತ್ತಲಿನ ಶೀಮೆಯನ್ನೂ ತಕ್ಕೊಂಡನು. ಮುಂದೆ ಯೆರಡು ವರ್ಷದ ಮೇಲೆ ಇದೇ ವಜೀರನು ಬೆಳಗಾವಿಯನ್ನು ತಕ್ಕೊಂಡನು. ಆದರೆ ೧ನೇ ನರಸಿಂಗರಾಯನು ಪಟ್ಟವೇರಿದ ಬಳಿಕ ಈ ಶೀಮೆಗಳನ್ನು ಹಿಂದಕ್ಕೆ ಕಸುಕೊಂಡನು. ವಿಜಾಪುರದ ಪರಗಣೆಯು ಮೊದಲಿನಿಂದ ಬಾಮನೀ ರಾಜ್ಯಕ್ಕೆ ಶೇರಿದ್ದು ಕಡೆತನಕ ಹಾಗೇ ಇತ್ತು.

ಆದರೆ ಮುಂದೆ ಬಾಮನೀ ರಾಜ್ಯವು ಬಹಳ ದಿವಸ ನಡಿಯಲಿಲ್ಲ. ೨ನೇ ಮಹಮೂದನ ಆಳಿಕೆಯಲ್ಲಿ ಅವನ ದರ್ಬಾರಿನಲ್ಲಿ ದಕ್ಷಿಣದ ಮುಸಲ್ಮಾನರಿಗೂ ಉತ್ತರದಿಂದ ಬಂದವರಿಗೂ ಕಲಹ ಹುಟ್ಟಿತು. ಅವರು ತಮ್ಮೊಳಗೆ ಯುದ್ಧಗಳನ್ನು ಕೆಲವು ದಿವಸ ನಡಿಸಿದರು. ಕಡೆಯಲ್ಲಿ ೫ ಮಂದಿ ಸರದಾರರು ಪ್ರಬಲರಾಗಿ ೫ ಸ್ವತಂತ್ರವಾದ ಬಾದಶಾಹಿಗಳನ್ನು ಸ್ಥಾಪಿಸಿದರು. ಯೂಸಫ ಅದಿಲ್‌ಖಾನನೆಂಬ ವಿಜಾಪುರದ ಸುಭೇದಾರನು ವಿಜಾಪುರದಲ್ಲಿ ಅದಿಲ್‌ಶಹನೆಂಬ ಹೆಸರಿನಿಂದ ಸನ್ ೧೪೮೯ರಲ್ಲಿ ಸ್ವತಂತ್ರ ಬಾದಶಹನಾಗಿ ಆಳ ಹತ್ತಿದನು; ಮಲಿಖ ಅಹಮ್ಮದ ಭೈರಿ ಯೆಂಬ ಸರದಾರನು ಅಹಮ್ಮದ ನಗರದಲ್ಲಿ ನಿಜಾಮ ಶಹನೆಂಬ ಹೆಸರಿನಿಂದ ಸನ್ ೧೪೯೦ರಲ್ಲಿ ಆಳ ಹತ್ತಿದನು; ಕುತುಬ ಉಲ್ಮುಲ್ಕನೆಂಬ ಸರದಾರನು ಕುತುಬ ಶಹನೆಂಬ ಹೆಸರಿನಿಂದ ಗೋವಳಕೊಂಡದಲ್ಲಿ ಸನ್ ೧೫೧೨ರಲ್ಲಿ ಆಳ ಹತ್ತಿದನು; ಕಾಸಿಮ ಬರೀದನೆಂಬ ಸರದಾರನು ಬರೀದ ಶಹನೆಂಬ ಹೆಸರಿನಿಂದ ಬೆದರದಲ್ಲಿ ಸನ್ ೧೪೯೨ರಲ್ಲಿ ಆಳ ಹತ್ತಿದನು. ಮುಂದೆ ಬಾಮನೀ ಬಾದಶಹಗಳು ಹೆಸರಿಗೆ ಮಾತ್ರ ಸನ್ ೧೫೨೬ರ ವರೆಗೆ ಬೇದರದಲ್ಲಿ ಇಲ್ಲವೆ ಕಲಬುರ್ಗಿಯಲ್ಲಿ ಇರುತ್ತಿದ್ದರು. ಇವುಗಳಲ್ಲಿ ವಿಜಾಪುರದ ಅದಿಲ್‌ಶಾಹಿಯು ಕರ್ನಾಟಕದ ಭಾಗವನ್ನು

ಆಕ್ರಮಿಸಿ ಮುಂದೆ ವೊಳಿತಾಗಿ ಬೆಳಿದದ್ದರಿಂದ ಈ ಬಾದಶಾಹಿಯ ಇತಿಹಾಸವನ್ನು ಕೆಳಗೆ ವಿವರಿಸುತ್ತೇವೆ.

## ವಿಜಾಪುರದ ಅದಿಲ್‌ಶಾಹಿಯು.

ಯೂಸಫ ಅದಿಲ್‌ಖಾನನು ಕಾನಸ್ತಾಂತಿನೋಪಲದ ಆಗಾ ಮುರಾದನೆಂಬ ಸುಲ್ತಾನನ ಕಡೆಯ ಮಗನು. ಆ ಸುಲ್ತಾನನ ಮನೆತನದಲ್ಲಿ ಹಿರಿ ಮಗನೊಬ್ಬನನ್ನು ಬಿಟ್ಟು, ಸುಲ್ತಾನನ ಉಳಿದ ಯಾವತ್ತು ಗಂಡು ಮಕ್ಕಳನ್ನು ಕೊಲ್ಲಿಸುವ ನಡಾವಳಿ ಇತ್ತು. ಆ ಪ್ರಕಾರ ಯೂಸಫನು ಸಣ್ಣ ಕೂಸು ಇದ್ದಾಗ ಅವನನ್ನು ಕೊಲ್ಲುವ ಹೊತ್ತು ವೊದಗಲಾಗಿ, ಅವನ ತಾಯಿ ಯುಕ್ತಿಯಿಂದ ಯೂಸಫನನ್ನು ವೊಬ್ಬ ವರ್ತಕನ ವಶಕ್ಕೆ ಕೊಟ್ಟು, ಅವನಿಗೆ ಬದಲಾಗಿ ಮತ್ತೊಬ್ಬ ಹುಡುಗನನ್ನು ಕೊಲ್ಲಲಿಕ್ಕೆ ಕೊಟ್ಟಳು. ಯೂಸಫನನ್ನು ತಕ್ಕೊಂಡ ವರ್ತಕನು ಇರಾಣಕ್ಕೆ ಅವನನ್ನು ತಕ್ಕೊಂಡು ಬಂದು ಜೋಪಾನ ಮಾಡಿದನು. ಅಲ್ಲಿಯೂ ಸುಲ್ತಾನನ ಬಾಧೆ ತಗಲಿದ್ದರಿಂದ, ಯೂಸಫನ ಸಾಕಿದ ತಾಯಿಯು ಅವನನ್ನೂ ಅವನ ತಂಗಿಯಾದ ದಿಲ್‌ಶದ ಆಗಾ ಯೆಂಬ ಹುಡಿಗೆಯನ್ನೂ ಕರೆ ಕೊಂಡು ಶಿರಾಝುಕ್ಕೆ ಹೋದಳು. ಅಲ್ಲಿಂದ ಯೂಸಫನು ೧೭ ವರ್ಷದ ವಯಸ್ಸಿನಲ್ಲಿ ವ್ಯಾಪಾರಸ್ಥರ ಕೂಡ ದಾಭೋಳದ ಬಂದರಕ್ಕೆ ಬಂದನು. ಅಲ್ಲಿಂದ ವೊಬ್ಬ ಇರಾಣೀ ವ್ಯಾಪಾರಿಯು ಅವನನ್ನು ಸನ್ ೧೪೬೧ರಲ್ಲಿ ಬೇದರಕ್ಕೆ ಕರೆ ಕೊಂಡು ಹೋದನು. ಈ ಪ್ರಕಾರ ಯೂಸಫನು ಬೇದರಕ್ಕೆ ಬಂದ ಬಳಿಕ ಬಾಮನೀ ಬಾದಶಹನ ದಂಡಿನಲ್ಲಿ ಕೆಲವು ಪರಾಕ್ರಮದ ಕಾರ್ಯಗಳನ್ನು ಮಾಡಿದರಿಂದ ಯೂಸಫ್ ಅದಿಲ್‌ಖಾನನೆಂಬ ಪದವಿಯನ್ನು ಹೊಂದಿ ಕಡೆಯಲ್ಲಿ ವಿಜಾಪುರದ ಸುಭೇದಾರನಾಗಿದ್ದನು. ಇವನು ಸ್ವತಂತ್ರನಾದಾಗ ದಾಭೋಳದಿಂದ ಭೀಮೆಯ ವರೆಗೆ ತೀಮೆಯು ಇವನ ರಾಜ್ಯಕ್ಕೆ ಶೇರಿತ್ತು. ಯೂಸಫ್ ಅದಿಲ್‌ಶಹನು ಸ್ವತಂತ್ರನಾದ ಕೂಡಲೆ ವಿಜಾಪುರದ ಅರಕಿಲ್ಲೆಯನ್ನು ಕಟ್ಟಿಸಿದನು. ವಿಜಾಪುರದಲ್ಲಿ ಆಳಿದ ಇವನ ವಂಶದವರ ಪಟ್ಟಿಯು.—

| | ಆರಂಭದ ವರ್ಷ ಕ್ರಿ. ಶ. | | ಆರಂಭದ ವರ್ಷ ಕ್ರಿ. ಶ. |
|---|---|---|---|
| ೧. ಯೂಸಫ....... | ೧೪೮೯ | ೬. ೨ನೇ ಇಭ್ರಾಹೀಮ. | ೧೫೮೦ |
| ೨. ಇಸ್ಮಾಯಿಲ್ ..... | ೧೫೧೦ | ೭. ಮಹಮೂದ .... | ೧೬೨೬ |
| ೩. ಮಲ್ಲೂ........ | ೧೫೩೪ | ೮. ೨ನೇ ಅಲ್ಲೀ..... | ೧೬೫೬ |
| ೪. ೧ನೇ ಇಭ್ರಾಹೀಮ.. | ೧೫೩೪ | ೯. ಶಿಕಂದರ ...... | ೧೬೭೨ |
| ೫. ೧ನೇ ಅಲ್ಲೀ...... | ೧೫೫೭ | | |

ಆದಿಲ್‌ಶಾಹಿಯ ಆರಂಭದಿಂದ ಮುಂದಿನ ಇತಿಹಾಸವು, ಅಂದರೆ ೧ ಆದಿಲ್ ಶಾಹಿ, ೨ ಫೋರ್ತುಗೀಸರ ಪ್ರವೇಶ, ೩ ವಿಜಯನಗರದ ಲಯ, ೪ ಮೈಸೂರು ಮುಂತಾದ ದಕ್ಷಿಣದ ಸಂಸ್ಥಾನಗಳ ಉದಯ, ೫ ಮಹಾರಾಷ್ಟ್ರರ ಬೆಳುವಣಿಗೆ ಲಯ, ೬ ಇಂಗ್ಲಿಷರ ಬೆಳುವಣಿಗೆ, ಇಷ್ಟು ಪ್ರಕರಣಗಳು ಮಹಾರಾಷ್ಟ್ರದಲ್ಲಿಯೂ ಕನ್ನಡದಲ್ಲಿಯೂ ಒಂದಕ್ಕಿಂತ ಹೆಚ್ಚು ಪುಸ್ತಕಗಳಲ್ಲಿ ಪ್ರಸಿದ್ಧವಾದದ್ದರಿಂದ ಮುಂದಿನ ಇತಿಹಾಸವನ್ನು ಅತಿ ಸಂಕ್ಷೇಪದಿಂದ ಬರಿದಿದ್ದೇವೆ.

ಯೂಸಫನು ಸ್ವತಂತ್ರನಾದ ಬಳಿಕ ಸ್ವಲ್ಪ ದಿವಸದೊಳಗೆ ವಿಜಯನಗರದ ರಾಯಚೂರು, ಮುದಗಲ್ಲು, ಈ ಕೋಟೆಗಳನ್ನು ತಕ್ಕೊಳ್ಳ ಹೋಗಿ, ಯುದ್ಧದಲ್ಲಿ ಕಪಟದಿಂದ ವಿಜಯನಗರದ ಅಲ್ಪ ವಯಸ್ಕನಾದ ಅರಸನನ್ನು ಕೊಂದು ಅವನ ಮಂತ್ರಿಯಾದ ರಾಮರಾಯನನ್ನು ಓಡಿಸಿದನು.

ಫೋರ್ತುಗೀಸರ ಸರದಾರನಾದ ವಾಸ್ಕೋಡಿಗಾಮನು ಸನ್ ೧೪೯೮ರಲ್ಲಿ ಕಾಲಿಕತ್ತಕ್ಕೆ ಬಂದನು. ಮುಂದೆ ಆಲ್ಬುಕರ್ಕನೆಂಬ ಸರದಾರನು ಗೋವೆಯನ್ನು ಹಿಡುಕೊಳ್ಳಲಾಗಿ ಆದಿಲ್‌ಶಹನು ಅವನನ್ನು ಓಡಿಸಿ ಗೋವೆಯನ್ನು ಹಿಂದಕ್ಕೆ ತಕ್ಕೊಂಡನು. (೧೫೧೦). ಆದರೆ ಮುಂದಿನ ವರ್ಷ ಇಸ್ಮಾಯಿಲನು ಬಾದಶಹನಾದ ಬಳಿಕ ಆಲ್ಬುಕರ್ಕನು ಮತ್ತೊಮ್ಮೆ ಬಂದು ಗೋವೆಯನ್ನು ಹಿಡುಕೊಂಡನು. ಅದು ಇಂದಿನ ವರೆಗೂ ಫೋರ್ತುಗೀಸರ ವಶದಲ್ಲಿ ಇರುತ್ತದೆ.

ಇಸ್ಮಾಯಿಲನು ಚಿಕ್ಕವನಿದ್ದದರಿಂದ ಅವನ ವಜೀರ ಕಮಾಲಖಾನನು ಬಾದಶಹನನ್ನು ಶರೆ ಹಾಕಿ ರಾಜ್ಯವನ್ನು ಆಕ್ರಮಿಸುವ ಪ್ರಯತ್ನ ನಡಿಸಲಾಗಿ, ಇಸ್ಮಾಯಿಲನ ತಾಯಿಯು ಯುಕ್ತಿಯಿಂದ ಕಮಾಲನನ್ನು ಕೊಲ್ಲಿಸಿ ಬಂದ ಸಂಕಟವನ್ನು ಪರಿಹರಿಸಿದಳು. ಇದೇ ಸಂಧಿಯಲ್ಲಿ ಇಸ್ಮಾಯಿಲನು ರಾಯಚೂರು ಮುದಗಲ್ಲುಗಳನ್ನು ವಿಜಯನಗರದವರು ತಕ್ಕೊಂಡದ್ದು ಕೇಳಿ ಯುದ್ಧಕ್ಕೆ ಹೋಗಿ ಅಪಜಯ ಪಟ್ಟು ಬಂದನು. ಆದರೆ ಅವನು ಬೇದರದ ಕೋಟೆಯನ್ನು ಕೈವಶ ಮಾಡಿ ಕೊಂಡನು.

ಅಲ್ಲೀ ಆದಿಲ್‌ಶಹನ ಆಳಿಕೆಯಲ್ಲಿ ವಿಜಯನಗರದ ರಾಜನು ಅತಿ ಪ್ರಬಲನಾಗಿ, ಅಲ್ಲೀಗೂ ಗೋವಳಕೊಂಡದ ಕುತುಬಶಹನಿಗೂ ದುಃಸಹನಾಗಿ ಮುಸಲ್ಮಾನರನ್ನು ಬಹಳ ಪೀಡಿಸಿದನು. ಆದ್ದರಿಂದ ವಿಜಾಪುರ, ಬೇದರ, ಗೋವಳಕೊಂಡ, ಅಹಮ್ಮದನಗರ, ಈ ನಾಲ್ಕು ಸಂಸ್ಥಾನಗಳ ಬಾದಶಹಗಳು ಒಕ್ಕಟ್ಟಾಗಿ, ತಾಳೀ ಕೋಟೆಯ ಹತ್ತರ ರಾಮರಾಜನೆದುರಿಗೆ ಕಾಳಗಕ್ಕೆ ನಿಂತರು.. ಈ ಯುದ್ಧದಲ್ಲಿ ವಿಜಯನಗರದ ದೊಡ್ಡ ದಂಡು ಬಹು ಪರಾಕ್ರಮದಿಂದ ಹೋರಾಡಿ ಹಗೆಗಳನ್ನು ಓಡಿಸುವ ಸಂಧಿಯಲ್ಲಿ ರಾಮರಾಜನು ಹಗೆಗಳ ಕೈಯಲ್ಲಿ ಶಿಕ್ಕದ್ದರಿಂದ ಅವರು ಅವನ ತಲೆ ಕೊಯ್ದು ಭಾಲೆಗೆ ಚುಚ್ಚಿ ಮೆರಿಸಿದರು. ಅದನ್ನು ನೋಡಿ ವಿಜಯನಗರದ ದಂಡು ಧೈರ್ಯಗುಂದಿ ಸೋತು ಓಡಿ ಹೋಯಿತು. ಹಗೆಗಳು ವಿಜಯನಗರಕ್ಕೆ ಹೋಗಿ, ಅದನ್ನು ಸುಲಿದು ಪೂರಾ ಹಾಳುಗೆಡಹಿ ಹೊರಟು ಹೋದರು.

ಇದರ ನಂತರ ಅಲ್ಲೀ ಅದಿಲ್‌ಶಹನು ಕಾನಡಾ ಸಹಿತ ದಕ್ಷಿಣ ಮಹಾರಾಷ್ಟ್ರವನ್ನೂ ಈಗಿನ ಮೈಸೂರ ಶೀಮೆಯ ಉತ್ತರ ಭಾಗವನ್ನೂ ಆಕ್ರಮಿಸಿದನು.

೨ನೇ ಇಭ್ರಾಹಿಮ ಶಹನು ಪ್ರೌಢನಾದ ಬಳಿಕ ಸೀರಾ, ಹೊಸ ಕೋಟಿ, ಬೆಂಗಳೂರು, ಮುಂತಾದ ಪ್ರಾಂತಗಳನ್ನು ಆಕ್ರಮಿಸಿದನು. ಈ ಶೀಮೆಯಲ್ಲಿ ವಿಜಯನಗರವು ಹಾಳಾದ ಬಳಿಕ ಸ್ವಾದಿ, ಇಕ್ಕೇರಿ, ಮೈಸೂರು, ಇಲ್ಲಿಯ ನಾಯಕರು ಪ್ರಬಲರಾಗುತ್ತ ನಡಿದಿದ್ದನು. ಇಭ್ರಾಹಿಮನು ಅವರನ್ನು ಮುರಿಯದೆ ಅವರ ಮೇಲೆ ತನ್ನ ಅಮಲು ಕೂಡ್ರಿಸಿದನು.

ಮಹಮ್ಮದ ಶಹನು ಕಾರಭಾರವನ್ನು ಮುರಾರಿ ಪಂತನೆಂಬ ವಜೀರನಿಗೆ ವೊಪ್ಪಿಸಿ ತಾನು ರಾಜಧಾನಿಯಲ್ಲಿ ಬಹು ಭವ್ಯವಾದ ಇಮಾರತುಗಳನ್ನು ಕಟ್ಟಿಸುವ ಕೆಲಸದಲ್ಲಿ ತೊಡಗಿದನು. ಇಭ್ರಾಹಿಮ ರೋಜಾ, ಗೊಲಗುಮಟ, ಆಸಾರ ಮಹಾಲು, ಮುಂತಾದ ಇಮಾರತುಗಳು ಇವನ ಆಳಿಕೆಯಲ್ಲಿ ಹುಟ್ಟಿದವು. ದಿಲ್ಲಿಯ ಖಾನಡೌರಾಖನನೆಂಬ ಸರದಾರನು ಅಹಮ್ಮದ ನಗರವನ್ನು ಹಾಳು ಮಾಡಿ ವಿಜಾಪುರಕ್ಕೆ ಮುತ್ತಿಗೆ ಹಾಕಲು, ಮಹಮ್ಮದಶಹನು ದಿಲ್ಲಿಯ ಬಾದಶಹನಿಗೆ ವರ್ಷಕ್ಕೆ ೨೦ ಲಕ್ಷ ಹೊನ್ನು ಕಪ್ಪ ಕೊಡುತ್ತೇನೆಂದು ವೊಪ್ಪಿ ಕೊಂಡು ಆ ಸರದಾರನನ್ನು ಹಿಂದಕಟ್ಟಿದನು, ೧೬೩೬.

ಶಹಾಜಿಯ ಮಗನಾದ ಶಿವಾಜಿಯು ಇದೇ ಸಮಯದಲ್ಲಿ ಪ್ರಬಲನಾಗುತ್ತ ನಡಿದು ವಿಜಾಪುರಕ್ಕೆ ಶೇರಿದ ಕೋಟೆಗಳನ್ನು ವೊಂದರ ಹಿಂದೊಂದು ಯುಕ್ತಿಯಿಂದ ತಕ್ಕೊಂಡನು.

೨ನೇ ಅಲ್ಲಿಯ ಆಳಿಕೆಯಲ್ಲಿ ಔರಂಗಜೇಬನು ದಿಲ್ಲಿಯ ಪಟ್ಟವೇರುವ ಸಂಧಿಯಲ್ಲಿ ವಿಜಾಪುರಕ್ಕೆ ಮುತ್ತಿಗೆ ಹಾಕಿ ಸೊಲ್ಲಾಪುರದ ಶೀಮೆಯನ್ನು ತಕ್ಕೊಂಡು ಹೋದನು. ಇದೇ ಸಮಯದಲ್ಲಿ ಅಲ್ಲಿಯು ಶಿವಾಜಿಗೂ ಕಪ್ಪ ಕೊಡಲಿಕ್ಕೆ ವೊಡಂಬಟ್ಟನು, ೧೬೬೮.

ಶಿಕಂದರ ಶಹನು ವಿಜಾಪುರದ ಕಡೆಯ ಬಾದಶಹನು. ಇವನ ಆಳಿಕೆಯಲ್ಲಿ ದಿಲ್ಲಿಯ ಔರಂಗಜೇಬನು ತಾನೇ ಬಂದು ವಿಜಾಪುರಕ್ಕೆ ಮುತ್ತಿಗೇ ಹಾಕಿ ಅದನ್ನು ತಕ್ಕೊಂಡನು, ೧೬೮೬. ಶಿಕಂದರನನ್ನು ಔರಂಗಜೇಬನು ಗ್ವಾಲೇರಿಯಲ್ಲಿ ಶೆರೆ ಇಟ್ಟನು. ಇಲ್ಲಿಗೆ ವಿಜಾಪುರದ ರಾಜ್ಯವು ಲಯ ಹೊಂದಿತು. ವಿಜಾಪುರವನ್ನು ತಕ್ಕೊಂಡ ಕೂಡಲೆ ಔರಂಗಜೇಬನು ಗೋವಳಕೊಂಡಕ್ಕೆ ಹೋಗಿ, ಅಲ್ಲಿಯ ಬಾದಶಹನನ್ನು ಶೆರೆ ಹಿಡಿದು ಆ ಸಂಸ್ಥಾನವನ್ನು ಮುರಿದನು. ಅಹ್ಮದ ನಗರದ ರಾಜ್ಯವನ್ನಂತು ಅವನು ಈ ಪೂರ್ವದಲ್ಲಿಯೇ ಮುರಿದಿದ್ದನು. ಈ ಪ್ರಕಾರ ಬಾಮನೀ ಬಾದಶಾಹಿಯನ್ನು ಮುರಿದು ಉಂಟಾದ ಮೂರು ಪ್ರಮುಖ ಬಾದಶಾಹಿಗಳು ಪರಮಾವಧಿ ಇನ್ನೂರು ವರ್ಷ ನಡಿದು ಸನ್ ೧೬೮೭ನೇ ವರ್ಷದಲ್ಲಿ ನಿರ್ನಾಮವಾದವು.

ಪರದೇಶದವರು ಕರ್ನಾಟಕವನ್ನು ೧೬ನೇ ಶತಕದ ಆರಂಭದಲ್ಲಿ ನೋಡಿ ವರ್ಣಿಸಿದ್ದು— ವರ್ಥೆಮನೆಂಬ ಇತಲೀ ದೇಶದ ಪ್ರವಾಸಿಯು ಸನ್ ೧೫೦೨ರಲ್ಲಿ ವಿಜಾಪುರವನ್ನು ನೋಡಿ ಈ ಪ್ರಕಾರ ವರ್ಣಿಸಿದ್ದಾನೆ.— "ಪಟ್ಟಣದ ಸುತ್ತು ಮುತ್ತು ಕೋಟೆಯ

ಗೋಡೆಯುಂಟು. ಇದರೊಳಗಿನ ಮನೆಗಳು ಭವ್ಯವಾಗಿಯೂ ಸುಂದರವಾಗಿಯೂ ಇರುತ್ತವೆ. ಅರಸನು ಸಮರ್ಥನು, ಘನವಂತನು, ಉದಾರನು; ಅಹಂಕಾರದಿಂದ ವರ್ತಿಸುತ್ತಾನೆ. ಇವನ ಅರಮನೆಯಲ್ಲಿ ೪೪ ಕೋಣೆಗಳನ್ನು ದಾಟಿ ಅರಸನ ಕೋಣೆಗೆ ಹೋಗಬೇಕು. ಅರಸನ ಊಳಿಗದವರಲ್ಲಿ ಬಹು ಜನರು ಮೊಳ ಮೈಯಲ್ಲಿ ವಜ್ರ ಮಾಣಿಕಗಳನ್ನು ಕೂಡ್ರಿಸಿದಂಥ ಜೋಡುಗಳನ್ನು ಮೆಟ್ಟುತ್ತಾರೆ. ಪಟ್ಟಣದಿಂದ ಸುಮಾರು ಯೆರಡು ಮೈಲಿನ ಮೇಲೆ ಇರುವದೊಂದು ಗುಡ್ಡದಲ್ಲಿ ಅಗಿದು ವಜ್ರಗಳನ್ನು ತೆಗಿಯುತ್ತಾರೆ. ಈ ಗುಡ್ಡದ ಸುತ್ತು ಮುತ್ತು ಗೋಡೆಯನ್ನು ಕಟ್ಟಿ ಕಾವಲು ಇಟ್ಟಿದ್ದಾರೆ. ಈ ಪಟ್ಟಣದ ಮುಸಲ್ಮಾನರು ಸಾದಗರದಿನ ಮೈಬಣ್ಣದವರಿದ್ದಾರೆ. ಇವರು ನಿಲುವಂಗಿಗಳನ್ನು ಹಾಕಿಕೊಂಡು ಮೇಲೆ ಅಂದವಾದ ರೇಶಿಮೆಯ ಗಿಡ್ಡಂಗಿಗಳನ್ನು ಧರಿಸುವರು. ಹೆಂಗಸರು ಹೊರಗೆ ಹೋಗುವಾಗ ಬುರಿಕೆ ಹಾಕಿ ಕೊಳ್ಳುವರು. ಈ ಅರಸನಿಗೂ ವಿಜಯನಗರದ ಅರಸನಿಗೂ ಯುದ್ಧಗಳು ಯಾವಾಗಲೂ ನಡಿಯುತ್ತವೆ. ವಿಜಾಪುರದ ದಂಡಿನಲ್ಲಿ ೨೫೦೦೦ ರಾಹುತರೂ ಕಾಲಾಳುಗಳೂ ಇರುತ್ತಾರೆ. ಅವರೊಳಗೆ ಬಹು ಜನರು ಪರದೇಶದ ಬಿಳಿ ಮನುಷ್ಯರುಂಟು. ಅರಸನು ಬಹಳ ಹಡಗಗಳನ್ನು ಮಾಡಿದ್ದಾನೆ; ಕ್ರಿಸ್ತೀಜನರನ್ನು ಬಹಳ ದ್ವೇಷಿಸುತ್ತಾನೆ. ಗೋವೆಯಿಂದ ವಿಜಾಪುರಕ್ಕೆ ಪ್ರತಿ ವರ್ಷ ಹತ್ತು ಸಾವಿರ "ಪರದಾಯಿ" ಯೆಂಬ ಚಿನ್ನದ ನಾಣ್ಯಗಳು ಸಲ್ಲುತ್ತವೆ. ಗೋವೆಯು ಸಮುದ್ರ ದಂಡೆಯಲ್ಲಿ ಯುರೋಪದ ಪದ್ಧತಿಯಂತೆ ಕೋಟೆಯುಳ್ಳದ್ದಿರುತ್ತದೆ. ಕಾವಲುಗಾರರು ಮೆಮಲೂಕರು (ಮುಸಲ್ಮಾನರಾದ ಕ್ರಿಸ್ತೀ ಜನರು) ಇರುತ್ತಾರೆ. ಇವರಿಗೂ ನರಸಿಂಗನಿಗೂ (ವಿಜಯನಗರದ ಅರಸನಿಗೂ) ಯುದ್ಧಗಳಾಗುತ್ತವೆ. ಬಿಳಿ ಮನುಷ್ಯರು ದೊರಿದರೆ ಅವರನ್ನು ಅರಸು ತಿಂಗಳಿಗೆ ೧೫ರಿಂದ ೨೦ರ ವರೆಗೆ ಪರದಾಯಿ ನಾಣ್ಯ ಕೊಟ್ಟು ಚಾಕರಿಗೆ ಇಟ್ಟುಕೊಳ್ಳುತ್ತಾನೆ. ಆದರೆ ಪರದೇಶದವರನ್ನು ದಂಡಿನೊಳಗೆ ಇಡ ಬೇಕಾದರೆ, ಮೊದಲು ಅವರನ್ನು ಗುದ್ದಾಟಕ್ಕೆ ಹಚ್ಚಿ ಅವರ ಕಸುವು ಪರೀಕ್ಷಿಸಿ ಇಡುತ್ತಾನೆ.

ದುವಾರ್ತೆ ಬಾಬೋಸಾ ಯೆಂಬ ಪೋರ್ತುಗೀಸ ಪ್ರವಾಸಿಯು ಸನ್ ೧೫೦೦ರಿಂದ ೧೫೧೪ರ ವರೆಗೆ ಕರ್ನಾಟಕದಲ್ಲಿ ಸಂಚಾರ ಮಾಡಿ ಈ ಪ್ರಕಾರ ಬರಿದು ಇಟ್ಟಿದ್ದಾನೆ.— ಯೂಸಫ ಅದಿಲ್‌ಶಹನು ಗೋವೆಯನ್ನೇ ತನ್ನ ರಾಜಧಾನಿಯನ್ನು ಮಾಡುವ ಆಲೋಚನೆಯನ್ನು ಮೊದಲು ಮಾಡಿದ್ದನು. ಈಗ ಗೋವೆಗೆ ಅವನು ಆಗಾಗ್ಗೆ ಬರುತ್ತಿರುತ್ತಾನೆ. ಗೋವೆಯ ಬಂದರಕ್ಕೆ ಮಕ್ಕಾ, ಏಡನ್, ಆರ್ಮುಝು, ಮುಂತಾದ ಕಡೆಯಿಂದ ವ್ಯಾಪಾರಸ್ಥರ ಹಡಗಗಳು ಬಹಳ ಬರುತ್ತವೆ. ಗೋವೆಯು ದೊಡ್ಡ ಪಟ್ಟಣವದೆ; ಅದರಲ್ಲಿ ಸುಂಧರವಾದ ಮನೆಗಳುಂಟು, ಸರಸಾದ ಬೀದಿಗಳಿವೆ, ಮಶೀದೆಗಳೂ ಗುಡಿಗಳೂ ಬಹಳವುಂಟು. ಅರಸನು ಮನೋಹರವಾದಂಥ ದೊಡ್ಡ ದೊಡ್ಡ ಹಡಗಗಳನ್ನು ಕಟ್ಟಿಸಿದ್ದಾನೆ, ಕಬ್ಬಿಣ ಹಿತ್ತಾಳಿಗಳ ತೋಪುಗಳನ್ನು ಹೊಯಿಸಿದ್ದಾನೆ. ಯೂಸಫನ ರಾಜ್ಯದಲ್ಲಿ ವೊಕ್ಕಲತನವು ವೊಳಿತಾಗಿ ನಡಿಯುತ್ತದೆ, ಬೆಳೆ ಹೇರಳವಾಗಿ ಬರುತ್ತದೆ, ವೊಳ ದೇಶದ ವ್ಯಾಪಾರವು ಬಹಳ ನಡಿಯುತ್ತದೆ. ಬಾಮನೀ ಮಹಮೂದ ಶಹನು ಹೆಸರಿಗೆ ಮಾತ್ರ

ಯೂಸಫನ ವೊಡಿಯನಾಗಿದ್ದಾನೆ. ಅವನು ತನ್ನ ಸುಭೇದಾರರಿಗೆ ಪೂರ್ಣ ಅಧಿಕಾರ ಕೊಟ್ಟಿದ್ದಾನೆ. ಅವರು ತಮ್ಮ ತಮ್ಮೊಳಗೆ ಜಗಳಗಳನ್ನೂ ವೊಡಂಬಡಿಕೆಗಳನ್ನೂ ಬೇಕಾದ ಹಾಗೆ ಮಾಡಿ ಕೊಳ್ಳುತ್ತಾರೆ. ಈ ಸುಭೇದಾರರ ದಂಡಾಳುಗಳು ಅರಬೀ, ಇರಾಣೀ, ದಕ್ಷಿಣೀ ಭಾಷೆಗಳನ್ನಾಡುವರು. ಸರದಾರರು ಕುದುರೆಯ ಮೇಲೆ ಸಣ್ಣದೊಂದು ತಡಿ ಹಾಕಿ, ಅದಕ್ಕೆ ತಮ್ಮನ್ನು ಬಿಗಿದು ಕೊಂಡು ಯುದ್ಧಕ್ಕೆ ಹೋಗುವರು. ರಾವುತರು ಕವಚಗಳನ್ನು ಹಾಕಿ ಕೊಂಡು, ಉದ್ದವಾದದ್ದೊಂದು ಭಾಲೆ, ಕೊಡ್ಲೆ, ಯೆರಡು ಕತ್ತಿ, ವೊಂದು ಢಾಲು, ವೊಂದು ಧನುಷ್ಯ, ಕೆಲವು ಬಾಣಗಳು, ಇಷ್ಟು ಆಯುಧಗಳನ್ನು ತಕ್ಕೊಂಡು ಯುದ್ಧಕ್ಕೆ ಹೋಗುವರು. ದಂಡಾಳುಗಳ ಹೆಂಡರು ಮಕ್ಕಳು ಅವರ ಸಂಗಡ ಹೋಗುತ್ತಾರೆ. ಯುದ್ಧದ ಸಾಮಗ್ರಿಗಳನ್ನು ಯೆತ್ತುಗಳ ಮೇಲೆ ಹೇರಿ ಕೊಂಡು ಹೋಗುತ್ತಾರೆ. ನರಸಿಂಗನಿಗೂ ಮುಸಲ್ಮಾನರಿಗೂ ಹೋರಾಟಗಳು ಮೇಲೆ ಮೇಲೆ ಆಗುತ್ತವೆ. ಹಿಂದೂ ದಂಡಾಳುಗಳು ಕಪ್ಪು ಮೈಬಣ್ಣದವರು, ಆದರೆ ಕಸುವುಳ್ಳವರು, ಶೂರರು. ಕಾಲಾಳುಗಳ ಕೈಯಲ್ಲಿ ಕತ್ತಿಗಳು, ಬೆನ್ನಿಗೆ ಧನುಷ್ಯ, ಬಾಣ, ಢಾಲು ಇರುವವು. ಬಾಣ ಹೊಡಿಯುವದರಲ್ಲಿ ಇವರು ಬಹು ಕುಶಲರು. ಇವರ ಧನುಷ್ಯಗಳು ಇಂಗ್ಲಿಷರ ಧನುಸ್ಸುಗಳಂತೆ ಉದ್ದವಾಗಿ ಇರುತ್ತವೆ. ನಡುವಿನ ಮೇಲೆ ಇವರ ಮೈ ಮೇಲೆ ಬಟ್ಟೆಗಳಿರುವದಿಲ್ಲ, ತಲೆಗೆ ವೊಂದು ಸಣ್ಣ ಟೊಪ್ಪಿಗೆ ಇರುತ್ತದೆ. ಈ ಹಿಂದೂ ದಂಡಾಳುಗಳು ಗೋಮಾಂಸ ಹೊರ್ತಾಗಿ ಯಾವತ್ತು ಬಗೆಯ ಮಾಂಸ ತಿನ್ನುವರು. ಇವರು ಮೂರ್ತಿಗಳನ್ನು ಪೂಜಿಸುತ್ತಾರೆ, ಸತ್ತವರನ್ನು ಸುಡುವರು. ಸತ್ತ ಗಂಡಂದಿರ ಕೂಡ ಅವರ ಹೆಂಡಂದಿರು ಸ್ವಸಂತೋಷದಿಂದ ಸತಿ ಹೋಗುತ್ತಾರೆ.

## ಕಿರುಕುಳ ಸಂಸ್ಥಾನಗಳು.

ವಿಜಯನಗರವು ಹಾಳಾದ ಬಳಿಕ ತುಂಗಭದ್ರೆಯ ದಕ್ಷಿಣದಲ್ಲಿ ನಾಲ್ಕು ಹೊಸ ಸಂಸ್ಥಾನಗಳು ಉದಯ ಹೊಂದಿದವು.

ಕೊಡಗದ ರಾಜ್ಯವು.—ಕೊಡಗ ದೇಶವನ್ನು ಬುನಾದಿಯಿಂದ ಗಂಗರೆಂಬ ಅರಸರು ಆಳುತ್ತಿದ್ದರು. ಈ ಅರಸರು ವಿಜಯನಗರದವರ ಘನತೆಯ ಕಾಲದಲ್ಲಿ ಅವರ ಕೈಕೆಳಗೆ ಮಾಂಡಲಿಕರಾಗಿ ನಡಿದು, ಆ ರಾಜ್ಯವು ಹಾಳಾದ ಬಳಿಕ ಮತ್ತೆ ಸ್ವತಂತ್ರರಾದರು.

ಸ್ವಾದಿಯ ಅರಸರು.—ವಿಜಯನಗರದ ಪ್ರಖ್ಯಾತ ದಳವಾಯಿಯಾದ ವೆಂಕಟಾದ್ರಿಯು ತನ್ನ ಸೋದರಳಿಯನಾದ ಅರಸಪ್ಪ ನಾಯಕನಿಗೆ ಸ್ವಾದಿಯ ಪರಗಣೆಯನ್ನು ಸನ್ ೧೫೫೫ರಲ್ಲಿ ಕೊಟ್ಟಿದ್ದನು. ಮುಂದೆ ವಿಜಯನಗರವು ಹಾಳಾದ ಬಳಿಕ ಸ್ವಾದಿಯ ಅರಸರು ತಮ್ಮ ರಾಜ್ಯವನ್ನು ಬೆಳಿಸಿ ಸ್ವತಂತ್ರದಿಂದ ಆಳ ಹತ್ತಿದರು.

ಇಕ್ಕೇರಿಯ ಅರಸರು.—ವಿಜಯನಗರದ ಸದಾಶಿವ ರಾಯನು ತೆಲದಿ ಯೆಂಬ ಗ್ರಾಮದ ಗೌಡನಾದ ಸದಾಶಿವ ನಾಯಕನೆಂಬವನಿಗೆ ಚಂದ್ರಗುತ್ತಿ, ಬಾರ್ಕೂರು, ಮಂಗ

ಳೂರು, ಈ ಮೂರು ಪರಗಣೆಗಳ ಸುಭೆಯನ್ನು ಕೊಟ್ಟಿದ್ದನು, ೧೫೬೦. ಈ ನಾಯಕನು ಮಲವರ ಕುಲದ ಲಿಂಗವಂತನು. ವಿಜಯನಗರ ಹಾಳಾದ ಬಳಿಕ ಇವನ ವಂಶದವರು ಇಕ್ಕೇರಿಯಲ್ಲಿ ಸ್ವತಂತ್ರದಿಂದ ಆಳ ಹತ್ತಿದರು. ಇವರಾದರೂ ತಮ್ಮ ರಾಜ್ಯವನ್ನು ತಕ್ಕಮಟ್ಟಿಗೆ ಬೆಳಿಸಿದರು..

ಮೈಸೂರ ಅರಸರು.—ಇವರ ಮೂಲ ಪುರುಷನು ಯಾದವ ಕುಲದವನೆಂದು ಹೇಳುತ್ತಾರೆ. ಅವನ ವಂಶದಲ್ಲಿ ಆರು ಬೆರಳಿನ ಚಾಮರಾಜನೆಂಬವನು ಸನ್ ೧೫೦೭ರಲ್ಲಿ ೩೦ ಹಳ್ಳಿಗಳಿಗೆ ವೊಡಿಯನಾಗಿದ್ದನು. ಅವನ ಮೂವರು ಮಕ್ಕಳಲ್ಲಿ ಬಟ್ಟದಲೆಯ ಚಾಮರಾಜನೆಂಬವನು ಮೈಸೂರು ಕೋಟೆಯನ್ನು ಕಟ್ಟಿಸಿದನು, ೧೫೨೦. ತಿಮ್ಮ ರಾಜನೆಂಬವನು ಹೊಸ ಶೀಮೆಗಳನ್ನು ಸಂಪಾದಿಸಿದನು. ಮುಂದೆ ವಿಜಯನಗರವು ಹಾಳಾದ ಬಳಿಕ ಹಿರಿ ಚಾಮರಾಜನೆಂಬವನು ಸ್ವತಂತ್ರದಿಂದ ಆಳ ಹತ್ತಿದನು, ೧೫೭೧. ರಾಜ ವೊಡಿಯನೆಂಬ ಅರಸು ಶ್ರೀರಂಗ ಪಟ್ಟಣದಲ್ಲಿ ಸಣ್ಣದೊಂದು ಶೀಮೆಗೆ ವೊಡೆಯನಾಗಿ ಆಳುತ್ತಿದ್ದ ವಿಜಯ ನಗರದವರ ವಂಶದ ಅರಸನನ್ನು ಹೊರಗೆ ಹಾಕಿ, ಆ ಪಟ್ಟಣವನ್ನು ತಕ್ಕೊಂಡದ್ದಲ್ಲದೆ ಬೇರೆ ಹಲವು ನಾಯಕರ ಶೀಮೆಗಳನ್ನು ಕಸುಕೊಂಡನು. ಈ ವಂಶದಲ್ಲಿ ಕಂಠೀರವರಾಯ, ಚಿಕ್ಕ ದೇವರಾಯ, ಯೆಂಬವರಿಬ್ಬರು ಅರಸರು ಬಹು ಪರಾಕ್ರಮಶಾಲಿಗಳಾಗಿ, ತಮ್ಮ ರಾಜ್ಯವನ್ನು ವಿಸ್ತಾರವಾಗಿ ಬೆಳಿಸಿದರು. ಈ ರಾಜ್ಯವನ್ನು ಹೈದರನೆಂಬ ಮುಸಲ್ಮಾನನು ಸನ್ ೧೭೬೧ರಲ್ಲಿ ಆಕ್ರಮಿಸಿದನು. ಇವನ ಇತಿಹಾಸವು ಮುಂದೆ ಬರುವದು. ಸ್ವಾದಿ, ಇಕ್ಕೇರಿ, ಇವೆರಡೂ ಸಂಸ್ಥಾನಗಳನ್ನು ಹೈದರನು ಮುರಿದನು.

ವಿಜಯನಗರದ ಆಳಿಕೆಯಲ್ಲಿ ಬೈ ಅರಸು ಯೆಂಬ ನಾಯಕನು ಮಂಗಳೂರಿನ ಹತ್ತರ ಕಾರ್ಕಳ್ಲಿನಲ್ಲಿ, ಮತ್ತೊಬ್ಬ ಜೈನ ಸಂಸ್ಥಾನಿಕನು ಗೆರಸಪ್ಪೆಯಲ್ಲಿ ಆಳುತ್ತಿದ್ದನು. ಕಾರ್ಕಳ್ಲಿನ ನಾಯಕನ ಮಗಳಾದ ಬೈರಾದೇವಿ ಯೆಂಬವಳನ್ನು ಗೆರಸಪ್ಪೆಯ ಜೈನ ಸಂಸ್ಥಾನಿಕನು ಲಗ್ನ ಮಾಡಿ ಕೊಂಡದ್ದರಿಂದ ಯೆರಡೂ ರಾಜ್ಯಗಳು ವೊಂದಾಗಿ ಕೆಲವು ದಿವಸ ನಡಿದವು. ಮುಂದೆ ಇಕ್ಕೇರಿಯ ವೆಂಕಟಪ್ಪ ನಾಯಕನು ಈ ರಾಜ್ಯವನ್ನು ಮುರಿದನು, ೧೬೦೮.

ಸವಣೂರ ಸಂಸ್ಥಾನವು.—ವಿಜಾಪುರದಲ್ಲಿ ಶಿಕಂದರನು ಪಟ್ಟವೇರಿದ ಬಳಿಕ ಖವಾಸಖಾನನೆಂಬ ವಜೀರನು ಶಿಕಂದರನ ಅಕ್ಕನನ್ನು ಔರಂಗಜೇಬನ ಮಗನಿಗೆ ಕೊಟ್ಟು ಅವನ ಸ್ನೇಹ ಸಂಪಾದಿಸುವ ಆಲೋಚನೇ ಮಾಡಿದ್ದನು. ಆದರೆ ವಿಜಾಪುರದವರು ತುರ್ಕರು ಔರಂಗಜೇಬನು ಮೊಗಲನು. ಆದ್ದರಿಂದ ವಿಜಾಪುರದ ಮುತ್ಸದ್ದಿಗಳು ಈ ಶರೀರ ಸಂಬಂಧಕ್ಕೆ ಸಂಮತಿಸದೆ ಖವಾಸಖಾನನನ್ನು ಕೊಂದರು. ತರುವಾಯ ಅಬದುಲ್ ಕರೀಮ ಖಾನನೆಂಬ ತುರ್ಕೀ ಸರದಾರನು ವಿಜಾಪುರದಲ್ಲಿ ವಜೀರನಾಗಿ ತನ್ನ ಮಗನಾದ ಅಬದುಲ್ ರಾವೂಫ ಖಾನನೆಂಬವನಿಗೆ ಬಂಕಾಪುರದ ಪರಗಣೆಯ ಸುಭೆಯನ್ನು ಕೊಟ್ಟನು. ವಿಜಾಪುರವು ಹಾಳಾದ ಬಳಿಕ ಈ ರಾವೂಫ ಖಾನನು ಔರಂಗಜೇಬನ ದಂಡಿನಲ್ಲಿ ಶೇರಿದ್ದರಿಂದ ಆ ಬಾದಶಹನು ರಾವೂಫ ಖಾನನಿಗೆ ಮತ್ತೂ ಕೆಲವು

ಶೀಮೆಗಳನ್ನು ಕೊಟ್ಟನು. ಆದದರಿಂದ ನವಲಗುಂದ, ಶಿರಟ್ಟಿ, ಹಾವನೂರು, ಡಂಬಳ, ಈ ನಾಲ್ಕು ಪರಗಣೆಗಳ ದೇಸಾಯಿಗಳು ರಾವೂಫಖಾನನಿಗೆ ಅಂಕಿತರಾದರು, ೧೭೭೦. ಮುಂದೆ ರಾವೂಫಖಾನನು ಬಂಕಾಪುರ ಬಿಟ್ಟು ಸವಣೂರನ್ನು ತನ್ನ ರಾಜಧಾನಿಯನ್ನು ಮಾಡಿ ಕೊಂಡು ನಿಂತನು.

ಬೆಳಗಾವಿಯ ಅಸದಖಾನನು.—ಇಸ್ಮಾಯಿಲಶಹನ ಆಳಿಕೆಯ ಆರಂಭದಲ್ಲಿ ವಿಜಾಪುರದ ದರ್ಬಾರಿನಲ್ಲಿ ನಡಿದ ದಂಗೆಯ ಸುದ್ದಿಯನ್ನು ಹಿಂದೆ ಹೇಳಿದ್ದೇವೆ. ಆ ಕಾಲಕ್ಕೆ ಇಸ್ಮಾಯಿಲನ ತಾಯಿಗೆ ಖುಸರಾವು ಯೆಂಬವನೊಬ್ಬ ತುರ್ಕೀ ಗುಲಾಮನು ಸಹಾಯ ಮಾಡಿದ್ದರಿಂದ ಅವನಿಗೆ ಬಾದಶಹನು ಆಸದಖಾನ (ಹುಲಿಯಂಥ ಮನುಷ್ಯ) ಯೆಂಬ ಕಿತಾಬು ಕೊಟ್ಟು ಬೆಳಗಾವಿಯ ಜಹಾಗೀರು ಕೊಟ್ಟನು, ೧೫೧೧. ಅಸದಖಾನನು ೩೮ ಬೆಳಗಾವಿಯಲ್ಲಿ ಆಳಿ, ವಿಜಾಪುರದ ಸಾಮ್ರಾಜ್ಯವನ್ನು ಬಹಳ ಸಾರಿ ಬಹು ಶೌರ್ಯದಿಂದ ಸಂರಕ್ಷಿಸಿದನು. ಇವನು ಹೆಸರಾದ ಶೂರನೂ, ಬುದ್ಧಿಶಾಲಿಯಾದ ಮುತ್ಸದ್ದಿಯೂ ಇದ್ದದ್ದಲ್ಲದೆ ವಿದ್ವಾಂಸರಿಗೆ ಬಹಳ ಆಶ್ರಯ ಕೊಡುತ್ತಿದ್ದನು. ಇವನು ದೊಡ್ಡ ಅರಸನಂತೆ ರಾಜ್ಯ ಸುಖವನ್ನು ಭೋಗಿಸಿ ಮರಣ ಹೊಂದಿದ ಬಳಿಕ ಇವನ ಮಗನಿಗೆ ಇಭ್ರಾಹೀಮಶಹನು ಹುಕ್ಕೇರಿಯ ಪರಗಣೆಯನ್ನು ಜಹಾಗೀರು ಕೊಟ್ಟು ಬೆಳಗಾವಿಯನ್ನು ತಕ್ಕೊಂಡನು. ಬೆಳಗಾವಿಯಲ್ಲಿ ಅಸದಖಾನನ ದರ್ಗಾಕ್ಕೆ ಜನರು ಬಹಳ ಮಾನ ಕೊಡುತ್ತಾರೆ.

## ಮಹಾರಾಷ್ಟ್ರರು.

ಚಾಲುಕ್ಯರ ಆಳಿಕೆಯಲ್ಲಿ ಮಹಾರಾಷ್ಟ್ರರು ಬಹಳವಾಗಿ ಹೆಸರಿಗೆ ಬಂದಿದಿಲ್ಲ. ಆದರೂ ಅವರು ತೀರ ಅಪ್ರಸಿದ್ಧರಾಗಿ ಇರುತ್ತಿದ್ದರೆಂತಲೂ ತೋರುವದಿಲ್ಲ. ಚಾಲುಕ್ಯರ ತರುವಾಯ ಉದಯ ಹೊಂದಿದ ಯಾದವರೂ ಬಲ್ಲಾಳರೂ ಮಹಾರಾಷ್ಟ್ರರೇ. ಯಾದವರ ಆಳಿಕೆಯಲ್ಲಿ ಮಹಾರಾಷ್ಟ್ರರಿಗೆ ಹೆಚ್ಚು ಬಲ ಬಂತೆಂದು ಹೇಳ ಬಹುದು. ಕೊಂಕಣದಲ್ಲಿ ಶಿಲಾಹಾರರ ಕಾಲದಿಂದ, ಘಟ್ಟದ ಮೇಲೆ ಯಾದವರ ಕಾಲದಿಂದ ಮಹಾರಾಷ್ಟ್ರರು ಹೆಸರಿಗೆ ಬಂದು ಸಣ್ಣ ದೊಡ್ಡ ಕೋಟೆಗಳನ್ನು ಹಿಡು ಕೊಂಡು ಅವುಗಳ ಸುತ್ತುಮುತ್ತು ಅಲ್ಪ ಸ್ವಲ್ಪ ಶೀಮೆಗೆ ವೊಡೆಯರಾಗಿ ಪಾಳ್ಯಗಾರರೆನಿಸಿ ಕೊಂಡರು. ಬಾಮನೀ ವಂಶದ ಮೊದಲನೇ ಬಾದಶಹಗಳ ಕಾಲಕ್ಕೆ ಕೊಂಕಣದಲ್ಲಿಯೂ ಘಟ್ಟದ ಮೇಲೆಯೂ ಮಹಾರಾಷ್ಟ್ರ ಪಾಳ್ಯಗಾರರ ಹೆಸರುಗಳು ಇತಿಹಾಸದಲ್ಲಿ ಬಂದಿರುತ್ತವೆ. ಮುಂದೆ ವಿಜಾಪುರ, ಅಹಮ್ಮದನಗರ, ಈ ಯೆರಡು ಬಾದಶಾಹಿಗಳ ದರ್ಬಾರುಗಳಲ್ಲಿ ಸಿಂದಕೇರಿಯ ಜಾಧವರಾವ, ಅಲ್ಲೀ ಬಾಗದ ಆಂಗ್ರೆ, ವಾಡಿಯ ಸಾವಂತ, ಕಾಗಲದ ಘಾಟಕೆ, ಫಲಟಣದ ನಿಂಬಾಳಕ, ಜಸ್ತಿಯ ಡಫಳೆ, ಮುದೋಳದ ಘೋರ್ಪಡೆ, ಮುಂತಾದ ಮಹಾರಾಷ್ಟ್ರರು ಪ್ರಮುಖರಾದ ಸರದಾರರೆನಿಸಿ ಕೊಳ್ಳುತ್ತಿದ್ದರು. ಇವರು ಯಾದವರ ಆಳಿಕೆಯಲ್ಲಿ ಅಥವಾ ಅದಕ್ಕೂ ಪೂರ್ವದಲ್ಲಿ ಪಾಳ್ಯಗಾರರೊಳಗೆ ಶೇರಿದರೆಂದು ಗ್ರಹಿಸ ಬಹುದು.

ಅಹಮ್ಮದನಗರದ ಮಹಾರಾಷ್ಟ್ರ ಸರದಾರರಲ್ಲಿ ಶಹಾಜೀ ಭೋಸಲೇ ಯೆಂಬವನೊಬ್ಬ ಸರದಾರನಿದ್ದನು. ಅವನು ಕೆಲವು ದಿವಸ ಅಹಮ್ಮದನಗರದ ದಂಡಿನಲ್ಲಿ ಚಾಕರಿಯ ಮಾಡಿದ ಬಳಿಕ ಅಲ್ಲಿಂದ ಹೊರಟು ವಿಜಾಪುರದವರ ಆಶ್ರಯಕ್ಕೆ ನಿಂತನು. ಶಹಾಜಿಗೆ ಪುಣೆ, ಸುಪೆ, ಇವೆರಡು ಪರಗಣೆಗಳನ್ನು ವಿಜಾಪುರದ ಬಾದಶಹನು ಜಹಾಗೀರು ಹಾಕಿ ಕೊಟ್ಟಿದ್ದನು, ೧೬೩೭. ಮುಂದೆ ದಕ್ಷಿಣ ಕರ್ನಾಟಕದಲ್ಲಿ ಹಿಂದೆ ಹೇಳಿದ ಸೀರಾ, ಹೊಸ ಕೋಟೆ, ಬೆಂಗಳೂರು, ಬಾಳಾಪುರ, ಈ ಪರಗಣೆಗಳು ವಿಜಾಪುರದ ಬಾದಶಹನಿಗೆ ಶಹಾಜಿಯ ಪರಾಕ್ರಮದಿಂದ ದೊರಿದ ಕಾರಣ ಬಾದಶಹನು ಆ ಪರಗಣೆಗಳ ಸುಭೆಯನ್ನು ಶಹಾಜಿಗೆ ಕೊಟ್ಟನು, ೧೬೩೮. ಶಹಾಜಿಗೆ ಹಿರಿ ಹೆಂಡತಿಯ ಹೊಟ್ಟೇಲಿ ಸಂಬಾಜಿ, ಶಿವಾಜಿ, ಯೆಂಬವರಿಬ್ಬರು ಮಕ್ಕಳು. ಹಿರಿ ಮಗ ಸಂಬಾಜಿಯು ದಕ್ಷಿಣದಲ್ಲಿ ತಂದೆಯ ಬಳಿಯಲ್ಲಿ ಇರುತ್ತಿದ್ದು, ಪ್ರೌಢನಾದ ಬಳಿಕ ವೊಂದು ಯುದ್ಧದಲ್ಲಿ ಮಡಿದನು. ಶಹಾಜಿಯ ಚಿಕ್ಕ ಹೆಂಡತಿಯ ಮಗನ ಹೆಸರು ವೆಂಕೋಜಿಯು.

ಶಿವಾಜಿಯು ಜುನ್ನರದ ಬಳಿಯಲ್ಲಿ ಶಿವನೇರಿ ಯೆಂಬ ಕೋಟೆಯಲ್ಲಿ ಸನ್ ೧೬೦೭ರಲ್ಲಿ ಹುಟ್ಟಿದನು. ಇವನ ತಾಯಿ ಜಿಜಾಬಾಯಿಯು ಸಿಂದಕೇರಿಯ ಜಾಧವರಾಯನ ಮಗಳು. ಜಿಜಾಬಾಯಿಯು ಶಿವಾಜಿ ಸಹಿತವಾಗಿ ಪುಣೆಯಲ್ಲಿ ನಿಂತು, ದಾದೋಜೀ ಕೊಂಡ ದೇವನೆಂಬ ವೃದ್ಧ ಬ್ರಾಹ್ಮಣ ಕಾರಭಾರಿಯನಾದ ಸಹಾಯದಿಂದ ಜಹಾಗೀರಿನ ಕಾರಭಾರವನ್ನು ನಡಿಸುತ್ತಿದ್ದಳು. ದಾದೋಜಿಯು ಶಿವಾಜಿಗೆ ಬಹಳ ಪ್ರೀತಿ ಮಾಡಿ, ಅರಸರಿಗೆ ತಕ್ಕಂಥ ವಿದ್ಯಗಳನ್ನೂ ಗುಣಗಳನ್ನೂ ಕಲಿಸಿದನು. ಶಿವಾಜಿಯು ಚಿಕ್ಕಂದಿನಲ್ಲಿಯೇ ಬಹು ಧೈರ್ಯಶಾಲಿಯಾದ ಉಬ್ಬಾಳುತನದ ಹುಡುಗನೆನಿಸಿಕೊಳ್ಳುತ್ತಿದ್ದನು. ಅವನು ಪೂರಾ ಪ್ರೌಢನಾಗುವ ಪೂರ್ವದಲ್ಲಿಯೇ ತಾನಾಜೀ ಮಾಲುಸರಾ, ಯೆಸಾಜಿ ಕಂಕ, ಬಾಜೀ ಫಸಲಕರ, ಯೆಂಬ ಮೂವರು ಕೊಂಕಣದ ಬಡ ಶಿಪಾಯಿಗಳ ಸ್ನೇಹವನ್ನು ಸಂಪಾದಿಸಿ ತನಗಾಗಿ ಸ್ವತಂತ್ರವಾದ ರಾಜ್ಯವನ್ನು ಸಂಪಾದಿಸುವ ಮಾರ್ಗವನ್ನು ಹುಡುಕ ಹತ್ತಿದನು. ಎಲ್ಲಕ್ಕೂ ಮೊದಲು ೧೮ ವರ್ಷದ ವಯಸ್ಸಿನ ಸುಮಾರಿನಲ್ಲಿ ಶಿವಾಜಿಯು ತೋರಣಾ ಯೆಂಬ ಕೋಟೆಯನ್ನು ಯುದ್ಧದ ಹಾದಿಗೆ ಹೋಗದೆ ಬಹು ಯುಕ್ತಿಯಿಂದ ತಕ್ಕೊಂಡನು. ಆ ಕೋಟೆಯಲ್ಲಿ ಅವನಿಗೆ ಬಹಳ ಹಣ ಸಿಕ್ಕಿತು. ಮುಂದೆ ಅವನು ತನ್ನ ಮಾವಳೆ ಯೆಂಬ ಮಲ್ಲಾಡದ ಮಹಾರಾಷ್ಟ್ರರ ಚಿಕ್ಕ ದಂಡನ್ನು ಕ್ರಮವಾಗಿ ಬೆಳಿಸುತ್ತ, ತೋರಿಕೆಯಲ್ಲಿ ವಿಜಾಪುರದ ಬಾದಶಹನ ಹೆಸರಿನಿಂದ ವೊಂದರ ಹಿಂದೊಂದು ಕೋಟೆಗಳನ್ನು ಕೈವಶ ಮಾಡಿಕೊಳ್ಳುತ್ತ ನಡಿದನು; ರಾಜಗಡವೆಂಬ ಹೊಸ ಕೋಟೆಯನ್ನು ಕಟ್ಟಿಸಿದನು. ಈ ಪ್ರಕಾರ ಶಿವಾಜಿಯ ಉದ್ಧಟತನವನ್ನು ಸೈರಿಸದೆ ವಿಜಾಪುರದ ಬಾದಶಹನು ಅವನನ್ನು ಅಂಕಿತಕ್ಕೆ ತರುವದಕ್ಕೋಸ್ಕರ ಶಹಾಜಿಯನ್ನು ಶರೆ ಹಿಡಿದು ಕತ್ತಲೇ ಕೋಣೆಯಲ್ಲಿ ಹಾಕಲಾಗಿ, ಶಿವಾಜಿಯು ದಿಲ್ಲಿಯ ಬಾದಶಹನ ಚಾಕರಿಗೆ ನಿಂತಂತೆ ತೋರಿಸಿ, ಅವನ ಪತ್ರ ತರಿಸಿ ಶಹಾಜಿಯ ಬಿಡುಗಡೇ ಮಾಡಿಸಿದನು, ೧೬೫೦. ಶಹಾಜಿಯು ಮತ್ತೆ ಕರ್ನಾಟಕಕ್ಕೆ ಹೊರಟು ಹೋದನು. ಮುಂದೆ ಅಲ್ಲೀ ಅದಿಲ್‌ಶ

ಹನು, ಅಪಝುಲಖಾನನೆಂಬ ಸರದಾರನನ್ನು ಶಿವಾಜಿಯ ಕೂಡ ಯುದ್ಧಕ್ಕೆ ಕಳಿಸಲಾಗಿ, ಶಿವಾಜಿಯು ಬಹು ಯುಕ್ತಿಯ ಕಪಟದಿಂದ ಅವನನ್ನು ಕೊಂದು, ಅವನ ದಂಡಿನವರನ್ನು ಕತ್ತರಿಸಿ ಚಲ್ಲಿದನು, ೧೬೫೯. ದಿಲ್ಲಿಯ ಔರಂಗಜೇಬ ಬಾದಶಹಾನು ಶಿವಾಜಿಯನ್ನು ಕರಿಸಿ ಕೊಂಡು ಶರೆಯೊಳಗೆ ಚಲ್ಲಲಾಗಿ, ಶಿವಾಜಿಯು ಹಣ್ಣುಗಳ ಪೆಟಾರಿಗೆಯೊಳಗೆ ಕೂತು ಯುಕ್ತಿಯಿಂದ ಪಾರಾಗಿ ಬಂದನು. ಮುಂದಿನ ವರ್ಷ ಇವನು ಹುಬ್ಬಳ್ಳಿಯನ್ನು ಸುಲಿದು ಅಪರಿಮಿತ ದ್ರವ್ಯವನ್ನು ಸಂಪಾದಿಸಿದನು, ೧೬೬೩. ಮುಂದಿನ ವರ್ಷ ಶಿವಾಜಿಯು ರಾಯಗಡದಲ್ಲಿ ಪಟ್ಟಾಭಿಷೇಕ ಮಾಡಿಸಿ ಕೊಂಡು, "ಮಹಾರಾಜಾಧಿರಾಜ" ನೆಂಬ ಬಿರುದನ್ನೂ ಛತ್ರ ಚಾಮರ ಮುಂತಾದ ಸಾಮ್ರಾಜ್ಯ ಚಿನ್ಹಗಳನ್ನೂ ಧರಿಸಿ, ತನ್ನ ಹೆಸರಿನ ನಾಣ್ಯಗಳನ್ನು ಮುದ್ರಿಸಿದನು. ಈ ಪೂರ್ವದಲ್ಲಿಯೇ ಶಹಾಜಿಯು ಮರಣ ಹೊಂದಿದ್ದನು. ಆದ್ದರಿಂದ ಶಿವಾಜಿಯು ಮತ್ತೊಮ್ಮೆ ದಕ್ಷಿಣಕ್ಕೆ ಹೋಗಿ, ಮಲ ತಮ್ಮನಾದ ವೆಂಕೋಜಿಯ ಕೈಯಿಂದ ತಂದೆಯ ಜಹಾಗೀರಿನಲ್ಲಿ ಪಾಲು ತಕ್ಕೊಂಡನು. ಅಲ್ಲೀ ಅದಿಲ್‌ಶಹನ ಮೇಲೆ ಶಿವಾಜಿಯು ೩೦ ಲಕ್ಷ ರೂಪಾಯಿಯ ಕಪ್ಪವನ್ನು ಕೂಡ್ರಿಸಿ ಮೊಗಲರ ರಾಜ್ಯದಲ್ಲಿ ಸಹ "ಚೌಥ, ಸರದೇಶ ಮುಖಿ" ಯೆಂಬ ಬಾಬುಗಳನ್ನು ಯೆತ್ತ ಹತ್ತಿದನು, ೧೬೬೮. ಈ ಪ್ರಕಾರ ಮಹಾರಾಷ್ಟ್ರರ ಸೂರ್ಯನಾದ ಶಿವಾಜಿಯು ಸುಮಾರು ೨೫ ವರ್ಷದೊಳಗೆ ಘನವಾದ ರಾಜ್ಯ ವೈಭವವನ್ನು ಸ್ವಪರಾಕ್ರಮದಿಂದ ಸಂಪಾದಿಸಿ, ಸಾರ್ವಭೌಮನೆನಿಸಿಕೊಂಡು, ಕಡೆಗೆ ಕಾಲಿಗೆ ಮಂಜೆಯಾಗಿ ಸನ್ ೧೬೮೦ರಲ್ಲಿ ಮರಣ ಹೊಂದಿದನು.

ಮುಂದೆ ಶಿವಾಜಿಯ ಹಿರಿ ಮಗ ಸಂಭಾಜಿಯು ಪಟ್ಟವೇರಿದನು. ಇವನು ಶೂರನಿದ್ದಾಗ್ಯೂ ವಿಷಯಾಸಕ್ತಿಯಲ್ಲಿ ಕಾಲ ಕಳೆಯುವನು. ಔರಂಗಜೇಬನು ಮುಂದೆ ಸ್ವಲ್ಪ ದಿವಸದೊಳಗೆ ದಕ್ಷಿಣಕ್ಕೆ ಬಂದು ವಿಜಾಪುರ, ಗೋವಳಕೊಂಡಗಳನ್ನು ಹಾಳು ಮಾಡಿದ ವೃತ್ತಾಂತವನ್ನು ಹಿಂದೆ ಹೇಳಿದ್ದೇವೆ. ಆ ಬಾದಶಾಹಿಗಳನ್ನು ಮುರಿದ ಬಳಿಕ ಔರಂಗಜೇಬನು ಸಂಭಾಜಿಯ ರಾಜ್ಯವನ್ನು ಆಕ್ರಮಿಸುತ್ತ ನಡಿದಿರಲಾಗಿ, ಅವನ ಸರದಾರನೊಬ್ಬನು ಸಂಭಾಜಿಯನ್ನು ಶರೆ ಹಿಡಿದನು. ಸಂಭಾಜಿಗೆ ಮುಸಲ್ಮಾನನಾಗೆಂದು ಔರಂಗಜೇಬನು ಹೇಳಲಾಗಿ, ಅವನು ನಿನ್ನ ಮಗಳನ್ನು ಕೊಟ್ಟರೆ ಮುಸಲ್ಮಾನನಾಗುತ್ತೇನೆಂದು ಉದ್ಧಟತನದ ಉತ್ತರ ಕೊಟ್ಟದರಿಂದ ಔರಂಗಜೇಬನು ಅವನ ಮೈದೊಗಲು ಸುಲಿಸಿ ಕೊಲ್ಲಿಸಿದನು, ೧೬೮೯. ಬಳಿಕ ಔರಂಗಜೇಬನು ಸಂಭಾಜಿಯ ಹೆಂಡತಿಯನ್ನೂ ಶಿವಾಜಿಯೆಂಬ ಮಗನನ್ನೂ ದಿಲ್ಲಿಗೆ ತಕ್ಕೊಂಡು ಹೋದನು. ಆ ಹುಡುಗನಿಗೆ ಬಾದಶಹನು ಪ್ರೀತಿಯಿಂದ ಶಾಹೂ (ಸಂಭಾವಿತ) ಯೆಂಬ ಹೆಸರಿಟ್ಟು ದೊಡ್ಡವನಾಗುವ ವರೆಗೆ ಅವನನ್ನು ತನ್ನ ಬಳಿಯಲ್ಲಿಟ್ಟುಕೊಂಡು ಅವನ ತಾಯಿಯನ್ನು ಮಗಳಂತೆ ಸಂರಕ್ಷಿಸಿದನು.

ಸಂಭಾಜಿಯ ತರುವಾಯ ಅವನ ತಮ್ಮ ರಾಜಾರಾಮನು ಪಟ್ಟವೇರಿ, ಬುದ್ಧಿವಂತರಾದ ಮಂತ್ರಿಗಳ ಸಹಾಯದಿಂದ ಸಂಭಾಜಿಯ ಅವ್ಯವಸ್ಥೆಗಳನ್ನು ಮುರಿದು ರಾಜ್ಯವನ್ನು ಮತ್ತೆ ರೂಪಕ್ಕೆ ತಂದನು. ಧನಾಜೀ ಜಾಧವ, ಸಂತಾಜೀ ಘೋರಪಡೆ, ಯೆಂಬ ಸರದಾ

ರರು ವಿಜಾಪುರದ ಶೀಮೆಗಳನ್ನೆಲ್ಲ ಆಕ್ರಮಿಸಿ ಮೊಗಲರ ರಾಜ್ಯದಲ್ಲಿ ದಾಳಿಯನ್ನೆಬ್ಬಿಸಿದರು. ರಾಜಾರಾಮನು ಸನ್ ೧೭೦೦ರಲ್ಲಿ ಮರಣ ಹೊಂದಲಾಗಿ ಅವನ ಮಗ ೨ನೇ ಶಿವಾಜಿಯು ಪಟ್ಟವೇರಿದನು. ಆದರೆ ಮುಂದೆ ಔರಂಗಜೇಬನು ಸನ್ ೧೭೦೭ರಲ್ಲಿ ಮರಣ ಹೊಂದಿದ ಬಳಿಕ ಶಾಹೂ ರಾಜನು ಸ್ವದೇಶಕ್ಕೆ ಮರಳಿ ಬಂದು ಸಾತಾರೆಯಲ್ಲಿ ರಾಜ್ಯಾಭಿಷೇಕ ಮಾಡಿಸಿ ಕೊಂಡನು. ಅವನಿಗೂ ೨ನೇ ಶಿವಾಜಿಗೂ ಕೆಲವು ದಿವಸ ಕಲಹ ನಡಿದ ಬಳಿಕ ಶಿವಾಜಿಯ ತಾಯಿ ತಾರಾ ಬಾಯಿಯು ತನ್ನ ಮಗನಾದ ೨ನೇ ಶಿವಾಜಿಗೆ ಕೊಲ್ಲಾಪುರದಲ್ಲಿ ಹೊಸ ಸಿಂಹಾಸನವನ್ನು ಸ್ಥಾಪಿಸಿ ಕೊಟ್ಟಳು, ೧೭೧೦. ಈ ಪ್ರಕಾರ ಸಾತಾರೆಯಲ್ಲಿಯೂ ಕೊಲ್ಲಾಪುರದಲ್ಲಿಯೂ ಶಿವಾಜೀ ಮಹಾರಾಜನ ವಂಶದವರ ಗಾದಿಗಳು ನೆಲೆಗೊಂಡವು.

## ಹೈದರಾಬಾದಿನ ನಿಜಾಮನು.

ಔರಂಗಜೇಬನು ವಿಜಾಪುರ ಗೋವಳಕೊಂಡಗಳನ್ನು ಮುರಿದ ಬಳಿಕ ದಕ್ಷಿಣದಲ್ಲಿ ಹೈದರಾಬಾದು, ಬೇದರ, ವಿಜಾಪುರ, ಯೆಂಬ ಮೂರು ಸುಭೆಗಳನ್ನು ಮಾಡಿದನು. ಔರಂಗಜೇಬನ ಮರಣದ ನಂತರ ದಿಲ್ಲಿಯ ದರ್ಬಾರಿನಲ್ಲಿ ಬಹಳ ಅವ್ಯವಸ್ಥೆಯಾಗಿ, ಸಿಂದೆ ಮುಂತಾದ ಮಹಾರಾಷ್ಟ್ರ ಸರದಾರರು ಪ್ರಬಲರಾಗುತ್ತ ನಡಿದರು. ಈ ಸಂಧಿಯಲ್ಲಿ ಚಿನಕಿಲಿಚ ಖಾನನೆಂಬ ಸರದಾರನು ಹೈದರಾಬಾದಿನ ಸುಭೇದಾರನಾಗಿ ಬಂದು ಬೇದರವನ್ನು ಸಹ ಆಕ್ರಮಿಸಿ, ನಿಜಾಮ ಉಲ್ಮುಲ್ಕನೆಂಬ ಬಿರುದಿನಿಂದ ಸ್ವತಂತ್ರನಾಗಿ ಆಳ ಹತ್ತಿದನು, ೧೭೨೪. ಇವನೇ ಈಗಿನ ನಿಜಾಮನ ಮೂಲ ಪುರುಷನು. ನಿಜಾಮ ಉಲ್ಮುಲ್ಕನು ತನ್ನ ಕೈಕೆಳಗೆ ಅರ್ಕಾಟ ಪ್ರಾಂತದ ಸುಭೆಯನ್ನು ವೊಬ್ಬ ನಬಾಬನಿಗೆ ಕೊಟ್ಟಿದ್ದನು. ನಿಜಾಮನು ಸನ್ ೧೭೪೮ರಲ್ಲಿ ಮರಣ ಹೊಂದಿದ ಬಳಿಕ ಅವನ ಮಗ ನಾಸಿರ್ಜಂಗನು, ನಿಜಾಮನ ಮಗಳ ಮಗನಾದ ಮುಜಫರ್ಜಂಗನು, ನಿಜಾಮನ ಮೂರನೇ ಮಗನಾದ ಸಲಾಬತಜಂಗನು, ಈ ಪ್ರಕಾರ ಮೂವರು ಸನ್ ೧೭೬೧ರ ವರೆಗೆ ಹೈದರಾಬಾದಿನಲ್ಲಿ ಆಳಿದರು. ಆ ವರ್ಷ ಸಲಾಬತಜಂಗನನ್ನು ಅವನ ತಮ್ಮ ನಿಜಾಮ ಅಲ್ಲಿಯು ಕೊಲ್ಲಿಸಿ ಪಟ್ಟವೇರಿದನು. ಅರ್ಕಾಟದ ನಬಾಬನು ನಿಜಾಮ ಉಲ್ಮುಲ್ಕನ ತರುವಾಯ ಸ್ವತಂತ್ರನಾಗಿ ಆಳ ಹತ್ತಿದ್ದನು. ಹೈದರಾಬಾದು, ಅರ್ಕಾಟ, ಈ ಯೆರಡು ಸಂಸ್ಥಾನಗಳ ಸಂಬಂಧವಾಗಿ ಫ್ರೆಂಚರಿಗೂ ಇಂಗ್ಲಿಷರಿಗೂ ಬಹಳ ಕದನಗಳಾದವು.

## ಪುಣೆಯ ಪೇಶವಗಳು.

ಶಾಹೂ ರಾಜನು ಸಾತಾರೆಯಲ್ಲಿ ಸಿಂಹಾಸನಾರೂಢನಾದ ಬಳಿಕ ಬಾಳಾಜೀ ವಿಶ್ವನಾಥ ಪೇಶ್ವೇ ಯೆಂಬ ಮುಖ್ಯ ಮಂತ್ರಿಯ ಕೈಯಲ್ಲಿ ರಾಜ್ಯ ಕಾರಭಾರ ಕೊಟ್ಟು, ತಾನು [illegible]ಗಿ ವಿಷಯಭೋಗಗಳಲ್ಲಿ ಕಾಲಕ್ಷೇಪ ಮಾಡಿದನು, ೧೭೧೪. ಬಾಳಾಜಿಯು ಕೊಂಕಣದಲ್ಲಿ ಶ್ರೀವರ್ಧನವೆಂಬ ಹಳ್ಳಿಯ ಶಾನಭೋಗನು. ಇವನು

ಮೇಲಾದ ಕಲಿಯೂ ಉದ್ಯೋಗಿಯೂ ಇದ್ದನು. ಬಾಳಾಜಿಯು ತೀರಿದ ಬಳಿಕ ಅವನ ಮಗ ಹಿರೇ ಬಾಜಿರಾಯನು ಹೆಸರಿಗೆ ಮಾತ್ರ ಶಾಹೂ ರಾಜನ ಮಂತ್ರಿ ಯೆನಿಸಿಕೊಂಡು, ಪುಣೆಯಲ್ಲಿ ನಿಂತು ಸ್ವತಂತ್ರದಿಂದ ಕಾರಭಾರ ಮಾಡ ಹತ್ತಿದನು, ೧೭೨೦. ಬಾಜೀರಾಯನು ಬಹು ಪರಾಕ್ರಮಿಯು. ಅವನು ನಿಜಾಮ ಉಲ್ಮುಲ್ಕ, ಮೈಸೂರಿನ ಹೈದರ ಅಲ್ಲೀ, ಇವರಿಬ್ಬರನ್ನೂ ವೊಳಿತಾಗಿ ಜೇರಿಗೆ ತಂದಿದ್ದನು; ಸವಣೂರಿನ ನಬಾಬನ ಬೆಳುವಣಿಗೆ ಮುರಿದು ದಕ್ಷಿಣ ಮಹಾರಾಷ್ಟ್ರವನ್ನು ಪೂರ್ಣವಾಗಿ ಆಕ್ರಮಿಸಿದನು. ಬಾಜೀರಾಯನ ತರುವಾಯ ಅವನ ಹಿರಿ ಮಗ ನಾನಾ ಸಾಹೇಬನು (ಬಾಳಾಜೀ ಬಾಜೀರಾವ) ಪೇಶವನಾದನು, ೧೭೪೦. ಮುಂದೆ ಸನ್ ೧೭೪೯ರಲ್ಲಿ ಶಾಹೂ ರಾಜನು ಸಂತತಿ ಇಲ್ಲದೆ, ನಾನಾ ಸಾಹೇಬನಿಗೆ ತನ್ನ ರಾಜ್ಯದ ಪೂರ್ಣ ಅಧಿಕಾರ ಕೊಟ್ಟು ಮರಣ ಹೊಂದಲಾಗಿ, ಅವನು ಕೊಲ್ಲಾಪುರದ ತಾರಾ ಬಾಯಿಯ ಸವತಿಯ ಮಗನಾದ ರಾಮರಾಜನನ್ನು ತಂದು ಸಾತಾರೆಯಲ್ಲಿ ಹೆಸರಿಗೆ ಮಾತ್ರ ಪಟ್ಟಕ್ಕೆ ಕೂಡ್ರಿಸಿ ತಾನೇ, ಸಾಮ್ರಾಜ್ಯಾಧಿಕಾರವನ್ನು ಸ್ವತಂತ್ರದಿಂದ ನಡಿಸ ಹತ್ತಿದನು. ಮುಂದೆ ಹಿರೇ ಮಾಧವರಾಯ (೧೭೬೧), ನಾರಾಯಣರಾಯ (೧೭೭೩), ಸವಾಯಿ ಮಾಧವರಾಯ (೧೭೭೩), ೨ನೇ ಬಾಜೀರಾಯ (೧೭೯೫), ಹೀಗೆ ನಾಲ್ವರು ಪುಣೆಯಲ್ಲಿ ಆಳಿದರು. ಬಾಜೀರಾಯನ ರಾಜ್ಯವನ್ನು ಇಂಗ್ಲಿಷರು ಸನ್ ೧೮೧೮ರಲ್ಲಿ ಕಸುಕೊಂಡರು.

## ಹೈದರ ಅಲ್ಲೀ.

ಮೈಸೂರಲ್ಲಿ ಚಾಮರಾಜನೆಂಬ ಹುಡುಗನ ಹೆಸರಿನಿಂದ ನಂದಿರಾಜನೆಂಬ ಮಂತ್ರಿಯು ಸ್ವತಂತ್ರದಿಂದ ಕಾರಭಾರ ಮಾಡುತ್ತಿರುವಾಗ ಆ ಸಂಸ್ಥಾನದಲ್ಲಿ ಕೀಳು ಕುಲದಲ್ಲಿ ಹುಟ್ಟಿದವನೊಬ್ಬ ಹೈದರನೆಂಬ ಮುಸಲ್ಮಾನನು ಪ್ರಬಲನಾದನು. ಇವನು ದೇವನಹಳ್ಳಿಯಲ್ಲಿ ಇರುವ ಫತ್ತೇಖಾನನೆಂಬವನೊಬ್ಬ ಬಡ ಮುಸಲ್ಮಾನನ ಮಗನು, ಸನ್ ೧೭೨೦ರಲ್ಲಿ ಹುಟ್ಟಿದನು. ಇವನು ನಂದಿರಾಜನ ದಂಡಿನಲ್ಲಿ ಚಾಕರಿಗೆ ನಿಂತು, ಧೈರ್ಯ ಶೌರ್ಯಗಳಿಂದ ವೊಡೆಯನ ಪ್ರೀತಿಯನ್ನು ಸಂಪಾದಿಸಿ, ದಿನ ದಿನಕ್ಕೆ ಹೆಚ್ಚಿನ ಅಧಿಕಾರಗಳನ್ನು ಪಡಿಯುತ್ತಾ, ಕಡೆಗೆ ದಂಡಿನಲ್ಲಿ ಫೌಜದಾರನಾದನು. ಇವನಿಗೆ ಇವನಂಥವನೇ ಚತುರನಾದ ಖಂಡೇರಾಯನೆಂಬ ಕಾರಭಾರಿ ದೊರಿದಿದ್ದನು. ಇವರಿಬ್ಬರೂ ಕೂಡಿ ಬೇಡರನ್ನೂ ಪೆಂಡಾರಿಗಳನ್ನೂ ಇಟ್ಟು ಕೊಂಡು ಕಳವಿನಿಂದ ಹಣ ಸಂಪಾದಿಸಿ, ಸ್ವಂತದ್ದೊಂದು ಸೈನ್ಯವನ್ನು ಮಾಡಿ ಕೊಂಡು ಬರ ಬರುತ್ತಾ ಅತಿ ಪ್ರಬಲರಾದ ಬಳಿಕ ಹೈದರನು ನಂದಿರಾಜನ ಕಾರಭಾರ ತೆಗಿದು ಖಂಡೇರಾಯನಿಗೆ ಕೊಟ್ಟನು. ಮುಂದೆ ಸ್ವಲ್ಪ ಕಾಲದೊಳಗೆ ಚಾಮರಾಜನು ಪ್ರೌಢನಾಗಿ ಖಂಡೇರಾಯನನ್ನು ವೊಲಿಸಿ ಕೊಂಡು ಹೈದರನನ್ನು ಓಡಿಸಲಾಗಿ, ಅವನು ನಂದಿರಾಜನ ಸಹಾಯದಿಂದ ದೊಡ್ಡ ಸೈನ್ಯ ಕೂಡಿಸಿ ಕೊಂಡು ಮೈಸೂರಿಗೆ ಹೋಗಿ ಖಂಡೇರಾಯನನ್ನು ಶೆರೆಹಿಡಿದು, ಚಾಮರಾಜನ ರಾಜ್ಯಾಧಿಕಾರ ಕಸು ಕೊಂಡು, ಅವನನ್ನು ಕೆಲವು ನೇಮಣೂಕು ಗೊತ್ತು ಮಾಡಿ ಶೆರೆಯೊಳಗಿಟ್ಟು, ತಾನು ಹೈದರ ಅಲ್ಲೀ ಯೆಂಬ ಹೆಸರಿನಿಂದ ಆಳ ಹತ್ತಿದನು, ೧೭೬೧.

## ಇಂಗ್ಲಿಷರು.

ಇವರು ಬಂಗಾಲ ದೇಶವನ್ನು ಆಕ್ರಮಿಸಿ, ಮದ್ರಾಸದ ಕೋಟೆಯನ್ನು ಕಟ್ಟಿ, ಮುಂಬಯಿ ಬಂದರವನ್ನು ಪೋರ್ತುಗೀಸರಿಂದ ಪಡೆದು, ಹಿಂದುಸ್ತಾನದ ಮೂರು ದಿಕ್ಕುಗಳಲ್ಲಿ ಬೆಳುವಣಿಗೆಯನ್ನು ಹೊಂದುತ್ತ ನಡೆದಿದ್ದರು. ನಿಜಾಮನ ದರ್ಬಾರಿನಲ್ಲಿ ಫ್ರೆಂಚರು ಶೇರಿ, ಆರ್ಕಾಟದ ನಬಾಬನ ದರ್ಬಾರಿನಲ್ಲಿ ಇಂಗ್ಲಿಷರು ಶೇರಿ, ಅವರಿಗೂ ಅವರಿಗೂ ಬಹಳ ಯುದ್ಧಗಳಾಗಿ ಕಡೆಯಲ್ಲಿ ಇಂಗ್ಲಿಷರು ಸನ್ ೧೭೫೭ರಲ್ಲಿ ಫ್ರೆಂಚರನ್ನು ಪೂರಾ ಸೋಲಿಸಿ ಅವರ ಬೆಳುವಣಿಗೆಯನ್ನು ಮುರಿದರು. ಮುಂದೆ ಸನ್ ೧೭೬೧ರಲ್ಲಿ ಆಫಗಾಣರಿಗೂ ಮಹಾರಾಷ್ಟ್ರರಿಗೂ ವೊದಗಿದ ದೊಡ್ಡ ಯುದ್ಧದಲ್ಲಿ ಮಹಾರಾಷ್ಟ್ರರು ಪೂರಾ ಸೋತದ್ದರಿಂದ ಅವರ ಬೆಳುವಣಿಗೆ ಕುಂದಿ ದೇಶದಲ್ಲಿ ಅವ್ಯವಸ್ಥೆಯುಂಟಾಗಲಿಕ್ಕೂ, ಇಂಗ್ಲಿಷರ ಅಧಿಕಾರ ಬೆಳಿಯಲಿಕ್ಕೂ ಕಾರಣವಾಯಿತು. ಇದೇ ವರ್ಷ ಹೈದರನು ಮೈಸೂರಿನ ಸಿಂಹಾಸನವನ್ನು ಆಕ್ರಮಿಸಿದನೆಂದು ಮೇಲೆ ಹೇಳಿದ್ದೇವೆ.

ಹೈದರನು ಮೈಸೂರಿನ ರಾಜ್ಯಕ್ಕೆ ವೊಡೆಯನಾದ ಬಳಿಕ ಸುತ್ತುಮುತ್ತಲಿನ ನಾಯಕರ ಮೇಲೆ ಅಮಲು ಕೂಡ್ರಿಸಿ ಪೇಶವನ ಸೀರಾ ಮುಂತಾದ ಶೀಮೆಗಳನ್ನು ತಕ್ಕೊಂಡು, ಇಕ್ಕೇರಿಯ ಅರಸರ ರಾಜಧಾನಿಯಾದ ಬೇದನೂರನ್ನು ತಕ್ಕೊಂಡು ಅಗಣಿತ ದ್ರವ್ಯವನ್ನು ಸಂಪಾದಿಸಿದನು, ೧೭೬೩. ಮುಂದಿನ ವರ್ಷ ಅವನು ಸ್ವಾದಿಯ ಸಂಸ್ಥಾನವನ್ನು ಹಾಳು ಮಾಡಿ ಅಲ್ಲಿಯೂ ಬಹಳ ದ್ರವ್ಯವನ್ನು ಗಳಿಸಿದನು. ಹೀಗೆ ತುಂಗಭದ್ರೆಯ ದಕ್ಷಿಣದ ಶೀಮೆಗಳನ್ನೂ ಹೊನ್ನಾವರದ ದಕ್ಷಿಣದ ಯಾವತ್ತು ಸಮುದ್ರತೀರವನ್ನೂ ಆಕ್ರಮಿಸಿದ ಬಳಿಕ ಹೈದರನು ಸವಣೂರ ನಬಾಬನ ರಾಜ್ಯವನ್ನು ನುಂಗಿ ಪೇಶವನ ರಾಜ್ಯದೊಳಗೆ ಧಾರವಾಡ ಮುಂತಾದ ಕೋಟೆಗಳನ್ನೂ ತಕ್ಕೊಂಡು ಮಲಾಪಹಾರಿಯ ವರೆಗೆ ಶೀಮೆಯನ್ನು ಹಾಳು ಮಾಡಿದನು. ಆದ್ದರಿಂದ ಪೇಶವೆ ಮಾಧವ ರಾಯನಿಗೂ ಹೈದರನಿಗೂ ರಟ್ಟೇ ಹಳ್ಳಿಯ ಹತ್ತರ ಯುದ್ಧವಾಗಿ ಕಡೆಯಲ್ಲಿ ಹೈದರನು ಬೇದನೂರಲ್ಲಿ ವೊಡಂಬಡಿಕೆ ಮಾಡಿ ಕೊಂಡು ಪೇಶವನ ಶೀಮೆಗಳನ್ನೂ ಸವಣೂರ ನಬಾಬ ಶೀಮೆಗಳನ್ನೂ ಹಿಂದಕ್ಕೆ ಕೊಟ್ಟು ಪೇಶವನಿಗೆ ೩೦ ಲಕ್ಷ ವರಹ ಕಪ್ಪ ಕೊಟ್ಟನು, ೧೭೬೫. ಮುಂದಿನ ವರ್ಷ ಹೈದರನು ಕಾಲಿಕತ್ತದ ಅರಸನ ರಾಜ್ಯವನ್ನು ಕಸುಕೊಂಡನು.

ಸನ್ ೧೭೬೭ರಲ್ಲಿ ಮಾಧವ ರಾಯನು ಮತ್ತೊಮ್ಮೆ ಹೈದರನ ಮೇಲೆ ಸ್ವಾರೀ ಮಾಡಿ, ಸೀರಾ ಪರಗಣೆಯನ್ನು ತಕ್ಕೊಂಡು, ೩೦ ಲಕ್ಷ ಹೊನ್ನು ಕಪ್ಪ ತಕ್ಕೊಂಡನು. ಈ ಪ್ರಕಾರ ಹೈದರನಿಗೂ ಪೇಶವನಿಗೂ ಯುದ್ಧಗಳು ಬಹು ದಿವಸ ಸಾಗಿದವು. ಹೈದರನು ಇಂಗ್ಲಿಷರಿಗೂ ಬಲಿಷ್ಠನಾದ ಹಗೆಯಾಗಿ ಅವರ ಸಂಗಡ ಬಹಳ ಯುದ್ಧಗಳನ್ನು ಮಾಡಿ, ಹೊಗಳ ತಕ್ಕಂಥ ಶೂರನೆನಿಸಿ ಕೊಂಡು ಸನ್ ೧೭೮೨ರಲ್ಲಿ ಮರಣ ಹೊಂದಿದನು.

ಹೈದರನ ತರುವಾಯ ಅವನ ಮಗ ಟೀಪೂ ಪಟ್ಟವೇರಿ, ಸುಲ್ತಾನನೆಂಬ ಬಿರುದು ಧರಿಸಿದನು. ಟೀಪೂ ಹೈದರನಷ್ಟು ಚತುರನಲ್ಲದಿದ್ದಾಗ್ಯೂ ಅವನಿಗಿಂತ ಹೆಚ್ಚು ಗಟ್ಟಿಗ

**ಟೀಪೂ.**

ನಿದ್ದನು. ಇವನು ಸ್ವಲ್ಪ ದಿವಸದೊಳಗೆ ತುಂಗಭದ್ರೆಯಿಂದ ರಾಮೇಶ್ವರ ವರೆಗೆ ಶೀಮೆಯನ್ನು ಆಕ್ರಮಿಸಿ, ಪೂರ್ವ ದಿಕ್ಕಿನಲ್ಲಿ ಇಂಗ್ಲಿಷರ ಶೀಮೆಯೊಳಗೂ ಉತ್ತರ ದಿಕ್ಕಿನಲ್ಲಿ ಪೇಶವನ ಶೀಮೆಯೊಳಗೂ ಶೇರಿ ಆಗಾಗ್ಗೆ ದಾಳಿಗಳನ್ನು ಮಾಡುವನು. ಪುಣೆಯ ದರ್ಬಾರಿನಲ್ಲಿ ಅಧಿಕಾರದ ಸಲುವಾಗಿ ವ್ಯಾಜ್ಯಗಳು ನಡಿದದ್ದರಿಂದ ಟೀಪೂನಿಗೆ ಅತ್ತಕಡೆಯ ಹೆದರಿಕೆಯು ಬಹು ಕಡಿಮೆ ಇತ್ತು. ಆರಂಭದಲ್ಲಿ ಇಂಗ್ಲಿಷರ ಕೂಡ ಅವನು ಯೆರಡು ವರ್ಷ ಕಾದಾಡಿದ ಬಳಿಕ ಮಂಗಳೂರಿನಲ್ಲಿ ಸ್ನೇಹದ ವೊಡಂಬಡಿಕೆಯಾಯಿತು, ೧೭೮೪. ಪೇಶವನ ದಂಡಿನವರೂ ನಿಜಾಮನೂ ಕೂಡಿ ಟೀಪೂನನ್ನು ಸೋಲಿಸಿದ್ದರಿಂದ, ಅವನು ತುಂಗಭದ್ರೆಯೇ ತನ್ನ ರಾಜ್ಯದ ಉತ್ತರ ಮೇರೆ ಯೆಂದು ವೊಡಂಬಟ್ಟು ೪೫ ಲಕ್ಷ ರೂಪಾಯಿ ಕಪ್ಪ ಕೊಟ್ಟನು, ೧೭೮೭. ಮುಂದೆ ಅವನು ತ್ರಾವಣಕೋರದ ಅರಸನನ್ನು ಕೆಣಕಿ ಸೋತು ವೊಬ್ಬನೇ ಓಡಿ ಬಂದನು. ಆ ಅರಸು ಇಂಗ್ಲಿಷರ ಸ್ನೇಹಿತನಾದ್ದರಿಂದ ಇಂಗ್ಲಿಷರಿಗೂ ಟೀಪೂನಿಗೂ ಮತ್ತೆ ಜಗಳ ಹುಟ್ಟಿತು. ಆದ್ದರಿಂದ ಇಂಗ್ಲಿಷರು, ಪೇಶವ, ನಿಜಾಮು, ಈ ಮೂವರೂ ಕೂಡಿ ವೊಪ್ಪಂದ ಮಾಡಿ ಕೊಂಡು ದೊಡ್ಡ ದಂಡಿನೊಡನೆ ಹೋಗಿ ಶ್ರೀರಂಗ ಪಟ್ಟಣವನ್ನು ಮುತ್ತಲಾಗಿ, ಟೀಪೂನು ಹಗೆಗಳಿಗೆ ತನ್ನ ಅರ್ಧ ರಾಜ್ಯವನ್ನೂ ೩ ಕೋಟಿ ರೂಪಾಯಿಗಳನ್ನೂ ಕೊಟ್ಟನು, ೧೭೯೨. ಈ ಅರ್ಧ ರಾಜ್ಯದಲ್ಲಿ ವರದಾ ನದಿಯ ಉತ್ತರ ಶೀಮೆ ಪೇಶವನ ಪಾಲಿಗೆ ಬಂತು; ಕೊಡಗು, ಮಲಿಯಾಳ, ಮುಂತಾದ ಶೀಮೆಗಳು ಇಂಗ್ಲಿಷರ ಪಾಲಿಗೆ ಬಂದವು. ಇಂಗ್ಲಿಷರು ಕೊಡಗದ ಅರಸನಿಗೆ ಅವನ ರಾಜ್ಯವನ್ನು ಕೊಟ್ಟರು. ಮುಂದೆ ಟೀಪೂನು ಇಂಗ್ಲಿಷರನ್ನು ಮುರಿಯುವ ಹವ್ಯಾಸಕ್ಕೆ ಬಿದ್ದು, ನೇಪೋಲಿಯನ್ ಬೊನಾಪಾರ್ಟನ ಸ್ನೇಹ ಮಾಡಿ ಫ್ರೆಂಚ ಸರದಾರರನ್ನು ತರಿಸಿ ಕೊಂಡು ಕವಾಯಿತು ಕಲಿತಂಥ ದೊಡ್ಡ ಸೈನ್ಯವನ್ನು ಸಿದ್ಧ ಮಾಡಿದನು. ಕಡೆಯಲ್ಲಿ ಅವನು ಇಂಗ್ಲಿಷರ ವಕೀಲರಿಗೆ ಅಪಮಾನ ಮಾಡಿದ್ದರಿಂದ, ಇಂಗ್ಲಿಷರು ನಿಜಾಮನನ್ನು ಕರೆಕೊಂಡು ೫೦೦೦೦ ದಂಡಿನೊಡನೆ ಹೋಗಿ ಶ್ರೀರಂಗ ಪಟ್ಟಣವನ್ನು ಮುತ್ತಿದರು. ೧೯ ದಿವಸ ಏಕಪ್ರಕಾರ ಯುದ್ಧವಾದ ಬಳಿಕ ಟೀಪೂನು ಯುದ್ಧದಲ್ಲಿ ಬಿದ್ದು ಮಡಿದನು, ೧೭೯೯. ಇಂಗ್ಲಿಷರು ಅವನ ಮನೆಯವರನ್ನು ವೆಲ್ಲೂರಿಗೆ ಕಳಿಸಿ, ಹಿಂದಿನ ಅರಸನ ಮಗನಾದ ಕೃಷ್ಣರಾಯನೆಂಬ ೫ ವರ್ಷದ ಹುಡುಗನನ್ನು ಪಟ್ಟಕ್ಕೆ ಕುಳ್ಳಿರಿಸಿ, ಪೂರ್ಣಯ್ಯನಿಗೆ ಕಾರಭಾರ ಹೇಳಿದರು. ಈ ಯುದ್ಧದ ಕಡೆಯಲ್ಲಿ ಇಂಗ್ಲಿಷರು ತೆಲಗು ದೇಶದ ಪ್ರದೇಶಗಳನ್ನು ನಿಜಾಮನಿಗೆ ಕೊಟ್ಟು, ಕಾನಡಾ, ಕೊಯಿಂಮ್ಮುತ್ತೂರು, ವಾಯನಾಡು, ಇಷ್ಟು ಶೀಮೆಗಳನ್ನು ತಾವು ಇಟ್ಟು ಕೊಂಡು ಉಳಿದ ರಾಜ್ಯವನ್ನು ಕೃಷ್ಣರಾಯನಿಗೆ ಕೊಟ್ಟರು.

ಹೈದರನನ್ನೂ ಟಪೂನನ್ನೂ ಮುರಿಯುವದಕ್ಕೋಸ್ಕರವಾಗಿ ಪೇಶವನೂ ಇಂಗ್ಲಿಷರೂ ಆಗಾಗ್ಗೆ ವೊಕ್ಕಟ್ಟಾಗುತ್ತಿದ್ದಾಗ್ಯೂ ಅವರವರೊಳಗೆ ಜಗಳಗಳು ನಡಿಯುತ್ತಿದ್ದವು. ಪೇಶವಗಳಲ್ಲಿ ಹಿರೇ ಬಾಜಿರಾಯ, ನಾನಾ ಸಾಹೇಬರಂತೆ ಹಿರೇ ಮಾಧವರಾಯನಾದರೂ ಹೆಸರಾದ ಶೂರನೂ ಮುತ್ಸದ್ದಿಯೂ ಇದ್ದನು. ಇವನು ೧೭ ವರ್ಷದ ವಯಸ್ಸಿನಲ್ಲಿಯೇ

ಪಟ್ಟವೇರಿ ಸ್ವಲ್ಪ ದಿವಸ ಮಾತ್ರ ಆಳಿದಾಗ್ಯೂ ಶೌರ್ಯದ ಕೃತ್ಯಗಳನ್ನು ಮಾಡಿ ಬಹು ಬೇಗ ಹೆಸರಿಗೆ ಬಂದನು. ಇವನು ಹೈದರನನ್ನು ಸೋಲಿಸಿದ ವೃತ್ತಾಂತಗಳನ್ನು ಹಿಂದೆ ಹೇಳಿದ್ದೇವೆ. ಇವನ ಆಳಿಕೆಯಲ್ಲಿ ಗೋಪಾಳರಾವ ಪಟವರ್ಧನನೆಂಬ ಸರದಾರನು ಪ್ರಖ್ಯಾತನಾಗಿ ದಕ್ಷಿಣ ಮಹಾರಾಷ್ಟ್ರದಲ್ಲಿ ೬೫ ಲಕ್ಷದ ಜಾಹಾಗೀರು ಪಡಿದನು, ೧೭೬೪. ಗೋಪಾಳರಾಯನು ಮಿರ್ಜಿಯಲ್ಲಿ ಇರುತ್ತಿದ್ದನು; ಅವನ ಅಣ್ಣನ ಮಗನಾದ ಪರಶು ರಾಮ ಭಾವೂ ಯೆಂಬ ಹೆಸರಾದ ಕಲಿಯು ತಾಸಗಾವಿಯಲ್ಲಿ ಇರುತ್ತಿದ್ದನು. ಈಗಿನ ಸಾಂಗಲಿ, ಮಿರ್ಜಿ, ಜಮಖುಂಡಿ, ಕುರುಂದವಾಡ, ಈ ನಾಲ್ಕು ಸಂಸ್ಥಾನಗಳ ವೊಡಿಯರು ಈ ಪಟವರ್ಧನರ ವಂಶದವರೇ. ಮಾಧವರಾಯನ ಮಂತ್ರಿಯು ನಾನಾಫಡಣೀಸನಿದ್ದನು. ಮಾಧವರಾಯನು ಹೈದರನ ಕೂಡ ಜಗಳ ನಡಿಸಿದಂತೆ ನಿಜಾಮನ ಸಂಗಡಲೂ ಜಗಳ ನಡಿಸಿದ್ದನು. ಸನ್ ೧೭೬೩ರಲ್ಲಿ ನಿಜಾಮನಿಗೂ ಮಾಧವರಾಯನಿಗೂ ಯುದ್ಧವಾಗಿ ಅದರಲ್ಲಿ ಮಾಧವರಾಯನು ಜಯ ಪಡಿದನು. ಈ ಪ್ರಕಾರ ಮಾಧವ ರಾಯನು ೧೩ ವರ್ಷ ಆಳಿ ಮರಣ ಹೊಂದಿದ ಬಳಿಕ ಅವನ ತಮ್ಮ ನಾರಾಯಣ ರಾಯನು ಪಟ್ಟವೇರಲಾಗಿ, ಅವನ ಕಕ್ಕನಾದ ರಘುನಾಥರಾಯನೂ ಅವನ ಹೆಂಡತಿ ಆನಂದೀ ಬಾಯಿಯೂ ಕೂಡಿ ತಮ್ಮ ಮಗನಿಗೆ ಪಟ್ಟವಾಗ ಬೇಕೆಂದು ನಾರಾಯಣರಾಯನನ್ನು ಕೊಲ್ಲಿಸಿದರು, ೧೭೭೩. ಆದರೂ ರಘುನಾಥ ರಾಯನ ಇಚ್ಛೆಯು ನೆರವೇರಲಿಲ್ಲ. ನಾನಾ ಫಡಣೀಸನು ನಾರಾಯಣರಾಯನ ಹೆಂಡತಿಯು ಗರ್ಭಿಣಿ ಇರುತ್ತಾಳೆಂತಲೂ, ಆಕೆ ಗಂಡು ಮಗನನ್ನೇ ನಿಶ್ಚಯವಾಗಿ ಹಡಿಯುವಳೆಂತಲೂ ಭವಿಷ್ಯ ಕಟ್ಟಿದನು. ಅದರಂತೆ ಆ ಮಗ ಹುಟ್ಟಿದ ಬಳಿಕ ಅವನಿಗೆ "ಸವಾಯಿ ಮಾಧವರಾಯ"ನೆಂದು ಹೆಸರಿಟ್ಟು, ಅವನ ಹೆಸರಿನಿಂದ ಕಾರಭಾರ ನಡಿಸಿದನು. ಸವಾಯಿ ಮಾಧವರಾಯನು ಪ್ರೌಢನಾಗುವ ವರೆಗೆ ನಾನಾಫಡಣೀಸನೇ ಪೇಶವನಾಗಿದ್ದನೆಂದು ಹೇಳ ಬಹುದು. ಇವನು ಚತುರನಾದಾಗ್ಯೂ ಕಪಟಿಯೂ ಸ್ವಾರ್ಥ ಬುದ್ಧಿಯವನೂ. ಇವನಿಗೂ ರಘುನಾಥರಾಯನಿಗೂ ಬಹಳ ಜಗಳಗಳು ನಡಿದದ್ದರಿಂದ ಮಹಾರಾಷ್ಟ್ರ ಸರದಾರರ ವೊಕ್ಕಟ್ಟು ಶಿಥಿಲವಾಯಿತು, ಇಂಗ್ಲಿಷರು ರಘುನಾಥರಾಯನ ಪಕ್ಷವನ್ನು ಸ್ವೀಕರಿಸಿದರು. ಸವಾಯಿ ಮಾಧವ ರಾಯನು ಪ್ರೌಢನಾದ ಬಳಿಕ ಸ್ವಲ್ಪ ದಿವಸ ಹೆಸರಿಗೆ ಮಾತ್ರ ಧಣಿಯಾಗಿ ಆಳಿ ಮಾಳಿಗೆಯ ಮೇಲಿಂದ ಹಾರಿ ಕೊಂಡು ಮರಣ ಹೊಂದಿದನು, ೧೭೯೫. ತರುವಾಯ ರಘುನಾಥರಾಯನ ಮಗ ಬಾಜೀ ರಾಯನು ಪೇಶವನಾದನು.

ಬಾಜೀ ರಾಯನು ಬಹಳ ಅಂಜುಬುರಕ, ತಿಳಿಗೇಡಿ, ಚಂಚಲ ಮನಸಿನವ, ದುರ್ವ್ಯಸನಿ, ಇದ್ದನು. ಇವನು ಮೊದಲು ನಾನಾಫಡಣೀಸನನ್ನು ಶರೆ ಹಾಕಿ, ಮಹಾರಾಷ್ಟ್ರ ಸರದಾರರೊಳಗೆ ವೈಮನಸ್ಯ ಹುಟ್ಟಿಸಿ, ಕೀಳು ಜನರಿಗೆ ಆಶ್ರಯ ಕೊಟ್ಟನು. ನಾನಾ ಫಡಣೀಸನು ಸನ್ ೧೮೦೦ರಲ್ಲಿ ಮರಣ ಹೊಂದಿದ ಬಳಿಕ ಕೊಲ್ಲಾಪುರ ಸಾತಾರೆಗಳ ಅರಸರು ಬಾಜೀ ರಾಯನ ರಾಜ್ಯದಲ್ಲಿ ಕೊಳೆ ಸುಲಿಗೆ ನಡಿಸಲಾಗಿ, ಅವನು ಪರಶುರಾಮ ಬಾಪೂನನ್ನು ದಕ್ಷಿಣ ಮಹಾರಾಷ್ಟ್ರಕ್ಕೆ ಕಳಿಸಿದನು. ಆದರೆ ಪರಶುರಾಮ ಪಂತನು

ಕೊಲ್ಹಾಪುರದವರ ಕೈಯಲ್ಲಿ ಶಿಕ್ಕು ಕ್ರೂರತನದಿಂದ ಕೊಲ್ಲಲ್ಪಟ್ಟನು, ೧೮೦೧. ಇಷ್ಟರಲ್ಲಿ ಧೊಂಡಜೀ ವಾಘನೆಂಬ ಪುಂಡನು ದಕ್ಷಿಣ ಮಹಾರಾಷ್ಟ್ರ, ಬಳ್ಳಾರಿಯ ಶೀಮೆಗಳಲ್ಲಿ ದಾಳಿಯನ್ನೆಬ್ಬಿಸಲಾಗಿ, ನಿಪಾಣಿಯ ದೇಸಾಯಿಯೂ ಇಂಗ್ಲಿಷರೂ ಕೂಡಿ ಅವನನ್ನು ಹಿಡಿದು ಕೊಂದರು. ಆದ್ದರಿಂದ ಬಾಜೀ ರಾಯನು ನಿಪಾಣಕರನಿಗೆ ಹುಕ್ಕೇರಿ, ಮುನ್ನೊಳ್ಳಿ, ಮುಂತಾದ ೭ ಲಕ್ಷದ ಶೀಮೆಯನ್ನು ಕೊಟ್ಟನು. ಕೊಲ್ಹಾಪುರ, ಸಾತಾರೆಗಳ ದಂಡಿನವರ ಕೊಳೆ ಸುಲಿಗೆಗಳು ನಡಿದೇ ಇದ್ದವು. ಪುಣೆಯಲ್ಲಿ ಬಾಜೀ ರಾಯನು ಯಶವಂತರಾವ ಹೋಳಕರನೆಂಬ ದೊಡ್ಡ ಸರದಾರನ ತಮ್ಮನನ್ನು ನಿಷ್ಕಾರಣವಾಗಿ ಆನೆಯ ಕಾಲಿಗೆ ಕಟ್ಟಿ ಯೆಳಿಸಿ ಕೊಂದದ್ದರಿಂದ ಯಶವಂತರಾಯನು ಬಂದು ಬಾಜೀ ರಾಯನನ್ನು ಪುಣೆಯಿಂದ ಓಡಿಸಿದನು. ಆದ್ದರಿಂದ ಬಾಜೀ ರಾಯನು ಇಂಗ್ಲಿಷರ ಕೂಡ ಸ್ನೇಹದ ವೊಡಂಬಡಿಕೆ ಮಾಡಿ ಕೊಂಡು, ಅವರ ಸೈನ್ಯವನ್ನು ಚಾಕರಿಗೆ ಇಟ್ಟು ಕೊಂಡು ಧಾರವಾಡದ ಶೀಮೆಯನ್ನು ಇಂಗ್ಲಿಷರಿಗೆ ಕೊಟ್ಟನು. ಕೂಡಲೇ ಇಂಗ್ಲಿಷರು ಬಾಜೀ ರಾಯನನ್ನು ತಂದು ಪುಣೆಯಲ್ಲಿ ಮತ್ತೆ ಸ್ಥಾಪಿಸಿದರು, ೧೮೦೩. ಈ ಕಾಲದಿಂದ ಮುಂದೆ ಬಾಜೀ ರಾಯನು ಇಂಗ್ಲಿಷರ ಹಸ್ತಕನಾದನು. ಆದರೆ ಅವನು ಇಂಗ್ಲಿಷರ ಕೂಡ ವಿಶ್ವಾಸದಿಂದ ನಡಿಯಲಿಲ್ಲ; ನೀಚ ಜನರ ಮಾತು ಕೇಳಿ ಇಂಗ್ಲಿಷರನ್ನು ತನ್ನ ರಾಜ್ಯದಿಂದ ಹೊರಗೆ ಹಾಕುವ ವೊಳಸಂಚುಗಳನ್ನು ಮಾಡ ಹತ್ತಿದನು; ಇಂಗ್ಲಿಷರು ಬಹಳ ಸಾರಿ ಬುದ್ಧಿಯ ಹೇಳಿದರೂ ಕೇಳಲಿಲ್ಲ. ಕಡೆಯಲ್ಲಿ ಬಾಜೀ ರಾಯನು ಇಂಗ್ಲಿಷರನ್ನು ವಿರೋಧಿಸಿ ಪುಣೆಯಲ್ಲಿ ದಂಡು ಕೂಡಿಸಲಾಗಿ, ಖಡಕಿಯ ಹತ್ತರ ಇಂಗ್ಲಿಷರಿಗೂ ಅವನಿಗೂ ಯುದ್ಧವಾಗಿ, ಅದರಲ್ಲಿ ಸೋತು ಬಾಜೀ ರಾಯನು ಓಡಿ ಹೋದನು, ೧೮೧೭. ಮುಂದೆ ಯೆರಡು ಯುದ್ಧಗಳಲ್ಲಿ ಬಾಜೀ ರಾಯನು ಸೋತ ಬಳಿಕ ಅವನು ತಾನಾಗಿ ಇಂಗ್ಲಿಷರ ಕೈಶೇರಿದನು. ಅವರು ಅವನಿಗೆ ವರ್ಷಕ್ಕೆ ೮ ಲಕ್ಷ ರೂಪಾಯಿ ನೇಮಣೂಕು ಮಾಡಿ ಕೊಟ್ಟು ಅವನನ್ನು ಬ್ರಹ್ಮಾವರ್ತದಲ್ಲಿ ವೊಯಿದು ಇಟ್ಟರು. ಈ ಪ್ರಕಾರ ಪೇಶವಾಯಿಯ ದೊಡ್ಡ ರಾಜ್ಯವು ಇಂಗ್ಲಿಷರ ಕೈಶೇರಿತು.

ಇಂಗ್ಲಿಷ ಸರಕಾರದ ಅಮಲಿನಲ್ಲಿ ಆದ ಹೆಚ್ಚು ಕಡಿಮೆಗಳು.—ಮೈಸೂರಲ್ಲಿ ಪೂರ್ಣಯ್ಯನ ತರುವಾಯ ಕೃಷ್ಣರಾಯನ ಕೈಯಿಂದ ಕಾರಭಾರವು ವೊಳಿತಾಗಿ ಸಾಗುವದಿಲ್ಲೆಂದು ನೋಡಿ ಸರಕಾರದವರು ವೊಬ್ಬ ಕಮ್ಮಿಶನರನನ್ನು ನೇಮಿಸಿ ೮೮ ವರ್ಷ ಕಾರಭಾರ ನಡಿಸಿದರು. ಕೃಷ್ಣರಾಯನ ದತ್ತ ಪುತ್ರನಾದ ಚಾಮರಾಜನಿಗೆ ಸರಕಾರದವರು ವೊಳಿತಾಗಿ ವಿದ್ಯಾಭ್ಯಾಸ ಮಾಡಿಸಿ ಅವನು ಪ್ರೌಢನಾದ ಬಳಿಕ ಕಾರಭಾರವನ್ನು ಅವನ ಕೈಯಲ್ಲಿ ಕೊಟ್ಟರು, ೧೮೮೧.

ಕೊಡಗದ ಅರಸು ವೀರರಾಜೇಂದ್ರನು ಸನ್ನಿಯಾಗಿ ಕ್ರೂರತನದಿಂದ ಬಹು ಜನರನ್ನು ಕೊಲ್ಲಿಸಿ ಇಂಗ್ಲಿಷರ ಮೇಲೆ ತಿರಿಗಿ ಬಿದ್ದದರಿಂದ ಸರಕಾರದವರು ಅವನನ್ನು ಶರೆ ಹಾಕಿ, ಅವನ ರಾಜ್ಯವನ್ನು ಮೈಸೂರಿನ ಕಮಿಶನರನ ಕೈಯಲ್ಲಿ ಕೊಟ್ಟರು, ೧೮೩೪.

ಕಿತ್ತೂರ ದೇಸಾಯಿ ಶಿವಲಿಂಗ ರುದ್ರಪ್ಪನೆಂಬವನು ಸನ್ ೧೮೨೪ರಲ್ಲಿ ತೀರಲಾಗಿ, ಥ್ಯಾಕರೆ ಯೆಂಬ ಇಂಗ್ಲಿಷ ಅಧಿಕಾರಿಯು ಬಂದೋಬಸ್ತಿಗಾಗಿ ಕಿತ್ತೂರಿಗೆ ಹೋದನು. ಆದರೆ ದೇಸಾಯಿಯ ಹೆಂಡತಿ ಚನ್ನವ್ವನು ಅಗಸೇಯೆನ್ನಿಕ್ಕಿಸಿ, ದಂಡು ಕೂಡಿಸಿ, ಅಕಸ್ಮಾತ್ತಾಗಿ ಆ ಸಣ್ಣ ದಂಡನ್ನು ಊರ ಹೊರಗೆ ಕಳಿಸಿ, ಥ್ಯಾಕರೆ ಮುಂತಾದ ಕೆಲ ಜನ ಸಾಹೇಬರನ್ನು ಕೊಲ್ಲಿಸಿದಳು. ಆದ್ದರಿಂದ ಸರಕಾರದವರು ಬೇರೆ ದಂಡು ಕಳಿಸಿ, ಕಿತ್ತೂರಿನ ಸಂಸ್ಥಾನವನ್ನು ನಿರ್ಮೂಲ ಮಾಡಿದರು, ೧೮೨೪.

ಕಿತ್ತೂರ ಸಂಸ್ಥಾನದ ಆಶ್ರಿತನಾದ ಸಂಗೊಳ್ಳಿಯ ರಾಯ ನಾಯಕನೆಂಬವನು ಬಂಡಾಯ ಮಾಡಲಾಗಿ, ಸಂಪಗಾವಿಯ ಮಾಮಲೇದಾರನ ಕೈಯಿಂದ ಸರಕಾರದವರು ಅವನನ್ನು ಹಿಡಿಸಿ ಗಲ್ಲಿಗೇರಿಸಿದರು.

ನಿಪಾಣಿಯ ದೇಸಾಯಿ ಸಂತತಿ ಇಲ್ಲದೆ ತೀರಿದ್ದರಿಂದ ಅವನ ರಾಜ್ಯವು ಸರಕಾರಕ್ಕೆ ಸೇರಿತು, ೧೮೪೮. ಇದರಂತೆ ತಾಸಗಾವಿ, ಚಿಂಚಲಿ, ಕಾಗವಾಡಗಳ ಪಟವರ್ಧನರು ಸಂತತಿಯಿಲ್ಲದೆ ತೀರಿದ್ದರಿಂದ ಅವರ ರಾಜ್ಯಗಳೂ ಸರಕಾರಕ್ಕೆ ಸೇರಿದವು.

ಸನ್ ೧೮೫೭ರ ಬಂಡಾಯದ ಕಾಲದಲ್ಲಿ ನರಗುಂದದ ಬಾಬಾ ಸಾಹೇಬನು ಸರಕಾರದ ಮೇಲೆ ಶಸ್ತ್ರ ಹಿಡಿದು, ಮ್ಯಾನ್‌ಸನ್ನನೆಂಬ ಪೋಲಿಟಿಕಲ್ ಏಜಂಟನನ್ನು ಕೊಂದದ್ದರಿಂದ ಸರಕಾರದವರು ಬಾಬಾ ಸಾಹೇಬನನ್ನು ಹಿಡಿದು ಗಲ್ಲಿಗೇರಿಸಿ ಅವನ ಸಣ್ಣ ರಾಜ್ಯವನ್ನು ತಕ್ಕೊಂಡರು.

ಇಂಗ್ಲಿಷ ಸರಕಾರದ ಅಮಲು ಆದ ಬಳಿಕ ಪೋಷ್ಟ ಆಫೀಸುಗಳೂ, ಮೇಲಾದ ಲೈನ ಮಾರ್ಗಗಳೂ, ಹೊಗೆ ಬಂಡಿಗಳೂ, ವೊಂದರ ಹಿಂದೊಂದು ಆಗಿ ವ್ಯಾಪಾರವು ಬಹಳ ಹಬ್ಬಿತು, ಪ್ರಜೆಗಳ ಪ್ರವಾಸಕ್ಕೆ ಬಹಳ ಅನುಕೂಲವಾಯಿತು. ಭೂಮಿಗಳನ್ನು ಅಳಿದು ಕಂದಾಯ ಗೊತ್ತು ಮಾಡಿದ್ದರಿಂದ ವೊಕ್ಕಲತನದವರಿಗೆ ಅಪರಿಮಿತ ಕಲ್ಯಾಣವಾಯಿತು. ಪೋಲೀಸರ ನೇಮಣೂಕು ಆದ್ದರಿಂದ ಪ್ರಜೆಗಳ ಜೀವಿತಕ್ಕೂ ಆಸ್ತಿಗೂ ಭಯವಿಲ್ಲದ ಹಾಗಾಯಿತು. ಇತ್ಯಾದಿ.